
# ಅನುದಿನದ ಆಹಾರ


**November 2018**



Tree - 19
Fruit - 11
Pages - 44
Monthly

Annual Subscription Rs. 100/-
Single Copy Rs. 10/-

# ತಿರುಪತ್ತೂರಿನಲ್ಲಿ ಅಗ್ನಿ ಅಭಿಷೇಕ ಶಿಬಿರ



**ದಿನಾಂಕ: 2018 ನವೆಂಬರ್ 1, 2, 3**

ಗುರುವಾರ, ಶುಕ್ರವಾರ, ಶನಿವಾರ

**ಸ್ಥಳ : ಕ್ರಿಸ್ತಕುಲ ಆಶ್ರಮ, ತಿರುಪತ್ತೂರು**

(ಜೋಲಾರ್ ಪೇಟೆ ಸಮೀಪ)

ರೈಲು: ಬೆಂಗಳೂರು – ಚೆನ್ನೈ ರೈಲು. ಇಳಿಯಬೇಕಾದ ಸ್ಥಳ ಜೋಲಾರ್‌ಪೇಟೆ

ಬಸ್: ಬೆಂಗಳೂರು – ಹೊಸೂರ್ – ಕ್ರಿಷ್ಣಗಿರಿ – ತಿರುಪತ್ತೂರು

ಬೆಂಗಳೂರಿನಿಂದ 140 ಕಿ.ಮೀ. ಗಳಾಗುತ್ತದೆ.

**ನೊಂದಣಿ ಶುಲ್ಕ : ರೂ 200/–**


ಆಶ್ರಮ ತಲುಪಿದ ನಂತರ ಹೆಸರನ್ನು ನೊಂದಾಯಿಸಿಕೊಳ್ಳಿರಿ.
ಎರಡು ಹೊತ್ತು ಊಟದ ವ್ಯವಸ್ಥೆ ಇರುತ್ತದೆ

## ಪುಸ್ತಕಗಳನ್ನು ಓದಿರಿ ಹಾಗು ಉಡುಗೊರೆ ನೀಡಿರಿ....

ಅನುದಿನದ ಆಹಾರ ಸಂಸ್ಥೆಯು 260 ಆಧ್ಯಾತ್ಮೀಕ ಪುಸ್ತಕಗಳನ್ನು ಪ್ರಕಟಿಸಿದೆ.

ನೀವೂ ರೂ. 1000/- ಗಳನ್ನು ನಮಗೆ ಕಳುಹಿಸುವುದಾದರೆ

ನಾವು ನಿಮಗೆ ಸೇವೆ ಮಾಡಲು
ಅನುಕೂಲವಾಗತಕ್ಕ ನಾನಾ ಪುಸ್ತಕಗಳನ್ನು
ರಿಯಾಯಿತಿ ದರದಲ್ಲಿ ಕಳುಹಿಸುತ್ತೇವೆ



**ಒಂದೊಂದು ಪುಸ್ತಕವು = ಒಂದು ಸೇವಕರಿಗೆ/ಮಿಷನರಿಗೆ ಸಮ**

*ವಿವರಗಳಿಗಾಗಿ ನಮ್ಮ ಕಛೇರಿಯನ್ನು ಸಂಪರ್ಕಿಸಿರಿ*

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

**Account Name: ANUDHINADA AHARA**

**SBI Bank: 34706509264 IFSC Code: SBIN0005778**

# ಅನುದಿನದ ಆಹಾರ

## ANUDHINADA AHARA - November 2018

ನವೆಂಬರ್ – 2018

ಮರ 19 ಹಣ್ಣು 11 **Tree 19 Fruit 11**

## ಒಬ್ಬರನ್ನೂ ಗಾಯಪಡಿಸದಿರಿ!

ಇಂದು ನಿಮ್ಮ ಹೃದಯದಲ್ಲಿ ಒಂದು ದೃಢವಾದ ತೀರ್ಮಾನವನ್ನು ಮಾಡಿಕೊಳ್ಳಿರಿ. “ಭೂಮಿಯಲ್ಲಿ ನಾನು ಜೀವಿಸುವ ದಿನವೆಲ್ಲಾ ನಾನು ಒಬ್ಬರನ್ನೂ ಗಾಯಪಡಿಸುವದಿಲ್ಲ. ಮಾತಿನಿಂದಾಗಲಿ, ಕ್ರಿಯೆಯಿಂದಾಗಲಿ ಯಾರನ್ನೂ ನೋಯಿಸುವದಿಲ್ಲ”. ಇಂದು ವಿಶ್ವಾಸಿಗಳೂ ಸಹ, ದೇವರ ಪ್ರೀತಿಯಿಲ್ಲದವರಾಗಿ, ಒಬ್ಬರನ್ನೊಬ್ಬರು ಗಾಯಪಡಿಸಿ ಮಾತನಾಡುವವರಾಗಿದ್ದಾರೆ. ಬರೆದು ಬಿಡುವವರಾಗಿದ್ದಾರೆ. ಒಂದು ವೇದಿಕೆಯಲ್ಲಿ ದೇವಸೇವಕರೊಂದಿಗೆ ಕುಳಿತಿದ್ದೆನು, ವೇದಿಕೆಯಲ್ಲಿದ್ದಂಥ ಒಬ್ಬರು, ಒಬ್ಬ ಸೇವಕರನ್ನು ಬಹಳವಾಗಿ ನೋಯಿಸಿ ಮಾತನಾಡಿದರು. ಬಾಧಿಸಲ್ಪಟ್ಟ ವ್ಯಕ್ತಿಯ ಮುಖವು ಬೇಸರದಿಂದ ತುಂಬಿತ್ತು. ನನ್ನಿಂದ ಅದನ್ನು ಸಹಿಸಲಾಗಲಿಲ್ಲ. ಮನೆಗೆ ಹೋದ ಕೂಡಲೆ ಆ ವ್ಯಕ್ತಿಗೆ ಫೋನ್ ಕರೆ ಮಾಡಿದೆನು. ಅವರು ಬಹಳವಾಗಿ ಅತ್ತರು. ಕರುಣೆಯುಳ್ಳ ಸಮಾರ್ಯದವನ ಹಾಗೆ ನಾನು ಆತನ ಗಾಯದಲ್ಲಿ ಎಣ್ಣೆಯನ್ನೂ, ದ್ರಾಕ್ಷಾರಸವನ್ನೂ ಹೊಯ್ದೆನು.

ಗಾಯಪಡಿಸುವದು ಕಳ್ಳರ ಕೆಲಸವಾಗಿದೆ. ಸೈತಾನನ ಕೆಲಸವಾಗಿದೆ. ಯೆರೂಸಲೇಮಿನಿಂದ ಯೆರಿಕೋವಿಗೆ ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ಕಳ್ಳರು ಗಾಯಪಡಿಸಿದರು. ಎಷ್ಟರವರೆಗೂ ಗೊತ್ತಾ? “ಅರೆ ಜೀವವಾಗುವವರೆಗೂ, ಇನ್ನು ಮರಣವೇ” ಎಂಬ ಪರಿಸ್ಥಿತಿಯವರೆಗೂ ಗಾಯಪಡಿಸಿದರು. ಆ ಅರೆಜೀವದಲ್ಲಿದ್ದಂಥ ಮನುಷ್ಯನನ್ನು ಲೇವಿಯರೂ, ಯಾಜಕರೂ ನೋಡಿದರು. ಆದರೂ ಗಾಯಗೊಂಡವನಿಗೆ ಸಹಾಯ ಮಾಡಲು ಯಾರೂ ಮುಂಬರಲಿಲ್ಲ. ನೋಡಿದರೂ, ನೋಡದ ಹಾಗೆ ವಾರೆಯಾಗಿ ಹೋದರು. ಒಂದು ವೇಳೆ ಅವರು ಅದಕ್ಕೆ ಸಾವಿರಾರು ಕಾರಣಗಳನ್ನು ಹೇಳಬಹುದು. ಆದರೆ ಕರ್ತನೋ ಎಂದಿಗೂ ಗಾಯಪಡಿಸುವವರ ಪಕ್ಷದಲ್ಲಿ ನಿಲ್ಲುವದಿಲ್ಲ. ಕನಿಕರದಿಂದ ಗಾಯಗೊಂಡವರ ಸಮೀಪಕ್ಕೆ ಬರುವನು. ಅವರನ್ನು ಕರುಣಿಸಿ, ಅವರ ಪರವಾಗಿ ಮಾತನಾಡುವನು. ಗಾಯಗಳಲ್ಲಿ ಎಣ್ಣೆಯನ್ನೂ, ದ್ರಾಕ್ಷಾರಸವನ್ನೂ ಹೊಯ್ಯುವನು.

ಒಬ್ಬ ಶ್ರೀಮಂತನ ಮಗಳು, ಒಬ್ಬ ಬಡ ವ್ಯಕ್ತಿಯ ಮೇಲೆ ಪ್ರೀತಿಯಿಟ್ಟು ಓಡಿ ಹೋಗಿ ಮದುವೆ ಮಾಡಿಕೊಂಡಳು. ಇದರಿಂದ ಹೆತ್ತವರ ದ್ವೇಷಕ್ಕೆ ಗುರಿಯಾದಳು.

ಆದರೆ ಗಂಡನು ಹುಡುಗಾಟವಾಗಿ ಅವಳನ್ನು ಗಾಯಪಡಿಸಿ, "ಹೊಟ್ಟೆಯಲ್ಲಿರುವ ಮಗು ನನ್ನಿಂದಲೇ ಉಂಟಾಯಿತಾ? ಎಂದು ಸಂದೇಹವಾಗಿದೆ" ಎಂದು ಹೇಳಿಬಿಟ್ಟನು. ದರಿದ್ರವನ್ನು, ಬಡತನವನ್ನು ಹಸಿವೆಯನ್ನು ಸಹಿಸಿಕೊಂಡ ಆ ಹೆಣ್ಣಿಗೆ ಈ ಅಪವಾದ ಹೊರಿಸಿದ್ದನ್ನು ಸಹಿಸಲಾಗಲಿಲ್ಲ. ಮನಮುರಿದವಳಾಗಿ, ತನಗೆ ತಾನೇ ಬೆಂಕಿಯಿಟ್ಟುಕೊಂಡು ಆತ್ಮಹತ್ಯೆ ಮಾಡಿಕೊಂಡಳು. ನಂತರ ಗಂಡನು ತಾನು ಹೇಳಿದ ಮಾತಿಗಾಗಿ ಬೇಸರಪಟ್ಟನು. ಆದರೂ ವರ್ಷಾನುಗಟ್ಟಲೆ ಅತ್ತು ಗೋಳಾಡಿದರೂ, ಸತ್ತವರು ಹಿಂದಿರುಗಿ ಬರುವರೇ?

ಲೋಕಪೂರ್ತಿಯಾಗಿ ಗಾಯಭರಿತ ಜನರನ್ನು ಕಾಣಬಹುದು. ಹೃದಯದ ಅಂತರಾಳದಲ್ಲಿ ಆಳವಾದ ಗಾಯಗಳು ತಮ್ಮ ಜೀವಿತದಲ್ಲಿ ನಡೆದ ಅನೀತಿ, ದ್ರೋಹಗಳು, ದುಃಖಗಳನ್ನು ಸಹಿಸಲಾಗದೆ, ನೊಂದು ಹೋಗಿ, ಗಾಯಗಳೊಂದಿಗೆ ಜನರು ಜೀವಿಸುತ್ತಿದ್ದಾರೆ. ಆದರೆ ನಮ್ಮ ಕರ್ತನಾದ ಯೇಸುಕ್ರಿಸ್ತನೋ, ಗಾಯಗಳನ್ನು ಗುಣಪಡಿಸುವ ದೇವರಾಗಿದ್ದಾನೆ. ಗಾಯಗೊಂಡ ಹೃದಯಗಳನ್ನು ಹುಡುಕಿ ಬಂದು ಸಂತೈಸಿ, ಗುಣಪಡಿಸುವ ದೇವರಾಗಿದ್ದಾನೆ. ಇಂದು ಕರ್ತನು ನಿಮಗೆ ಕರುಣೆಯುಳ್ಳ ಸಮಾರ್ಯದವನ ಸೇವೆಯನ್ನು ಕೊಡುತ್ತಾನೆ. "ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ, ಯೆರೂಸಲೇಮಿನ ಸಂಗಡ ಹೃದಯಂಗಮವಾಗಿ ಮಾತಾಡಿರಿ; ಅದಕ್ಕೆ ಗಡು ತೀರಿತು, ವಿಧಿಸಿದ ದೋಷ ಫಲವೆಲ್ಲಾ ನೆರವೇರಿತು, ಅದರ ಎಲ್ಲಾ ಪಾಪಗಳಿಗೂ ಯೆಹೋವನ ಕೈಯಿಂದ ಎರಡರಷ್ಟು ಶಿಕ್ಷೆಯಾಯಿತು ಎಂದು ಆ ನಗರಿಗೆ ಕೂಗಿ ಹೇಳಿರಿ." (ಯೆಶಾ.40:1,2) ಎಂದು ನುಡಿಯುತ್ತಾನೆ.

ಗಾಯಗೊಂಡ ಸೇವಕರಿಗಾದರೂ ಸರಿ, ವಿಶ್ವಾಸಿಗಳಿಗಾದರೂ ಸರಿ, ಒಬ್ಬ ವ್ಯಕ್ತಿಗಾದರೂ ಸರಿ, ನಿಮ್ಮ ಆಂತರ್ಯದಿಂದ ಹೊರಡುವ ಪ್ರೀತಿಯು ಅವರನ್ನು ಸಂತೈಸುವಂಥದ್ದಾಗಿರಲಿ. ಕ್ರಿಸ್ತನ ಸೇವೆಯು ಸಂತೈಸುವ ಸೇವೆಯಾಗಿದೆ. ಈ ಭೂಮಿಯಲ್ಲಿ ಆತನು ಜೀವಿಸಿದ ದಿನವೆಲ್ಲಾ ಜನರನ್ನು ಸಂತೈಸಿದನು. ಅನೇಕರು ಸೈತಾನನಿಂದ ಗಾಯಗೊಂಡವರಾಗಿದ್ದರು. ದಂಡುಗಳ ಪೀಡಿತನಾಗಿದ್ದ ಮನುಷ್ಯನು, ಸಮಾಧಿಗಳಲ್ಲಿ ಜೀವಿಸುತ್ತಾ, ತನ್ನ ಶರೀರವನ್ನು ತಾನೇ ಗಾಯಪಡಿಸಿಕೊಂಡನು. ಆ ಒಬ್ಬನಿಗಾಗಿ ಯೆಸುಕ್ರಿಸ್ತನು, ಹಡಗಿನಲ್ಲಿ ಪ್ರಯಾಣ ಮಾಡಿ, ಇನ್ನೊಂದು ದಡಕ್ಕೆ ಬಂದನು. ಪಿಶಾಚಿಗಳನ್ನು ಓಡಿಸಿ ಆ ಮನುಷ್ಯನನ್ನು ಗುಣಪಡಿಸಿದನು, ಸಂತೈಸಿದನು.

ಯೇಸುಕ್ರಿಸ್ತನು ಈ ಲೋಕವನ್ನು ಬಿಟ್ಟು ಹೋಗುವಾಗ ಸಹಾಯಕನಾದ ಪವಿತ್ರಾತ್ಮನನ್ನು ನಮಗೆ ವಾಗ್ದಾನ ಮಾಡಿಬಿಟ್ಟು ಹೋಗಿದ್ದಾನೆ. "ನಾನು ತಂದೆಯನ್ನು ಕೇಳಿಕೊಳ್ಳುವೆನು, ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು" (ಯೋಹಾ.14:16). ಆತನ ವಾಗ್ದಾನವೇನು? "ತಾಯಿ ಮಗನನ್ನು ಸಂತೈಸುವ ಪ್ರಕಾರ ನಾನು ನಿಮ್ಮನ್ನು ಸಂತೈಸುವೆನು; ಯೆರೂಸಲೇಮಿನಲ್ಲೇ ನಿಮಗೆ ದುಃಖ ಶಮನವಾಗುವದು" (ಯೆಶಾ.66:13). ಎಲ್ಲಾ ಸ್ಥಳಗಳಲ್ಲಿಯೂ ವೇದನೆಗಳೂ, ದ್ರೋಹಗಳೂ ತುಂಬಿರುವಾಗ, ನಾವು ಓಡಿ ಬಂದು ವಿಶ್ರಾಂತಿಯನ್ನು ಹೊಂದುವ, ಒಂದು ಸುಂದರವಾದ ಸ್ಥಳ ಯಾವದೆಂದರೆ, ಅದು ಯೇಸುಕ್ರಿಸ್ತನ ಪಾದಗಳೇ.

ಯೇಸುಕ್ರಿಸ್ತನು ಈ ಭೂಮಿಯಲ್ಲಿದ್ದಾಗ, ತನ್ನ ಸ್ವಂತ ಜನರಿಂದ ಗಾಯಗೊಂಡವನಾಗಿಯೇ ಇದ್ದನು. ಆ ಕಾಲದಲ್ಲಿದ್ದಂಥ ಫರಿಸಾಯರೂ, ಸದ್ದುಕಾಯರೂ, ಶಾಸ್ತ್ರಿಗಳೂ ತಮ್ಮನ್ನು ಭಕ್ತಿವಂತರ ಹಾಗೆ ತೋರಿಸಿಕೊಂಡು ತಮ್ಮ ಮಾತುಗಳಿಂದ ಯೇಸುವನ್ನು ಗಾಯಪಡಿಸಿದರು. ಈತನು "ಭೋಜನಪ್ರಿಯನು", "ಸುಂಕದವನು, ಪಾಪಿಗಳ ಸ್ನೇಹಿತನು" ಎಂದರು. ಕಲ್ವಾರಿ ಶಿಲುಬೆಯಲ್ಲಿ, ಆತನಿಗೆ ಮುಳ್ಳಿನ ಕಿರೀಟವನ್ನು ಧರಿಸಿ, ಕೋಲಿನಿಂದ ಹೊಡೆದರು. ಶಿಲುಬೆಯಲ್ಲಿ ಹಾಕಿದ ನಂತರವೂ ಆತನನ್ನು ಬಿಡಲಿಲ್ಲ. "ನೀನು ದೇವರ ಮಗನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ, ಮತ್ತೊಬ್ಬರನ್ನು ರಕ್ಷಿಸದವನು, ತನ್ನನ್ನು ರಕ್ಷಿಸಿಕೊಳ್ಳಲಾರನು" ಎಂದು ಹಂಗಿಸಿದರು.

ಈ ದಿನಗಳಲ್ಲಿ ಭಾರತದಲ್ಲಿ ಸೇವಕರೂ, ವಿಶ್ವಾಸಿಗಳೂ ಹಲವಾರು ಅನ್ಯಜನಾಂಗದವರ ಸಂಸ್ಥೆಗಳ ಮೂಲಕ ಕ್ರೂರವಾಗಿ ಹಿಂಸೆಗೊಳಗಾಗುತ್ತಿದ್ದಾರೆ. ಕ್ರೈಸ್ತಮಾರ್ಗವನ್ನು ನಾಶಮಾಡಬೇಕು, ಕ್ರೈಸ್ತ ಆಲಯಗಳನ್ನು ಮುಚ್ಚಬೇಕು ಎಂಬದಾಗಿ ಬಹಳ ವೇಗವಾಗಿ ಕಾರ್ಯ ನಡಿಸುತ್ತಿದ್ದಾರೆ. ಇದರ ಮಧ್ಯದಲ್ಲಿ ಕ್ರೈಸ್ತ ಸೇವಕರು ಇತರ ದೇವರ ಸೇವಕರ ವಿರುದ್ಧವಾಗಿ, ಹೊಟ್ಟೆಕಿಚ್ಚಿನಿಂದ ದೂರುಗಳನ್ನು ಹೊರಿಸುತ್ತಾ ಗಾಯಪಡಿಸುವವರಾಗಿದ್ದಾರೆ. ಕುರಿ ಚರ್ಮಗಳನ್ನು ಹೊದ್ದ ತೋಳಗಳ ಹಾಗಿದ್ದು, ಉತ್ತಮವಾದ ನಂಬಿಗಸ್ಥರಾದ ಸೇವಕರನ್ನು ಕಡಿದು ಹಿಂಸಿಸುವವರಾಗಿದ್ದಾರೆ. ನಾವೆಲ್ಲರೂ ನಿಂತಿರುವದು ದೇವರ ಕೃಪೆಯಿಂದಲೇ. ಎಂದಿಗೂ ಸೈತಾನನ ಸೇವೆಯನ್ನು ಮಾಡುವವರಾಗಿ, ಇತರರನ್ನು ನೋಯಿಸಿ, ಗಾಯಪಡಿಸದೆ, ಶಾಂತಿಯಿಂದಲೂ, ತಾಳ್ಮೆಯಿಂದಲೂ ದೇವಮಕ್ಕಳ ಗಾಯಗಳನ್ನು ಗುಣಪಡಿಸಿರಿ. "ಕ್ರಿಸ್ತಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ" (ಫಿಲಿ.2:5). ದೇವರ ಮಕ್ಕಳನ್ನು ಗಾಯಪಡಿಸಿ, ದಂಡನೆಯಿಲ್ಲದೆ, ಶಾಪವಿಲ್ಲದೆ ಹೋದವರು ಒಬ್ಬರೂ ಇಲ್ಲ. ಕೆಲವರು ವ್ಯರ್ಥವಾಗಿ ಇತರರ ಮೇಲೆ ತಪ್ಪುಹೊರಿಸಿ, ತಮ್ಮ ಮೇಲೆಯೂ ತಮ್ಮ ಮಕ್ಕಳ ಮೇಲೆಯೂ ದೇವರ ಕೋಪಾಗ್ನಿಯನ್ನು ಬರಮಾಡಿಕೊಳ್ಳುವವರಾಗಿದ್ದಾರೆ. ಒಬ್ಬ ವ್ಯಕ್ತಿಯು ಬರೆಯುವ ಅಥವಾ ಮಾತನಾಡುವ ಎಲ್ಲಾ ಮಾತುಗಳಿಗೂ ನ್ಯಾಯತೀರ್ಪಿನ ದಿನದಲ್ಲಿ ಕರ್ತನಿಗೆ ಲೆಕ್ಕ ಕೊಡಲೇಬೇಕು. ಇತರರನ್ನು ಗಾಯಪಡಿಸುವ, ನೋಯಿಸುವ ಮಾತುಗಳ ಬಗ್ಗೆ ಕರ್ತನು ಖಂಡಿತವಾಗಿಯೂ ನಿಮ್ಮ ಬಳಿ ಲೆಕ್ಕ ಕೇಳುವನು.

ಕರ್ತನು ನಿಮಗೆ ಕೃಪೆಯಾಗಿ ಕೊಟ್ಟಿರುವ ಮಾತನಾಡುವ ವರವನ್ನು ಎಂದಿಗೂ ಇತರರನ್ನು ಗಾಯಪಡಿಸಲು ಉಪಯೋಗಿಸಬೇಡಿ. "ಶಿಷ್ಟರ ನಾಲಿಗೆ ಚೊಕ್ಕ ಬೆಳ್ಳಿ; ದುಷ್ಟನ ಹೃದಯ ಹುಲ್ಕಡ್ಡಿ; ಶಿಷ್ಟರ ಭಾಷಣ ಬಹುಜನ ಪೋಷಣ". (ಜ್ಞಾನೋ.10:20,21). ನೀವು ನಿಮ್ಮ ಹೃದಯವನ್ನು ದೇವರ ಪ್ರೀತಿಯಿಂದ ತುಂಬಿಸಿಕೊಳ್ಳುವಿರಾದರೆ, ನಿಮ್ಮ ಬಾಯಿಂದ ಇತರರಿಗೆ ಸಂತೈಸುವ, ಬಲಪಡಿಸುವ, ಗುಣಪಡಿಸುವ ಮಾತುಗಳೇ ಬರುವದು. ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದಲ್ಲವೇ (ಮತ್ತಾ.12:34). ಪ್ರಿಯರೇ, ನಿಮ್ಮ ಕಣ್ಣುಗಳನ್ನೆತ್ತಿ, ಹಲವಾರು ರೀತಿಯಲ್ಲಿ ಗಾಯಪಟ್ಟು ಗೋಳಾಡುತ್ತಿರುವ ದೇವಸೇವಕರನ್ನು, ಕನಿಕರದಿಂದ ನೋಡಿರಿ. ನಿಮ್ಮ ಬಾಯ ಮಾತುಗಳು ಅವರನ್ನು ಸಂತೈಸುವ, ಬಲಪಡಿಸುವ ಔಷಧಿಯಾಗಿರಲಿ!

# ಏಳು ಮಂದಿಯ ಪ್ರಾರ್ಥನೆ!

1. ಮನೋವ್ಯಥೆಯಿಂದ ಮಾಡಿದ ಪ್ರಾರ್ಥನೆ – ಹನ್ನಳು (1 ಸಮು 1:10,16)
2. ಬಲವಂತವಾಗಿ ಹೋರಾಡಿ ಮಾಡಿದಂಥ ಪ್ರಾರ್ಥನೆ – ಯಾಕೋಬ (ಆದಿ. 32,24,28, ಹೋಶೇ. 12:3,4)
3. ನಿರೀಕ್ಷೆಯಿಂದ ಮಾಡಿದ ಪ್ರಾರ್ಥನೆ – ದಾನಿಯೇಲನು (ದಾನಿ 9:3–23, 10:12,13)
4. ಆಸಕ್ತಿಯಿಂದ, ಅರ್ಥಪೂರ್ವಕವಾಗಿ ಮಾಡಿದ ಪ್ರಾರ್ಥನೆ – ಎಲೀಯನು (ಯಾಕೋ. 5:17)
5. ಬೇಸರಗೊಳ್ಳದೆ ಮಾಡಿದ ಪ್ರಾರ್ಥನೆ – ಬಡವಿಧವೆ (ಲೂಕ. 18:1–7)
6. ಪಾಪಿಗಳಿಗಾಗಿ ಮಾಡಿದ ಪ್ರಾರ್ಥನೆ – ಯೇಸುಕ್ರಿಸ್ತನು (ಲೂಕ. 23:34, ಇಬ್ರಿ 5:7–10)
7. ವಿಶ್ವಾಸಿಗಳಿಗಾಗಿ ಮಾಡಿದ ಪ್ರಾರ್ಥನೆ – ಅಪೊ. ಪೌಲನು (ಎಫೆ. 1:17,19, ಕೊಲೊ. 1:9–11)

# ಸ್ನಾನಿಕನಾದ ಯೋಹಾನನು!

ಸ್ನಾನಿಕನಾದ ಯೋಹಾನನು ಜಕರೀಯನ ಮಗ, ತಾಯಿ ಎಲಿಜಬೇತ್, ಇಬ್ಬರೂ ಯಾಜಕ ವರ್ಗಕ್ಕೆ ಸೇರಿದವರು. ಯೇಸುಸ್ವಾಮಿಯ ತಾಯಿಯೂ, ಯೋಹಾನನ ತಾಯಿಯೂ, ಬಂಧುಗಳು ಇವನ ಹುಟ್ಟನ್ನು ಕುರಿತು ದೂತನ ಮುಖಾಂತರ ತಿಳಿಸಲ್ಪಟ್ಟಿತು. ಇವನು ಹುಟ್ಟಿದಂದಿನಿಂದ ನಜರೇಯ ಪ್ರತಿಷ್ಠೆಗೆ ಒಳಪಟ್ಟವನಾಗಿದ್ದನು. ಇವನು ಬೆಳೆದ ನಂತರ ಅರಣ್ಯವಾಸಿಯಾದನು.

ಕರ್ತನ ವಾಕ್ಯವು ಇವನಿಗೆ ಉಂಟಾದದ್ದರ ನಿಮಿತ್ತ, ಇವನು ಪ್ರವಾದಿ ಎಂದು ತಿಳಿದು ಜನರು ಅವನೆಡೆಗೆ ಬರತೊಡಗಿದರು. ಇವನು ತನ್ನ ಬಳಿ ಬರುತ್ತಿದ್ದವರನ್ನು ಕುರಿತು, ದೇವರ ಕಡೆಗೆ ತಿರುಗಿಕೊಂಡು ಒಳ್ಳೇ ಫಲವನ್ನು ಕೊಡುವವರಾಗಬೇಕೆಂದು ಬೋಧಿಸಿದನು. ಇದನ್ನು ಅಂಗೀಕರಿಸಿಕೊಂಡವರಿಗೆ ದೀಕ್ಷಾಸ್ನಾನ ಕೊಟ್ಟನು. ಆ ದಿನಗಳಲ್ಲಿ ಯೇಸುಕ್ರಿಸ್ತನೂ ಸಹ ಒಂದು ಯೊರ್ದನ್ ಹೊಳೆಯಲ್ಲಿ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು. ಆ ಸಮಯದಲ್ಲಿ ಆತನನ್ನು ಕುರಿತು ಪರಲೋಕದ ತಂದೆ ಸಾಕ್ಷಿಕೊಟ್ಟು, "ಈತನು ಪ್ರಿಯನಾಗಿರುವ ನನ್ನ ಮಗನು" ಎಂದನು. ಯೋಹಾನನು ಕಟ್ಟುನಿಟ್ಟಾದ ಸನ್ಮಾರ್ಗ ಜೀವಿತವನ್ನು ಅನುಸರಿಸಿದನು. ಆದ್ದರಿಂದಲೇ ಅವನು ಹೆರೋದನ ತಪ್ಪು ದೋಷಗಳನ್ನು ಎತ್ತಿ ತೋರಿಸಿದನು. ಕೆಲವು ಕಾಲದ ನಂತರ ಹೆರೋದಿಯಳ ಪ್ರೇರಣೆಯಿಂದ ಹೆರೋದನು ಅವನ ಶಿರಚ್ಛೇದನ ಮಾಡಿಸಿದನು!

## ಯೋಬನ ವ್ಯಥೆಗಳು

ಯೋಬನಿಗೆ ಮನೆಯವರ ವಿಷಯದಲ್ಲಿ ಮತ್ತು ಆಸ್ತಿಪಾಸ್ತಿಗಳ ವಿಷಯದಲ್ಲಿ ಉಂಟಾದ ವೇದನೆಗಳು :

1. ಎತ್ತುಗಳು, ಕತ್ತೆಗಳು, ಒಂಟೆಗಳು ಶೆಬದವರಿಂದ ಹೊಡೆದುಕೊಂಡು ಹೋಗಲ್ಪಟ್ಟಿತು (ಯೋಬ. 1:14–17).
2. ಆಳುಗಳು ಕತ್ತಿಯಿಂದ ಸಂಹರಿಸಲ್ಪಟ್ಟರು (ಯೋಬ. 1:15).
3. ದೇವರ ಬೆಂಕಿ ಆಕಾಶದಿಂದ ಬಿದ್ದು ಕುರಿಗಳನ್ನೂ, ಆಳುಗಳನ್ನೂ ದಹಿಸಿ ನುಂಗಿ ಬಿಟ್ಟಿತು (ಯೋಬ. 1:16).
4. ಬಿರುಗಾಳಿಯು ಮನೆಯ ಮೇಲೆ ಬೀಸಿ, ಅವನ ಕುಮಾರರು, ಕುಮಾರ್ತೆಯರು ಮನೆಯ ಕುಸಿತದಲ್ಲಿ ಸತ್ತುಹೋದರು (ಯೋಬ. 1:18).

## ಯೋಬನ ಶರೀರದಲ್ಲಿ ವೇದನೆಗಳು

1. ಯೋಬನ ಅಂಗಾಲು ಮೊದಲುಗೊಂಡು, ನಡುನೆತ್ತಿಯವರೆಗೂ ಕೆಟ್ಟಕುರುಗಳು ಹುಟ್ಟಿ ಬಾಧಿಸಿದವು (ಯೋಬ.2:7).
2. ಹುಳಗಳೂ ಮಣ್ಣು ಹಕ್ಕಳೆಗಳೂ ಅವನ ಮಾಂಸವನ್ನು ಮುಸುಕಿದವು (ಯೋಬ.7:5).
3. ಅವನ ಚರ್ಮವು ಕರಿದಾಗಿ ಉದುರಿದವು, ಅವನ ಎಲುಬುಗಳು ತಾಪದಿಂದ ಬೆಂದವು (ಯೋಬ.30:30).
4. ಅವನ ಮುಖವು ಕೆಂಪಾಗಿ ಹೋಗಿ, ರೆಪ್ಪೆಯ ಮೇಲೆ ಮರಣಾಂಧಕಾರವು ಕವಿದಿತ್ತು (ಯೋಬ.16:16).
5. ಅವನ ಎಲುಬು ಚರ್ಮಕ್ಕೂ ಮಾಂಸಕ್ಕೂ ಅಂಟಿಕೊಂಡಿತ್ತು (ಯೋಬ.19:20).

## ಯೋಬನ ಮನಸ್ಸು ಮತ್ತು ಆತ್ಮದ ವೇದನೆಗಳು

1. ಮನನೊಂದವನಾಗಿದ್ದನು, ಮರಣವನ್ನು ಹಾರೈಸಿದನು, ನಂಬಿಕೆಯಿಲ್ಲದವನಾಗಿದ್ದನು, ಒಡೆದ ಆತ್ಮದೊಂದಿಗಿದ್ದನು (3:20,21, 7:3,6,15, 17:1).
2. ಶಾಂತಿಯೂ, ವಿಶ್ರಾಂತಿಯೂ ಉಪಶಮನವೂ ಇಲ್ಲದವನಾಗಿದ್ದನು (3:26).
3. ನಿದ್ರೆಯಿಲ್ಲದವನಾಗಿ, ಬೆದರಿಸುವ ಸ್ವಪ್ನಗಳಿಂದಲೂ, ಭಯಾನಕ ದರ್ಶನಗಳಿಂದಲೂ ಬಳಲುತ್ತಿದ್ದನು (7:4,14).
4. ಗೆಳೆಯರ ಗೇಲಿಗೂ, ಹಾಸ್ಯಕ್ಕೂ ಒಳಗಾದನು (12:4).
5. ಅವನ ಉದ್ದೇಶಗಳೂ, ಮನೋಗತಗಳೂ ಭಂಗವಾದವು (17:11).
6. ಅವನ ಹೆಂಡತಿ, ಬಂಧುಗಳು ಆಳುಗಳು ಸ್ನೇಹಿತರೆಲ್ಲರಿಗೂ ಅನ್ಯನಾಗಿ ಕಾಣಲ್ಪಟ್ಟನು (19:13–17).
7. ಅವನ ಮಾನವು ಗಾಳಿಯಂತೆ ಹೊಡೆದುಕೊಂಡು ಹೋಯಿತು (30:15).

# ಕ್ಷಮೆ ಕೇಳುವದನ್ನು ಅಲ್ಪವೆಂದೆಣಿಸಬೇಡ!

ಎಡಿನ್‌ಪಾರ್ಕ್ ಎಂಬ ಸ್ಥಳದಲ್ಲಿ ಸ್ಟುವಾರ್ಟ್ ಬ್ಲಾಕೀ ಎಂಬ ಹೆಸರುಳ್ಳ ಒಬ್ಬ ಉಪಾಧ್ಯಾಯರಿದ್ದರು. ಒಮ್ಮೆ ಇವರು ತಮ್ಮ ತರಗತಿಯಲ್ಲಿ ವಿದ್ಯಾರ್ಥಿಗಳು ಓದುತ್ತಿರುವದನ್ನು ನೋಡುತ್ತಾ ಇದ್ದರು. ಒಬ್ಬ ವಿದ್ಯಾರ್ಥಿಯು ತನ್ನ ಎಡಗೈಯಲ್ಲಿ ಪುಸ್ತಕವನ್ನು ಇಟ್ಟುಕೊಂಡು ಓದುತ್ತಿದ್ದನು. ಮಿಸ್ಟರ್ ಬ್ಲಾಕೀ ಅವರು ಬಹಳ ಗಡಸಾಗಿ ಅವನನ್ನು ನೋಡಿ, ನಿನ್ನ ಪುಸ್ತಕವನ್ನು ಬಲಗೈಯಲ್ಲಿ ಇಟ್ಟುಕೋ ಎಂದು ಹೇಳಿದರು. ಇದನ್ನು ಕೇಳಿದ ಆ ವಿದ್ಯಾರ್ಥಿ ಮತ್ತು ತರಗತಿಯಲ್ಲಿದ್ದ ಎಲ್ಲಾ ವಿದ್ಯಾರ್ಥಿಗಳು ಸ್ತಬ್ಧರಾದರು. ನಿಂತಿದ್ದ ವಿದ್ಯಾರ್ಥಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ತೋರಿಸಿದನು. ಅದು ಮಣಿಕಟ್ಟಿನವರೆಗೆ ಮಾತ್ರವೇ ಇತ್ತು. ಹೌದು ಅವನಿಗೆ ಬಲಗೈಯೇ ಇಲ್ಲ.

ಇದನ್ನು ಕಂಡ ಬ್ಲಾಕೀಯ ಹೃದಯವು ಒಡೆದಿತು. ಅವರು ಕಣ್ಣೀರು ಬಿಟ್ಟರು. ಅವರು ಮೆಲ್ಲನೆ ಆ ವಿದ್ಯಾರ್ಥಿಯ ಬಳಿ ಹೋದರು, ಅವನ ಹೆಗಲ ಮೇಲೆ ಕೈಯಿಟ್ಟು, "ನನ್ನನ್ನು ಕ್ಷಮಿಸಿ ಬಿಡು" ಎಂದರು. ಅವರ ನಮ್ರತೆಯು ಆ ಅಂಗವಿಕಲನಾಗಿದ್ದ ವಿದ್ಯಾರ್ಥಿಯನ್ನು ಸ್ಪರ್ಶಿಸಿತು.

ನಂತರ ಒಂದು ದಿನ ಅವನು ಒಂದು ಕೂಟದಲ್ಲಿ ತನ್ನ ಸಾಕ್ಷಿಯನ್ನು ಹಂಚುವಾಗ, ನನ್ನನ್ನು ದೇವರ ಬಳಿ ಮಾರ್ಗನಡಿಸಿದ್ದು ನನ್ನ ಉಪಾಧ್ಯಾಯರು ಮಿಸ್ಟರ್ ಬ್ಲಾಕೀಯೇ. ಅವರು ನನ್ನ ಬಳಿ ಕ್ಷಮೆ ಕೇಳಿದಾಗಲೇ ನನ್ನ ಹೆಚ್ಚಾಗಿ ಆಕರ್ಷಿಸಿದರು. ಅನಂತರ ಅವರು ನನಗೆ ಯೇಸುಕ್ರಿಸ್ತನ ಪ್ರೀತಿಯನ್ನು ತಿಳಿಸಿದಾಗ, ನಾನು ನನ್ನ ಜೀವಿತವನ್ನು ಯೇಸುಕ್ರಿಸ್ತನಿಗೆ ಒಪ್ಪಿಸಿಕೊಟ್ಟೆನು. ಅವರು ಕ್ಷಮೆ ಮರುಕ್ಷಣವೇ ಕೇಳಿದ ನನ್ನನ್ನು ದೇವರ ಕಡೆಗೆ ತಿರುಗಿಸಲು ಕಾರಣವಾಯಿತು ಎಂದನು.

ಪ್ರಿಯರೇ, ತಪ್ಪನ್ನು ಒಪ್ಪಿಕೊಂಡು ಕ್ಷಮೆ ಕೇಳುವದು ಬಲಹೀನತೆಯ ಗುರುತಲ್ಲ. ಕೀಳಾದ ಸಂಗತಿಯಲ್ಲ. ಅದುವೇ ನಿಜವಾದ ಬಲದ ಗುರುತಾಗಿದೆ ಎಂಬುದನ್ನು ಎಂದಿಗೂ ಮರೆಯಬೇಡಿರಿ! ಕ್ಷಮೆ ಕೇಳುವದರಿಂದ ನಮ್ಮ ಮನಸ್ಸು ಹಗುರವಾಗುತ್ತದೆ. ಇನ್ನೊಂದು ಸಾರಿ ಆ ತಪ್ಪನ್ನು ಮಾಡದಂತೆ ನಮ್ಮನ್ನು ಕಾಪಾಡುತ್ತದೆ.

"ಒಬ್ಬರಿಗೊಬ್ಬರು ಕ್ಷಮಿಸುವವರಾಗಿಯೂ ಇರ್ರಿ" (ಎಫೆ. 4:32). ನೀವು ಸಂತೋಷದಿಂದ ಬಾಳಲು ಬಯಸುತ್ತೀರಾ? ಕ್ಷಮೆಯನ್ನು ಕೇಳುವದಕ್ಕೂ ಕ್ಷಮೆಯನ್ನು ಕೊಡುವದಕ್ಕೂ ತ್ವರೆಪಡಿರಿ. ಆಗ ನಿಜವಾದ ಸಮಾಧಾನವನ್ನು ಅನುಭವಿಸುವಿರಿ.

## ವಾಗ್ದಾನ ವಚನ – ಯೆಶಾ. 44:22

**"ನಿನ್ನ ದ್ರೋಹಗಳನ್ನು ಮಂಜಿನಂತೆ ಪರಿಹರಿಸಿದ್ದೇನೆ, ನಿನ್ನ ಪಾಪಗಳನ್ನು ಮೋಡದಂತೆ ಹಾರಿಸಿದ್ದೇನೆ; ನಿನ್ನನ್ನು ವಿಮೋಚಿಸಿದ್ದೇನೆ, ನನ್ನ ಕಡೆಗೆ ತಿರುಗಿಕೋ"**

## ಯಾಕೋಬ!

ಜೆಬೆದಾಯನ ಮಗ, ಹನ್ನೆರಡು ಶಿಷ್ಯರಲ್ಲಿ ಒಬ್ಬನು. ಯೋಹಾನನ ಅಣ್ಣ. ಇವರ ತಾಯಿಯ ಹೆಸರು ಸಲೋಮಿ. ಯೇಸುಸ್ವಾಮಿ ಇವನನ್ನು ಕರೆದಾಗ ಎಲ್ಲವನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದನು. ಹನ್ನೆರಡು ಮಂದಿಯನ್ನು ಅಪೊಸ್ತಲರನ್ನಾಗಿ ಆರಿಸಿಕೊಂಡಾಗ, ಇವನಿಗೂ ಇವನ ಸಹೋದರನಿಗೂ "ಗುಡುಗಿನ ಮರಿಗಳು" ಎಂದು ಹೆಸರಿಟ್ಟನು (ಮಾರ್ಕ.3:17). ಇವನೂ, ಪೇತ್ರನೂ ಯೋಹಾನನೂ ಕರ್ತನಿಂದ ಪ್ರೀತಿಸಲ್ಪಟ್ಟ ಶಿಷ್ಯರು. ಸ್ವಾಮಿಯ ಸೇವೆಯಲ್ಲಿ ಆತನೊಂದಿಗೆ ಇದ್ದವರು. ಕರ್ತನು ಪರಲೋಕಕ್ಕೆ ಹೋದ ನಂತರ, ಈ ಮೂವರೂ ಯೆರೂಸಲೇಮಿನಲ್ಲಿ ಮೇಲ್ಮನೆಯಲ್ಲಿ ಪ್ರಾರ್ಥಿಸುತ್ತಿದ್ದರು. (ಅಪೊ. 1:13). ಅದರ ನಂತರ ಬಂದಂಥ ಪಸ್ಕ ಹಬ್ಬಕ್ಕೆ ಮೊದಲು ಕ್ರಿ.ಶ.44ರಲ್ಲಿ ಹೆರೋದ ಅಗ್ರಿಪ್ಪನು, ಯಾಕೋಬನನ್ನು ಕತ್ತಿಯಿಂದ ಕೊಲ್ಲಿಸಿದನು (ಅಪೊ.12:2).

## ಕರ್ತನ ಮಹತ್ಕಾರ್ಯಗಳು!

1. ರೂತಳು ಒಬ್ಬ ವಿಧವೆಯಾಗಿದ್ದಳು. ಆದರೆ ಕರ್ತನು ಆಕೆಯನ್ನು ಒಬ್ಬ ತಾಯಿಯಾಗಿ ಮಾಡಿದನು.
2. ಎಸ್ತೇರಳು ಒಬ್ಬ ಅನ್ಯದೇಶಿಯಾಗಿದ್ದಳು. ಆದರೆ ಕರ್ತನು ಆಕೆಯನ್ನು ರಾಣಿಯಾಗಿ ಮಾಡಿದನು.
3. ದಾನಿಯೇಲನು ಒಬ್ಬ ದಾಸನಾಗಿದ್ದನು. ಆದರೆ ಕರ್ತನು ಅವನನ್ನು ಪ್ರಧಾನಿಯಾಗಿ ಮಾಡಿದನು.
4. ದಾವೀದನು ಒಬ್ಬ ಮರೆತುಹೋಗಲ್ಪಟ್ಟ ಕುರುಬನು, ಆದರೆ ಕರ್ತನು ಅವನನ್ನು ಅರಸನನ್ನಾಗಿ ಮಾಡಿದನು.
5. ಮೋಶೆಯು ಒಬ್ಬ ಸೋತುಹೋದ ಮನುಷ್ಯ, ಆದರೆ ಕರ್ತನು ಅವನನ್ನು ನಾಯಕನ್ನಾಗಿ ಮಾಡಿದನು.
6. ಪೇತ್ರನು ಒಬ್ಬ ಬೆಸ್ತನಾಗಿದ್ದನು. ಆದರೆ ಕರ್ತನು ಅವನನ್ನು ಧೈರ್ಯವುಳ್ಳ ಬೋಧಕನನ್ನಾಗಿ ಮಾಡಿದನು.
7. ಪೌಲನು ಒಬ್ಬ ಕೊಲೆಗಾರನಾಗಿದ್ದನು. ಆದರೆ ಕರ್ತನು ಅವನನ್ನು ಶಕ್ತಿಯುತವಾದ ಅಪೊಸ್ತಲನನ್ನಾಗಿ ಮಾಡಿದನು.
8. ನೆನಪಿನಲ್ಲಿಟ್ಟುಕೊಳ್ಳಿರಿ, ನಿಮ್ಮಲ್ಲಿಯೂ ಅನೇಕ ಸಾಮರ್ಥ್ಯಗಳಿವೆ. ಅದನ್ನೂ ಹೊರತರಲು ಕರ್ತನು ಬಯಸುತ್ತಾನೆ. ಈ ಲೋಕವು ಸಾಮರ್ಥ್ಯದವರನ್ನು ಆರಿಸಿಕೊಳ್ಳುತ್ತದೆ. ಆದರೆ ಕರ್ತನೋ ತಾನು ಆರಿಸಿಕೊಳ್ಳುವವರು ಎಂಥವರಾಗಿದ್ದರೂ ಅವರನ್ನು ಸಾಮರ್ಥ್ಯವುಳ್ಳವನಾಗಿ ಮಾಡುತ್ತಾನೆ.



# ನಮ್ಮ ದೇಶದ ಸುದ್ದಿಗಳು

## (INDIAN NEWS)

1. ಎಂಎಫ್ ನಿರ್ವಹಣಾ ಸಂಪತ್ತು ಮೌಲ್ಯವೃದ್ಧಿ : ನವದೆಹಲಿ (ಪಿಟಿಐ) : ಮ್ಯೂಚುವಲ್ ಫಂಡ್‌ಗಳು ನಿರ್ವಹಿಸುವ ಸಂಪತ್ತಿನ ಮೌಲ್ಯವು ರೂ. 25 ಲಕ್ಷ ಕೋಟಿಗೆ ತಲುಪಿದೆ. ಈ ಮೊತ್ತ 23.06 ಲಕ್ಷ ಕೋಟಿಗಳಷ್ಟಿತ್ತು. ಅದಕ್ಕೆ ಹೋಲಿಸಿದರೆ ಶೇ.8.41ರಷ್ಟು ಹೆಚ್ಚಳವಾಗಿದೆ. ಸರ್ಕಾರಿ ಸಾಲಪತ್ರ ಟ್ರೆಷರಿ ಬಿಲ್‌ಗಳಲ್ಲಿ ಹೆಚ್ಚಿದ ಹೂಡಿಕೆ ಮತ್ತು ಸಾಮಾನ್ಯ ಹೂಡಿಕೆದಾರರ ಪಾಲ್ಗೊಳ್ಳುವಿಕೆಯಿಂದ ಮ್ಯೂಚುವಲ್ ಫಂಡ್ ಉದ್ಯಮದ ಒಟ್ಟಾರೆ ಸಂಪತ್ತು ನಿರ್ವಹಣೆ ಮೊತ್ತವು ಈಗ ದಾಖಲೆ ಮಟ್ಟಕ್ಕೆ ತಲುಪಿದೆ ಎಂದು ತಿಳಿದುಬಂದಿದೆ.

2. ರೂ.80 ಲಕ್ಷಕ್ಕೆ ಎರಡು ಸೀಟರ್‌ಗಳ ಪುಟ್ಟ ವಿಮಾನ: ಹವ್ಯಾಸಿ ಹಾರಾಟ ಸಮುದ್ರ ತೀರದಲ್ಲಿ ಕಾವಲು, ಪೈಲಟ್ ತರಬೇತಿ ಸೇರಿ ವಿವಿಧ ಉದ್ದೇಶಗಳಿಗೆ ಈಗ ಅತ್ಯಂತ ಕಡಿಮೆ ಬೆಲೆಗೆ ವಿಮಾನ ಖರೀದಿಸಬಹುದು. ಎರಡು ಸೀಟರ್‌ಗಳ ಪುಟ್ಟ ವಿಮಾನದ ಬೇಸ್ ಮಾಡೆಲ್ ಬೆಲೆ ಸುಮಾರು ರೂ.80 ಲಕ್ಷ. ವಿವಿಧ ಆಧುನಿಕ ಉಪಕರಣಗಳನ್ನು ಒಳಗೊಂಡ ಪೂರ್ಣ ಪ್ರಮಾಣದ ವಿಮಾನದ ಬೆಲೆ ರೂ.1 ಕೋಟಿ. ನ್ಯಾಷನಲ್ ಏರೋನಾಟಿಕಲ್ ಲ್ಯಾಬೊರೇಟರಿ ಮತ್ತು ಮೆಸ್ಕೊ ಏರೋಸ್ಪೇಸ್ ಲಿಮಿಟೆಡ್ ಜಂಟಿಯಾಗಿ ಕಡಿಮೆ ಬೆಲೆಯ ಉತ್ತಮ ಗುಣಮಟ್ಟದ ವಿಮಾನ ತಯಾರಿಕೆಗೆ ಕೈಹಾಕಿವೆ.

3. ವಿದ್ಯುತ್ ಚಾಲಿತ ವಾಹನ ಶೀಘ್ರ ಹೊಸ ನೀತಿ : ನವದೆಹಲಿ: ವಿದ್ಯುತ್ ಚಾಲಿತ ಮತ್ತು ಪರ್ಯಾಯ ಇಂಧನ ಚಾಲಿತ ವಾಹನಗಳ ತಯಾರಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊಸ ಸುಸ್ಥಿರ ನೀತಿಯನ್ನು ಶೀಘ್ರ ಪ್ರಕಟಿಸಲಿದ್ದು, ಇದು ಹವಾಮಾನ ವೈಪರೀತ್ಯದ ವಿರುದ್ಧದ ಹೋರಾಟಕ್ಕೆ ಬ್ಯಾಟರಿ ಚಾಲಿತ ವಾಹನಗಳು ಪ್ರಮುಖ ಸಾಧನ ಪರಿಸರ ಮಾಲಿನ್ಯ ತಡೆಗೆ 'ಸ್ವಚ್ಛ ಇಂಧನ' ಪ್ರಬಲ ಅಸ್ತ್ರ ಎಂದು ಪ್ರಧಾನಿಯವರು ತಿಳಿಸಿದ್ದಾರೆ.

4. ಭಾರತದಲ್ಲಿ ಮೊದಲ ಬಾರಿಗೆ ಕಡಲ ಹಕ್ಕಿ : ಪೆಂಗ್ವಿನ್‌ಗಳನ್ನು ಟಿ.ವಿ. ಚಿತ್ರಗಳಲ್ಲಿ ಮಾತ್ರ ನೋಡಿರುವವರು ಅವುಗಳನ್ನು ನೇರವಾಗಿ ಹತ್ತಿರದಿಂದ ವೀಕ್ಷಿಸುವ ಅವಕಾಶ ಹತ್ತಿರವಾಗುತ್ತಿದೆ. ಇದೇ ಮೊದಲ ಬಾರಿಗೆ ಭಾರತದ ಮೃಗಾಲಯದಲ್ಲಿ ಪೆಂಗ್ವಿನ್‌ಗಳು ಕಾಣಿಸಿಕೊಳ್ಳಲಿವೆ. ಅಂದರೆ ದಕ್ಷಿಣ ಮುಂಬೈನ ಉದ್ಯಾನದಲ್ಲಿ ಹಂಬೋಲ್ಟ್ ಪೆಂಗ್ವಿನ್‌ಗಳು ಶೀಘ್ರದಲ್ಲಿಯೇ ವೀಕ್ಷಣೆಗೆ ಲಭ್ಯವಾಗಲಿವೆ. ಇದಕ್ಕಾಗಿ ಸುಮಾರು ರೂ. 2.57 ಕೋಟಿ ವ್ಯಯಿಸಲಾಗಿದೆ ಎಂದು ತಿಳಿದುಬಂದಿದೆ.

5. ನಗರದ 124 ಸ್ಥಳಗಳಲ್ಲಿ ಚಾರ್ಜಿಂಗ್ ಪಾಯಿಂಟ್ : ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳ ಓಡಾಟಕ್ಕೆ ರಾಜ್ಯ ಸರ್ಕಾರವು ಉತ್ತೇಜನ ನೀಡುತ್ತಿದ್ದು ಇದೀಗ ಅಂಥ ವಾಹನಗಳ ಚಾರ್ಜಿಂಗ್‌ಗಾಗಿ ನಗರದ 124 ಕಡೆಗಳಲ್ಲಿ ಪಾಯಿಂಟ್‌ಗಳನ್ನು ಅಳವಡಿಸಲು ನಿರ್ಧರಿಸಿದೆ. ವಾಹನಗಳ ಓಡಾಟ ವಿಪರೀತವಾಗಿದ್ದು ಅವುಗಳು ಉಗುಳುವ ಹೊಗೆಯಿಂದ ವಾಯು ಮಾಲಿನ್ಯದಿಂದಾಗಿ ವಿದ್ಯುತ್ ಚಾಲಿತ ವಾಹನಗಳ ಖರೀದಿ ಹಾಗೂ ಬಳಕೆಗೆ ಪ್ರೋತ್ಸಾಹ ನೀಡುವುದಕ್ಕಾಗಿ ಈ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ.

# ಹೊರ ದೇಶದ ಸುದ್ದಿಗಳು
## (FOREIGN NEWS)

1. ವಾಷಿಂಗ್ಟನ್ (ಪಿಟಿಐ) : ಮಂಗಳನ ಅಂಗಳವನ್ನು 360 ಡಿಗ್ರಿ ಕೋನದಲ್ಲಿ ಸೆರೆ ಹಿಡಿದಿರುವ ನಾಸಾದ ಕ್ಯೂರಿಯಾಸಿಟಿ ರೋವರ್, ಸಮಗ್ರ ನೋಟದ ಚಿತ್ರಗಳನ್ನು ರವಾನಿಸಿದೆ. ಹಲವು ವಾರಗಳಿಂದ ಧೂಳಿನಿಂದ ಮಂಗಳ ಗ್ರಹದ ಅಂಗಳ ಆವೃತ್ತಗೊಂಡಿತ್ತು. ಇದರಿಂದ ಕ್ಯೂರಿಯಾಸಿಟಿ ರೋವರ್ ಕಾರ್ಯಾಚರಣೆಗೂ ತೊಡಕಾಗಿತ್ತು. ಈಗ ಕೆಂಪು ಮತ್ತು ಕಂದುಬಣ್ಣಗಳಿಂದ ಕೂಡಿರುವ ಪ್ರದೇಶದ ಚಿತ್ರಣವನ್ನು ರೋವರ್ ಕಳುಹಿಸಿದೆ ಎಂದು ತಿಳಿದುಬಂದಿದೆ.

2. ನಿವೃತ್ತಿ ವಯಸ್ಸು ಹೆಚ್ಚಳಕ್ಕೆ ವಿರೋಧ : ಮಾಸ್ಕೊ (ರಾಯಿಟರ್ಸ್): ನಿವೃತ್ತಿ ವಯಸ್ಸು ಹೆಚ್ಚಿಸುವ ಪ್ರಸ್ತಾವ ವಿರೋಧಿಸಿ ರಷ್ಯಾದಲ್ಲಿ ಪ್ರತಿಭಟನೆ ನಡೆಯಿತು. ಅಂದರೆ ನಿವೃತ್ತಿ ವಯಸ್ಸನ್ನು ಪುರುಷರಿಗೆ 60 ರಿಂದ 65ಕ್ಕೆ ಮತ್ತು ಮಹಿಳೆಯರಿಗೆ 55ರಿಂದ 60ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವಿರುದ್ಧ ಪ್ರತಿಭಟನಾಕಾರರು ಘೋಷಣೆಗಳನ್ನು ಹಾಕಿದರು ಎಂದು ತಿಳಿದುಬಂದಿದೆ.

3. ಮಾತುಕತೆ ವಿಫಲ ಯುದ್ಧದ ಭೀತಿ : ದುಬೈ (ಎಎಫ್‌ಪಿ): ಯೆಮೆನ್ ಸರ್ಕಾರ ಮತ್ತು ಹುಥಿ ಬಂಡುಕೋರರ ನಡುವೆ ಶಾಂತಿ ಮಾತುಕತೆ ನಡೆಸುವ ವಿಶ್ವಸಂಸ್ಥೆಯ ಪ್ರಯತ್ನ ವಿಫಲವಾಗಿದ್ದು ದೇಶದಲ್ಲಿ ಯುದ್ಧದ ಭೀತಿ ಹೆಚ್ಚಿಸಿದೆ. ಇರಾನ್‌ನೊಂದಿಗೆ ಸಂಪರ್ಕ ಹೊಂದಿರುವ ಬಂಡುಕೋರರು ಶಾಂತಿ ಸಭೆಗೆ ಗೈರು ಹಾಜರಾತಿ ಬಿಕ್ಕಟ್ಟು ಮುಂದುವರಿಸಿದ್ದಾರೆ. ಸೌದಿ ಬೆಂಬಲಿತ ಪಡೆಗಳು ಹಾಗೂ ಬಂಡುಕೋರರ ನಡುವೆ ಹಿಂಸಾಚಾರ ಭುಗಿಲೇಳುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

4. ಪ್ಲೂಟೊ ಗ್ರಹವಾಗಿ ಪರಿಗಣಿಸಲು ಸಲಹೆ : ವಾಷಿಂಗ್ಟನ್ (ಪಿಟಿಐ): ತಪ್ಪು ವಿಶ್ಲೇಷಣೆಯ ಪರಿಣಾಮ ಪ್ಲೂಟೊವು ಗ್ರಹದ ಸ್ಥಾನಮಾನ ಕಳೆದುಕೊಂಡಿದೆ. ಇದನ್ನು ಮತ್ತೆ ಗ್ರಹಗಳ ಪಟ್ಟಿಗೆ ಸೇರಿಸಬೇಕು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಅಂತರಾಷ್ಟ್ರೀಯ ಖಗೋಳ ವಿಜ್ಞಾನ ಒಕ್ಕೂಟ (ಐಎಯು) 2006ರಲ್ಲಿ ಪ್ಲೂಟೊವನ್ನು ಗ್ರಹಗಳ ಪಟ್ಟಿಯಿಂದ ತೆಗೆದಿತ್ತು. ನಕ್ಷತ್ರವೊಂದನ್ನು ಗ್ರಹವೆಂದು ಪರಿಗಣಿಸಲು ತನ್ನ ಪರಿಧಿಯೊಳಗೆ ದೊಡ್ಡ ಗುರುತ್ವಾಕರ್ಷಣ ಬಲ ಹೊಂದಿರಬೇಕು. ಇದು ಈ ಲಕ್ಷಣ ಹೊಂದಿಲ್ಲ ಎಂದು ಐಎಯು ಹೇಳಿತ್ತು.

5. ಭಾರತೀಯರಿಗೆ ಭವಿಷ್ಯದಲ್ಲಿ ಪೌಷ್ಟಿಕಾಂಶದ ತೀವ್ರ ಕೊರತೆ ಬಾಸ್ಟನ್ (ಪಿಟಿಐ) : ಇಂಗಾಲದ ಡೈಆಕ್ಸೈಡ್ ಪ್ರಮಾಣ ಹೆಚ್ಚಳದಿಂದ 2050ರ ಹೊತ್ತಿಗೆ ಕೋಟ್ಯಂತರ ಭಾರತೀಯರಲ್ಲಿ ಪೌಷ್ಟಿಕಾಂಶದ ಕೊರತೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಇಂಗಾಲದ ಅಂಶ ಏರಿಕೆಯಿಂದ ಪ್ರಧಾನ ಬೆಳೆಗಳಾದ ಅಕ್ಕಿ ಮತ್ತು ಗೋದಿ ಕಡಿಮೆ ಪೌಷ್ಟಿಕಾಂಶ ಹೊಂದುವುದೇ ಇದಕ್ಕೆ ಕಾರಣ. 17.5 ಕೋಟಿ ಜನ ಸತುವಿನ ಅಂಶದ ಕೊರತೆ 12.2 ಕೋಟಿ ಜನ ಪೌಷ್ಟಿಕಾಂಶದ ಕೊರತೆ ಎದುರಿಸಲಿದ್ದಾರೆ ಎಂದು ಅಧ್ಯಯನವೊಂದು ತಿಳಿಸಿದೆ.

## ಸೇವಕರ ಜೀವಿತದಲ್ಲಿ...

ದೇವಸೇವಕರು ಡಿ.ಎಲ್. ಮೂಡಿಯವರು ಯೇಸುಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿದ ಕೂಡಲೆ, ಚಿಕ್ಕ ಮಕ್ಕಳಿಗೆ ಸೇವೆ ಮಾಡಬೇಕೆಂಬ ಹಂಬಲದಿಂದ, ಭಾನುವಾರ ಪಾಠ ಶಾಲೆ ಒಂದಕ್ಕೆ ಹೋಗಿ ಅದನ್ನು ನಿರ್ವಹಿಸಲು ಬಯಸಿದರು. ಆದರೆ ಭಾನುವಾರದ ಶಾಲೆಗೆ ಬೇಕಾದ ಮಕ್ಕಳನ್ನೂ ಇವರೇ ಹುಡುಕಬೇಕಾಗಿತ್ತು. ಆದ್ದರಿಂದ ಡಿ.ಎಲ್. ಮೂಡಿಯವರು ದೇವರ ಮಾರ್ಗದರ್ಶನಕ್ಕಾಗಿ ಪ್ರಾರ್ಥಿಸಿದ ನಂತರ ಬೀದಿಗಳಿಗೆ ಹೋಗಿ ಚಿಕ್ಕ ಮಕ್ಕಳನ್ನು ಭೇಟಿ ಮಾಡಿ, ತನ್ನ ಪ್ರೀತಿಯಿಂದಲೂ, ಅವರಿಗೆ ಚಾಕ್‌ಲೇಟ್ ಮುಂತಾದವುಗಳನ್ನು ಹಂಚುವುದರ ಮೂಲಕವೂ ಚಿಕ್ಕ ಮಕ್ಕಳನ್ನು ಒಟ್ಟುಗೂಡಿಸಿದರು. ಸತತವಾಗಿ ಆ ಸೇವೆಯನ್ನು ಮಾಡುತ್ತಲೇ ಬಂದಾಗ ಭಾನುವಾರದ ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಅಭಿವೃದ್ಧಿಯಾಯಿತು. ಚಿಕ್ಕ ಮಕ್ಕಳ ಮಧ್ಯೆ ಮಾಡುವ ಸೇವೆಯಾಗಿದ್ದರೂ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿದ್ದದ್ದೇ ತನ್ನ ಭವಿಷ್ಯ ಸೇವೆಯ ಗೆಲುವಿಗೆ ಕಾರಣ ಎಂದು ಡಿ.ಎಲ್. ಮೂಡಿಯವರು ಹೇಳುವದು ವಾಡಿಕೆಯಾಗಿತ್ತು.

## ಪ್ರೀತಿಯನ್ನು ಕುರಿತು ಏಳು ಕಾರ್ಯಗಳು

1. ದೇವರ ಪ್ರೀತಿ (ರೋಮಾ. 5:5).
2. ಯೇಸುಕ್ರಿಸ್ತನಲ್ಲಿ ತೋರಿಬಂದ ದೇವಪ್ರೀತಿ (ರೋಮಾ. 8:39).
3. ಪವಿತ್ರಾತ್ಮನ ಪ್ರೀತಿ (ರೋಮಾ. 5:5).
4. ಒತ್ತಾಯ ಮಾಡುವ ಪ್ರೀತಿ (2 ಕೊರಿ. 5:14).
5. ಮರಣದಷ್ಟು ಬಲವಾದ ಪ್ರೀತಿ (ಪರಮ. 8:6).
6. ಮತ್ತೊಬ್ಬರಿಗೆ ಕೇಡು ಮಾಡದ ಪ್ರೀತಿ (ರೋಮಾ.13:10).
7. ಭಕ್ತಿ ವೃದ್ಧಿಯನ್ನುಂಟು ಮಾಡುವ ಪ್ರೀತಿ (1 ಕೊರಿ. 8:1).

## ನಿಜವಾದ ದರ್ಶನ ಹೇಗಿರುತ್ತದೆ?

1. ದೇವರೇ ನಿನಗೆ ನೇರವಾಗಿ ಮಾತಾಡಿ ತಿಳಿಸಬಹುದು.
2. ನಿನ್ನ ಪ್ರಾರ್ಥನೆಯಲ್ಲಿ ದೇವರು ನಿನಗೆ ದರ್ಶನದ ಮೂಲಕ ಪ್ರಕಟಿಸಬಹುದು.
3. ಪ್ರವಾದಿಗಳ ಮೂಲಕ ತಿಳಿಸಬಹುದು.
4. ದೇವರ ವಾಕ್ಯವನ್ನು ಧ್ಯಾನ ಮಾಡುವ, ದೇವರ ವಾಕ್ಯದಲ್ಲಿ ಪ್ರೇರಣೆಯಾಗಬಹುದು.

## ಶೋಧನೆಗೆ ತಪ್ಪಿಸುವ ಪ್ರಾರ್ಥನೆ!

ಬೆಳಿಗ್ಗೆ : ಯೆರೆ. 24,25,26
ಸಂಜೆ : ತೀತ 2

"ನೀವು ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸಿರಿ" (ಲೂಕ 22:40).

ಯೇಸುಕ್ರಿಸ್ತನು ಗೆತ್ಸೇಮನೆ ತೋಟದಲ್ಲಿ ಶಿಷ್ಯರು ನಿದ್ರಿಸುವದನ್ನು ಕಂಡಾಗ, "ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ" ಅಂದನು. ಪ್ರಾರ್ಥಿಸದಿದ್ದರೆ, ನೀವು ಶೋಧನೆಯಲ್ಲಿ ಸಿಕ್ಕಿಬೀಳುವಿರಿ. ಸೈತಾನನ ಕೈಗಳಲ್ಲಿ ಸಿಕ್ಕಿ ಬೀಳುವಿರಿ. ಮನಸ್ಸಾಕ್ಷಿಯು ವಾದಿಸುವದರಿಂದ ಉತ್ಸಾಹದ ಆತ್ಮವನ್ನು ಕಳೆದುಕೊಳ್ಳುವಿರಿ. ಯೇಸುಕ್ರಿಸ್ತನ ಜೀವಿತವು ಪೂರ್ಣವಾಗಿ ಪ್ರಾರ್ಥನೆಯಾಗಿತ್ತು. ಆತನ ಸೇವೆಯ ಪ್ರಾರಂಭದಲ್ಲಿ ನಾಲ್ವತ್ತು ದಿವಸಗಳು ಉಪವಾಸಿಸಿ ಪ್ರಾರ್ಥಿಸಿದನು (ಮತ್ತಾ. 4:1,2). ಪ್ರತಿದಿನವೂ ಮುಂಜಾನೆಯಲ್ಲಿ ಅಡವಿಯ ಸ್ಥಳಕ್ಕೆ ಹೋಗಿ ಏಕಾಂತವಾಗಿ ಪ್ರಾರ್ಥಿಸುತ್ತಿದ್ದನು (ಮಾರ್ಕ.1:35).

ರಾತ್ರಿಯ ಹೊತ್ತಿನಲ್ಲಿ ಬೆಟ್ಟವನ್ನೇರಿ, ರಾತ್ರಿಯೆಲ್ಲಾ ದೇವರನ್ನು ನೋಡಿ ಪ್ರಾರ್ಥಿಸುತ್ತಿದ್ದನು (ಲೂಕ. 6:12). ಗೆತ್ಸೇಮನೆ ತೋಟದಲ್ಲಿ ಮೊಣಕಾಲೂರಿ ಪ್ರಾರ್ಥಿಸಿದನು (ಲೂಕ. 22:41). ಆತನು ಭೂಮಿಯಲ್ಲಿದ್ದಾಗ, ಬಲವಾಗಿ ಕೂಗುತ್ತಾ, ಕಣ್ಣೀರು ಸುರಿಸುತ್ತಾ ಪ್ರಾರ್ಥಿಸಿದನು (ಇಬ್ರಿ.5:7). ಆತನು ತನ್ನ ಶಿಷ್ಯರಿಗೆ ಪ್ರಾರ್ಥಿಸಲು ಕಲಿಸಿಕೊಟ್ಟು ಉತ್ಸಾಹ ಪಡಿಸಿದನು (ಲೂಕ.11:1). ಪೇತ್ರನನ್ನು ನೋಡಿ, ಕೋಳಿ ಕೂಗುವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬದಾಗಿ ಹೇಳುವಿ ಎಂದು ಪ್ರವಾದನೆಯಾಗಿ ಮುಂತಿಳಿಸಿದನು. ಆದರೆ ಪೇತ್ರನು ಪ್ರಾರ್ಥನೆಗೆ ಮುಖ್ಯತ್ವ ಕೊಡಲಿಲ್ಲ. "ಯಾರು ಅಲ್ಲಗಳೆದರೂ ನಾನು ಅಲ್ಲಗಳೆಯುವದಿಲ್ಲ" ಎಂದು ಎದೆಬಡಿದು ಹೇಳಿದನು. ಆದರೆ ಶೋಧನೆಯ ಸಮಯವು ಬಂತು! ಸೈತಾನನು ಪೇತ್ರನನ್ನು ಗೋದಿಯ ಹಾಗೆ ಒನೆದನು. ಪೇತ್ರನು ಯೇಸುಕ್ರಿಸ್ತನನ್ನು ಮೂರು ಸಾರಿ ಅಲ್ಲಗಳೆದುಬಿಟ್ಟನು.

ಒಬ್ಬ ಭಕ್ತನ ಜೀವಿತದಲ್ಲಿ ಶೋಧನೆಯು ಯಾವಾಗ ಬರುವದೆಂದು ಗೊತ್ತಾಗುವದಿಲ್ಲ. ಆದರೆ ಶೋಧನೆಗೆ ತಪ್ಪಿಸಿಕೊಳ್ಳಲು ಪ್ರತಿಯೊಬ್ಬ ಸೇವಕರೂ, ವಿಶ್ವಾಸಿಯೂ ಪ್ರಾರ್ಥಿಸಿ ಸಿದ್ಧರಾಗಿರಬೇಕು. ಸಂಸೋನನು ಮಹಾ ದೊಡ್ಡ ಪರಾಕ್ರಮಶಾಲಿಯೇ. ಆದರೆ ಅವನ ಜೀವಿತದಲ್ಲಿ ಸಾಕಾದಷ್ಟು ಪ್ರಾರ್ಥನೆಯಿಲ್ಲದ ಕಾರಣದಿಂದ ಶೋಧನೆಯಲ್ಲಿ ಬಿದ್ದು ಹೋದನು. ಅವನ ಕಣ್ಣುಗಳು ಕೀಳಲ್ಪಟ್ಟು, ಕೈಗಳು ಬೇಡಿಹಾಕಲ್ಪಟ್ಟವು. ಆದರೆ ದಾನಿಯೇಲನನ್ನು ನೋಡಿರಿ! ಆ ದಿನಗಳಲ್ಲಿ ಪ್ರಾರ್ಥಿಸುವವರಿಗೆ ವಿರುದ್ಧವಾಗಿ ಬಾಬೆಲ್ ದೇಶದಲ್ಲಿ ಕಾನೂನು ಜಾರಿಗೆ ಬಂದಾಗಲೂ, ಅವನು ತನ್ನ ಪ್ರಾರ್ಥನೆಯನ್ನು ಬಿಡಲೇ ಇಲ್ಲ (ದಾನಿ.6:10). ಇದರಿಂದ ಎಲ್ಲಾ ಶೋಧನೆಗೂ ಅವನು ತಪ್ಪಿಸಲ್ಪಟ್ಟನು. ಸಿಂಹದ ಬಾಯಿಯು ಕಟ್ಟಲ್ಪಟ್ಟಿತು. ದೇವಮಕ್ಕಳೇ, ನೀವೂ ಸಹ ಶೋಧನೆಗೆ ಒಳಗಾಗದಂತೆ ಪ್ರಾರ್ಥಿಸುವವರಾಗಿರ್ರಿ. ಪ್ರಾರ್ಥಿಸುವವನೇ ಜಯಹೊಂದುವನು. ಪ್ರಾರ್ಥಿಸುವವನೇ ತನ್ನ ಪರಿಶುದ್ಧತೆಯನ್ನು ಕಾದುಕೊಳ್ಳುವನು.

*ನೆನಪಿಗೆ : "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ; ಆದದರಿಂದ ನೀವು ಜಿತೇಂದ್ರಿಯರಾಗಿಯೂ, ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ ಇರ್ರಿ" (1ಪೇತ್ರ.4:7).*

"ಯಾವ ಸಂಬಂಧವಾಗಿಯೂ ಚಿಂತೆ ಮಾಡದೆ, ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾ ಸ್ತುತಿಯನ್ನೂ, ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ" (ಫಿಲಿ.4:6).

ಚಿಂತಿಸುವವರನ್ನು ನೋಡಿ, "ಚಿಂತಿಸಬೇಡಿ" ಎಂದು ಎಷ್ಟೇ ಸಂತೈಸಿದರೂ, ಅವರು ಇನ್ನೂ ಚಿಂತಿಸುವವರಾಗಿಯೇ ಇರುವರು. "ನಾನು ಚಿಂತಿಸುವದಕ್ಕಾಗಿಯೇ ಹುಟ್ಟಿದ್ದೇನೆ; ಚಿಂತೆಯೇ ನನ್ನ ಶ್ವಾಸವಾಗಿಯೂ, ಹೃದಯದ ಬಡಿತವಾಗಿಯೂ ಇದೆ" ಎನ್ನುವರು. ಚಿಂತೆ ಮಾಡುವುದರ ಬಗ್ಗೆ ಯೇಸುಕ್ರಿಸ್ತನೂ ಅಧಿಕವಾಗಿ ಮಾತನಾಡಿದ್ದಾನೆ. "ಚಿಂತೆ ಮಾಡಿ ಮಾಡಿ ಒಂದು ಮೊಳ ಉದ್ದ ಬೆಳೆಯುವದು ನಿಮ್ಮಲ್ಲಿ ಯಾರಿಂದಾದೀತು? ಇದಲ್ಲದೆ ನೀವು ಉಡುಪಿನ ವಿಷಯದಲ್ಲಿ ಚಿಂತೆ ಮಾಡುವದೇಕೆ? ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ; ಅವು ದುಡಿಯುವದಿಲ್ಲ, ನೂಲುವದಿಲ್ಲ; ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೊಲೊಮೋನನಿಗೆ ಸಹ, ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ" ಅಂದನು (ಮತ್ತಾಯ 6:27–29). ಚಿಂತೆ ಮಾಡದೆ ಇರುವುದರಲ್ಲಿಯೇ ನಿಂತುಬಿಡಬಾರದು. ಜೊತೆಯಲ್ಲಿಯೇ ಪ್ರಾರ್ಥಿಸಬೇಕು. ಹೇಗೆ ಪ್ರಾರ್ಥಿಸಬೇಕು? ಕೃತಜ್ಞತಾಸ್ತುತಿಯನ್ನೂ, ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ, ದೇವರಿಗೆ ತಿಳಿಯಪಡಿಸಬೇಕು. ಆಗ ಚಿಂತೆಯನ್ನು ಜಯಿಸುವದು ಮಾತ್ರವಲ್ಲ, ಎಲ್ಲಾ ಗ್ರಹಿಕೆಯನ್ನೂ ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನು ಕಾಯುವದು. ಈ ಲೋಕದಲ್ಲಿ ಚಿಂತೆ ಮಾಡದ ಮನುಷ್ಯನೇ ಇಲ್ಲ. ಮನುಷ್ಯ ಹುಟ್ಟುವಾಗಲೂ ಅಳುತ್ತಾನೆ, ಸಾಯುವಾಗಲೂ ಅಳುತ್ತಾನೆ. ಮಧ್ಯದಲ್ಲಿರುವ ಕಾಲದಲ್ಲಾದರೂ ಮನುಷ್ಯನು ನಗುತ್ತಾನಾ? "ನಮ್ಮ ಆಯುಷ್ಕಾಲವು ಎಪ್ಪತ್ತು ವರುಷ; ಬಲ ಹೆಚ್ಚಿದರೆ ಎಂಭತ್ತು ವರುಷ. ಕಷ್ಟ ಸಂಕಟಗಳೇ ಅದರ ಆಡಂಬರ. ಅದು ಬೇಗನೇ ಗತಿಸಿಹೋಗುತ್ತದೆ; ನಾವು ಹಾರಿಹೋಗುತ್ತೇವೆ" (ಕೀರ್ತ.90:10).

ಯೋಬನು ಸನ್ಮಾರ್ಗನೇ. ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ, ಕೆಟ್ಟದ್ದನ್ನು ನಿರಾಕರಿಸುವವನಾಗಿದ್ದನು. ಆದರೂ ಚಿಂತೆಯು ಅವನನ್ನು ಬಿಡಲಿಲ್ಲ. ಒಂದೇ ದಿನದಲ್ಲಿ ಅವನ ಹತ್ತು ಮಕ್ಕಳೂ ಸತ್ತು ಹೋದಾಗ, ಅವನ ಚಿಂತೆಯೂ, ದುಃಖವೂ ಎಷ್ಟು ದೊಡ್ಡದಾಗಿದ್ದಿರಬಹುದು! ಅಂತಹ ಯೋಬನ ದುಃಖವನ್ನು ಕರ್ತನೇ ಮಾರ್ಪಡಿಸಿದನು. "ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ ಯೆಹೋವನು ಅವನ ದುಸ್ಥಿತಿಯನ್ನು ಹೋಗಲಾಡಿಸಿ, ಅವನ ಸೊತ್ತನ್ನು ಮೊದಲಿಗಿಂತ ಎರಡರಷ್ಟಾಗಿ ಹೆಚ್ಚಿಸಿದನು" (ಯೋಬ.42:10). ದೇವಮಕ್ಕಳೇ, ಯೋಬನನ್ನು ಆಶೀರ್ವದಿಸಿದ ದೇವರು, ನಿಶ್ಚಯವಾಗಿಯೂ ನೀವು ಪ್ರಾರ್ಥಿಸುವಾಗ ನಿಮ್ಮ ಚಿಂತೆ, ದುಃಖಗಳನ್ನೂ ಹೋಗಲಾಡಿಸುವನು.

*ನೆನಪಿಗೆ : "ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು" (ಯೋಹಾ.16:24).*

## ಸ್ಥಿರ ಚಿತ್ತತೆ!



"ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು, ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆ ಮಾಡುತ್ತಾ..." (ಎಫೆ.6:18).

ಕ್ರೈಸ್ತ ಜೀವಿತದಲ್ಲಿ ಸ್ಥಿರಚಿತ್ತರಾಗಿರುವದು ಬಹಳ ಮುಖ್ಯ. ಸ್ಥಿರಚಿತ್ತರಾಗಿರುವವರು ಯಾವುದೇ ರೀತಿಯಲ್ಲಿ ಚಂಚಲಗೊಳ್ಳದೆ, ತತ್ತರಿಸದೆ ಕರ್ತನಲ್ಲಿ ದೃಢವಾಗಿರುವರು. ಅವರ ಜೀವಿತದಲ್ಲಿ ಯಾವ ಬಿರುಗಾಳಿ ಬೀಸಿದರೂ, ಪ್ರವಾಹ ಬಂದರೂ, ಅವರ ದೋಣಿಯು ದೃಢವಾಗಿ, ಸ್ಥಿರವಾಗಿ ನಿಲ್ಲುವದು. ಸ್ಥಿರಚಿತ್ತತೆಗೆ ಉದಾಹರಣೆಯಾಗಿ ಹೇಳಬೇಕಾದರೆ, ಅದು ನೊವೊಮಿಯ ಸೊಸೆಯಾದ ರೂತಳೇ. ನೊವೊಮಿಯು ಮೋವಾಬ್ ದೇಶವನ್ನು ಬಿಟ್ಟು ಹೊರಡುವಾಗ, ಹಿರಿಯ ಸೊಸೆಯಾದ ಒರ್ಫಳು, ಅತ್ತೆಯನ್ನು ಮುದ್ದಿಟ್ಟು ಹೊರಟು ಹೋದಳು. ಆದರೆ ರೂತಳಾದರೋ ಅತ್ತೆಯನ್ನೇ ಅಂಟಿಕೊಂಡಳು. "ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ನನ್ನನ್ನು ಒತ್ತಾಯಪಡಿಸಬೇಡ, ನೀನು ಎಲ್ಲಿಗೆ ಹೋದರೂ ನಾನೂ ಅಲ್ಲಿಗೆ ಬರುವೆನು. ನೀನು ವಾಸಿಸುವಲ್ಲೇ ನಾನೂ ವಾಸಿಸುವೆನು; ನಿನ್ನ ಜನರೇ ನನ್ನ ಜನರು; ನಿನ್ನ ದೇವರೇ ನನ್ನ ದೇವರು" (ರೂತ.1:16) ಅಂದಳು. ಕರ್ತನು ಆಕೆಯ ದೃಢಮನಸ್ಸನ್ನು ಕಂಡನು. ರೂತಳಿಗೆ ಬೋವಜನೆಂಬ ಒಬ್ಬ ಒಳ್ಳೆಯ ವರನನ್ನು ಸಿದ್ಧಪಡಿಸಿ ಕೊಟ್ಟನು. ಆ ವಂಶದಲ್ಲಿ ದಾವೀದನು ಹುಟ್ಟಿದನು. ದಾವೀದನ ಕುಮಾರನಾದ ಯೇಸುಕ್ರಿಸ್ತನು ಹುಟ್ಟಿದನು. ಯಾವಾಗಲೂ ಕರ್ತನಲ್ಲಿ ಸ್ಥಿರಚಿತ್ತರಾಗಿರ್ರಿ. "ಅಧರ್ಮಿಗಳ ಭ್ರಾಂತಿಯ ಸೆಳವಿಗೆ ಸಿಕ್ಕಿಕೊಂಡು ನಿಮ್ಮ ಸ್ಥಿರಮನಸ್ಸನ್ನು ಬಿಟ್ಟು ಭ್ರಷ್ಟರಾಗದಂತೆ ಎಚ್ಚರಿಕೆಯಾಗಿರಿ" ಎಂದು ಪೇತ್ರನು ಬರೆಯುತ್ತಾನೆ (2ಪೇತ್ರ.3:17).

ಕೆಲವು ವರ್ಷಗಳ ಹಿಂದೆ, ಇಸ್ಲಾಂ ಸಂಸ್ಥೆಯವರು ನೈಜೀರಿಯಾದಲ್ಲಿ ಓದುತ್ತಿದ್ದಂಥ 200ಕ್ಕೂ ಹೆಚ್ಚಾದ ವಿದ್ಯಾರ್ಥಿನಿಗಳನ್ನು ಕದ್ದುಕೊಂಡು ಹೋದರು. ಸ್ಥಿರಮನಸ್ಸಿಲ್ಲದ ಕೆಲವು ವಿದ್ಯಾರ್ಥಿನಿಗಳು, ಇಸ್ಲಾಂ ಧರ್ಮವನ್ನು ಸ್ವೀಕರಿಸಿಕೊಂಡು ಅಲ್ಲಿದ್ದಂಥ ಭಯೋತ್ಪಾದಕರಿಗೆ ಹೆಂಡತಿಯಾದರು. ಆದರೆ ಒಬ್ಬಳು ಮಾತ್ರ "ನಾನು ಎಂದಿಗೂ ಕರ್ತನನ್ನು ಅಲ್ಲಗಳೆಯುವದಿಲ್ಲ" ಎಂದು ಸ್ಥಿರವಾಗಿದ್ದಳು. ಅವಳಿಗೆ ಎಷ್ಟೋ ಚಿತ್ರಹಿಂಸೆಗಳನ್ನು ಕೊಟ್ಟರು. ಆದರೆ ಆಕೆಯು "ನಾನು ಯೇಸುವನ್ನೇ ಹಿಂಬಾಲಿಸುವೆನು" ಅಂದಳು. ಕೊನೆಯದಾಗಿ ಆ ಸಂಸ್ಥೆಯವರು ಒಂದು ಕೋಳಿಯ ಕೊರಳನ್ನು ಕತ್ತರಿಸುವ ಹಾಗೆ ಆಕೆಯ ಕತ್ತನ್ನು ಕತ್ತರಿಸಿದರು. ಅವಳು ಸತ್ತುಹೋದಳು. ಅವಳ ತಂದೆಯು ವೈರಾಗ್ಯವಾದ ಕ್ರೈಸ್ತ ಬೋಧಕರಾಗಿದ್ದರು. ಸ್ನಾನಿಕನಾದ ಯೋಹಾನನ ಹಾಗೆ ನನ್ನ ಮಗಳೂ ಶಿರಚ್ಛೇದ ಮಾಡಲ್ಪಟ್ಟಿದ್ದಾಳೆ. ರಕ್ತಸಾಕ್ಷಿಯಾಗಿ ಕರ್ತನಿಗಾಗಿ ಸತ್ತಿದ್ದಾಳೆ. ಪರಲೋಕದಲ್ಲಿ ಯೋಹಾನನನ್ನು ಮಾತ್ರವಲ್ಲ, ನನ್ನ ಮಗಳನ್ನೂ ನೋಡುವೆನು ಅಂದರು.

*ನೆನಪಿಗೆ : "ಆದದರಿಂದ ಸಹೋದರರೇ, ದೇವರು ನಿಮ್ಮನ್ನು ಕರೆದದ್ದನ್ನೂ, ಆದು ಕೊಂಡದ್ದನ್ನೂ ದೃಢಪಡಿಸಿಕೊಳ್ಳುವದಕ್ಕೆ ಮತ್ತಷ್ಟು ಪ್ರಯಾಸಪಡಿರಿ" (2ಪೇತ್ರ. 1:10).*

# ಬಹಿರಂಗವಾದ ಫಲ!



"ನೀನು ಪ್ರಾರ್ಥನೆ ಮಾಡಬೇಕಾದರೆ, ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು" (ಮತ್ತಾ.6:6).

ಕೆಲವು ಪ್ರಾರ್ಥನೆಗಳು ಸಾಮಾನ್ಯವಾದ ಪ್ರಾರ್ಥನೆಗಳು. ಆದರೆ ಇನ್ನು ಕೆಲವು ಅಂತರಂಗದ ಪ್ರಾರ್ಥನೆಗಳು. ಆ ಪ್ರಾರ್ಥನೆಗೆ ಯಾವ ಅಡ್ಡಿಗಳೂ ಇರಬಾರದು. ಆದ್ದರಿಂದ ಬಾಗಿಲನ್ನು ಮುಚ್ಚಿಕೊಳ್ಳಿರಿ. ಯಾವ ಶಬ್ದಗಳೂ ನಿಮ್ಮ ಕಿವಿಯಲ್ಲಿ ಬೀಳದಂತೆ, ನೂರಕ್ಕೆ ನೂರರಷ್ಟು ನಿಮ್ಮ ಗಮನವನ್ನು ಕರ್ತನ ಕಡೆಗೆ ತಿರುಗಿಸಿರಿ. ಕೆಲವರು ಬೆಳಿಗ್ಗೆ ಎದ್ದೇಳುವರು. ಪ್ರಾರ್ಥಿಸಬೇಕಾದ ಸಮಯದಲ್ಲಿ ಟೆಲಿಫೋನ್ ಕರೆಯು ಬರುತ್ತದೆ. ಇನ್ನು ಕೆಲವರು ಇಂದು ಯಾರ್ಯಾರು ನನಗೆ Whatsappನಲ್ಲಿ ಸಂದೇಶ ಕಳುಹಿಸಿದ್ದಾರೆ ಎಂದು ನೋಡಿದ ನಂತರ ಪ್ರಾರ್ಥಿಸೋಣ ಎಂಬದಾಗಿ ನೆನಸುತ್ತಾರೆ. ನಿಮ್ಮ ಹೃದಯವೆಂಬ ಬಾಗಿಲನ್ನು ಮುಚ್ಚಿ ಬಿಡಿರಿ.

ಜಾನ್ ವೆಸ್ಲಿಯವರ ತಾಯಿಗೆ ಸಾವಿರ ಕರ್ತವ್ಯಗಳಿದ್ದವು. 18 ಮಕ್ಕಳಿಗೆ ಊಟ ತಿನಿಸಿದ ನಂತರ ಮಧ್ಯಾಹ್ನ ಎರಡು ಗಂಟೆಗೆ ಮೊಣಕಾಲೂರುವರು. ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಬಿಟ್ಟರೆಂದರೆ, 1 ತಾಸಿನವರೆಗೆ ಪ್ರಾರ್ಥಿಸಿದ ನಂತರವೇ ಹೊರಗೆ ಬರುವರು. ಯಾವ ಮಗುವೂ, ಯಾವ ಕಾರ್ಯವೂ ಅವರನ್ನು ತೊಂದರೆಪಡಿಸಬಾರದೆಂದು, ಸ್ಪಷ್ಟವಾಗಿ ಆಜ್ಞಾಪಿಸಿದ್ದರು. ಇದರಿಂದ ಎಲ್ಲಾ ಮಕ್ಕಳೂ ಕರ್ತನೊಂದಿಗೆ ಏಕಾಂತವಾಗಿ ಪ್ರಾರ್ಥಿಸಲು ಕಲಿತುಕೊಂಡರು. ಅವರ ಮಕ್ಕಳಲ್ಲಿ ಅನೇಕರು ಶಕ್ತಿಯುತವಾದ ಸೇವಕರಾಗಿ ಪ್ರಜ್ವಲಿಸಿದರು.

ಸತ್ಯವೇದದಲ್ಲಿ ಯಾಬೇಚನನ್ನು ಕುರಿತು ಓದುವದಕ್ಕೆ ಮುಂಚೆ ಬಹುದೊಡ್ಡ ವಂಶಾವಳಿಯು ಕೊಡಲ್ಪಟ್ಟಿದೆ. ಯಾಬೇಚನ ನಂತರವೂ ಆ ವಂಶಾವಳಿಯು ಮುಂದುವರೆಯುತ್ತದೆ. ಅವರೂ ಸಹ ಯಾಬೇಚನ ಹಾಗೆ ಭೂಮಿಯಲ್ಲಿ ಹುಟ್ಟಿ ಬೆಳೆದವರೇ. ಆದರೆ ಪ್ರಾರ್ಥಿಸದ ಕಾರಣದಿಂದ, ಅವರ ಹೆಸರು ಪಟ್ಟಿಯಲ್ಲಿ ಅವರ ಯಾವ ವಿಶೇಷತೆಗಳೂ ಬರೆಯಲ್ಪಡಲಿಲ್ಲ. ಹೇಗೋ ಹುಟ್ಟಿದರು, ಬದುಕಿದರು, ಸತ್ತರು. ಆದರೆ ಯಾಬೇಚನು ಪ್ರಾರ್ಥಿಸುವವನಾಗಿದ್ದದರಿಂದ, "ತನ್ನ ಅಣ್ಣ ತಮ್ಮಂದಿರಲ್ಲಿ ಘನವಂತನಾಗಿದ್ದನು; ಇವನನ್ನು ಬಹು ವೇದನೆಯಿಂದ ಹೆತ್ತೆನೆಂದು ಹೇಳಿ ಇವನ ತಾಯಿ ಅವನಿಗೆ ಯಾಬೇಚೆಂದು ಹೆಸರಿಟ್ಟಳು" (1ಪೂರ್ವ.4:9). ಆದರೆ ಅವನ ದುಃಖವನ್ನು ಸಂತೋಷವಾಗಿ ಬದಲಾಯಿಸುವ ಮಾರ್ಗ ಪ್ರಾರ್ಥನೆ ಮಾತ್ರವೇ ಎಂಬದನ್ನು ಅವನು ಕಂಡುಹಿಡಿದನು. ಅವನು ಅಂತರಂಗದಲ್ಲಿ ಹೃದಯವನ್ನು ಹರಿದು, ದೇವರ ಬಳಿ ಹೋರಾಡಿ ಪ್ರಾರ್ಥಿಸಿರಬಹುದು. ದೇವಮಕ್ಕಳೇ, ನೀವೂ ಸಹ ಹಾಗೆಯೇ ಮಾಡಿರಿ, ಕರ್ತನು ನಿಮ್ಮನ್ನು ಮರೆಯಾಗಿರಲು ಬಿಡದೆ, ನಿಮ್ಮನ್ನು ಅತ್ಯಧಿಕವಾಗಿ ಉನ್ನತಿಗೊಳಿಸುವನು!

*ನೆನಪಿಗೆ : "ನೀನು ಉಪವಾಸ ಮಾಡುವಾಗ.... ನೀನು ಉಪವಾಸಿಯೆಂದು ಜನರಿಗೆ ಕಾಣದೆ ಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ" (ಮತ್ತಾ.6:17,18).*

## ಕಾದುಕೊಂಡಿದ್ದು ಪ್ರಾರ್ಥಿಸಿರಿ!

ಬೆಳಿಗ್ಗೆ : ಯೆರೆ. 34,35,36
ಸಂಜೆ : ಇಬ್ರಿ. 2

"ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ, ತಂದೆ ಮಾಡಿದಂಥ, ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆಕೊಟ್ಟನು" (ಅಪೊ.1:5).

ಕರ್ತನು ನಿಮಗೊಂದು ವಾಗ್ದಾನವನ್ನು ಕೊಟ್ಟಿರುವದಾದರೆ, ಅದು ನೆರವೇರುವಂತೆ ಪ್ರಾರ್ಥಿಸಿ ಕಾದಿರ್ರಿ. ಕರ್ತನು ವಾಗ್ದಾನ ನೀಡಿದ್ದಾನಲ್ಲಾ, ಇನ್ನು ನಿಮಗೇನು? ಅದನ್ನು ಹೇಗಾದರೂ ನೆರವೇರಿಸುವನು ಎಂದು ನೆನಸಿದರೆ, ಅದು ತಡವಾಗುತ್ತಲೇ ಹೋಗುವದು. ತಂದೆಯಾದ ದೇವರು ಮಾನವಕುಲಕ್ಕೆ ವಾಗ್ದಾನವನ್ನು ಕೊಟ್ಟನು. ಮೊದಲನೆಯ ವಾಗ್ದಾನವು, ಸರ್ಪದ ತಲೆಯನ್ನು ಜಜ್ಜುವ ಮೇಸಿಯನನ್ನು ಕಳುಹಿಸುವೆನು ಎಂಬದಾಗಿ, ಆದರೆ ಆ ವಾಗ್ದಾನವು ನೆರವೇರಲು 4,000 ವರ್ಷಗಳಾಯಿತು. ಅದಕ್ಕಾಗಿ ಯಾರೂ ಉಪವಾಸ ಮಾಡಿ, ಪ್ರಾರ್ಥನೆ ಮಾಡಿದ ಹಾಗೆ ಗೊತ್ತಿಲ್ಲ. ಕ್ಲುಪ್ತಕಾಲವು ಬಂದಾಗ, ತಂದೆಯಾದ ದೇವರು ವಾಗ್ದಾನ ಮಾಡಿದಂಥ ಮೇಸಿಯನನ್ನು ಈ ಲೋಕಕ್ಕೆ ಕಳುಹಿಸಿದನು.

ಅದರ ಪ್ರಕಾರ ಯೇಸುಕ್ರಿಸ್ತನು ಬಂದು ತನ್ನ ಜೀವವನ್ನು ಕೊಟ್ಟು, ವಿಮೋಚನೆಯನ್ನು ಉಂಟುಮಾಡಿದನು. ಅನಂತರದ ವಾಗ್ದಾನವು ಪವಿತ್ರಾತ್ಮನ ಕುರಿತದ್ದು. ಯೇಸು ಹೇಳಿದನು: "ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ" ಎಂದು (ಲೂಕ. 24:49). ಇದನ್ನು ಕೇಳಿದ ಕೂಡಲೇ ಶಿಷ್ಯರು ಸುಮ್ಮನಿರಲಿಲ್ಲ. ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನನ್ನು ಹೊಂದಿಕೊಳ್ಳಲು, ಯೆರೂಸಲೇಮಿನ ಮೇಲಂತಸ್ತಿನಲ್ಲಿ ಕಾಯುತ್ತಾ ಪ್ರಾರ್ಥಿಸಲಾರಂಭಿಸಿದರು. ಈ ಪ್ರಾರ್ಥನೆಯು 10 ದಿನಗಳೂ ನಿಲ್ಲದೆ ನಡೆಯಿತು. ಪಂಚಾಶತ್ತಮ ದಿನವು ಬಂದಾಗ, ಏಕಮನಸ್ಸಿನಿಂದ ಅವರು ಪ್ರಾರ್ಥಿಸುತ್ತಿದ್ದಾಗ, ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಕರ್ತನು ನಿಮಗೆ ಕೊಟ್ಟಿರುವ ವಾಗ್ದಾನಗಳು ನೆರವೇರಬೇಕಾದರೆ, ಅತ್ಯಾಸಕ್ತಿಯಿಂದ ಹೋರಾಡಿ ಪ್ರಾರ್ಥಿಸಿರಿ.

ಇಸ್ರಾಯೇಲ್ ಜನರು ಪಾಪಮಾಡಿದಾಗ, ಕಲ್ದೀಯರಾದ ಬಾಬೇಲಿನವರ ಕೈಯಲ್ಲಿ ಎಪ್ಪತ್ತು ವರ್ಷಗಳು ಸೆರೆ ಒಯ್ಯಲ್ಪಟ್ಟರು. 70 ವರ್ಷಗಳ ನಂತರವೇ ಬಿಡುಗಡೆಯಾಗುವಿರಿ ಎಂದು ಪ್ರವಾದಿಯಾದ ಯೆರೆಮೀಯನ ಮೂಲಕ ಕರ್ತನು ಹೇಳಿದ್ದನು. ಆದ್ದರಿಂದ ದಾನಿಯೇಲನು ಉಪವಾಸ ಮಾಡಿ, ಗೋಣಿತಟ್ಟನ್ನು ಹಾಕಿಕೊಂಡು, ಬೂದಿಯಲ್ಲಿ ಕುಳಿತು, ದೇವರ ಮುಖವನ್ನು ಪ್ರಾರ್ಥನೆಯಿಂದ ಮುಟ್ಟಲು ಮೊಣಕಾಲೂರಿದನು. ಕರ್ತನು ಆ ಪ್ರಾರ್ಥನೆಯನ್ನು ಕೇಳಿ, ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿದನು. ದೇವಮಕ್ಕಳೇ, ಪ್ರಾರ್ಥಿಸಿರಿ, ಕಾದುಕೊಂಡಿದ್ದು ವಾಗ್ದಾನಗಳನ್ನು ಹಿಡಿದುಕೊಂಡು ಪ್ರಾರ್ಥಿಸಿರಿ.

*ನೆನಪಿಗೆ : "ತಾನು ವಾಗ್ದಾನ ಮಾಡಿದಂತೆ ತನ್ನ ಪ್ರಜೆಗಳಾದ ಇಸ್ರಾಯೇಲ್ಯರಿಗೆ, ವಿಶ್ರಾಂತಿಯನ್ನು ಅನುಗ್ರಹಿಸಿದ ಯೆಹೋವನಿಗೆ ಸ್ತೋತ್ರವಾಗಲಿ" (1ಅರ.8:56).*

# ಪ್ರಾರ್ಥನೆಯ ರಹಸ್ಯ!

ಬೆಳಿಗ್ಗೆ : ಯೆರೆ. 37,38,39
ಸಂಜೆ : ಇಬ್ರಿ. 3

"ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ?" (ಮತ್ತಾ.26:40).

ಈ ದಿನಗಳಲ್ಲಿ ಅನೇಕರು, "ಸಹೋದರನೇ, ನನ್ನಿಂದ ಪ್ರಾರ್ಥಿಸಲು ಸಾಧ್ಯವಾಗುತ್ತಿಲ್ಲ. ನಮ್ಮ ಮನೆಯಲ್ಲಿ ಯಾವುದೋ ಅಂಧಕಾರದ ಶಕ್ತಿಯು ಇದ್ದುಕೊಂಡು ಪ್ರಾರ್ಥಿಸಲು ಅಡ್ಡಿಮಾಡುತ್ತಿದೆ. ಪ್ರಾರ್ಥಿಸಲು ಬಯಸುತ್ತೇನೆ, ದೇವರ ಸಂಗಡ ಆಳವಾದ ಐಕ್ಯತೆಯನ್ನು ಇಟ್ಟುಕೊಳ್ಳಲು ಬಯಸುತ್ತೇನೆ. ಆದರೆ ಸಾಧ್ಯವಾಗುತ್ತಿಲ್ಲ. ಪ್ರಾರ್ಥನೆಯ ಮುಖ್ಯತ್ವವನ್ನೂ, ಅವಶ್ಯಕತೆಯನ್ನೂ ತಿಳಿದಿದ್ದೇನೆ. ಆಸಕ್ತಿಯಿಂದ ಪ್ರಾರ್ಥಿಸುವುದು ಹೇಗೆ?" ಎಂದು ಕೇಳುತ್ತಾರೆ. ಅದು ಒಳ್ಳೇದು. ಯೇಸುಕ್ರಿಸ್ತನು ಒಳ್ಳೆಯ ಮಾದರಿಯ ಪ್ರಾರ್ಥನಾವೀರನು ಮಾತ್ರವಲ್ಲ, ಹೇಗೆ ಪ್ರಾರ್ಥಿಸಬೇಕೆಂದು ಕಲಿಸಿಕೊಟ್ಟವನು. ಎಲ್ಲದ್ದಕ್ಕೂ ಹೆಚ್ಚಾಗಿ ಆತನು ನಿಮ್ಮ ಸಂಗಡ ಸೇರಿ ಪ್ರಾರ್ಥಿಸಲು ಬಯಸುತ್ತಾನೆ ಎಂಬದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿರಿ. ನೀವಾಗಿಯೇ ಪ್ರಾರ್ಥಿಸಿದರೆ ಬಳಲಿಹೋಗುವಿರಿ, ಸೋತು ಹೋಗುವಿರಿ ಎನ್ನುವುದಕ್ಕಾಗಿ ಆತನೇ ನಿಮ್ಮ ಸಂಗಡ ಸೇರಿ ಪ್ರಾರ್ಥಿಸಲು ಇಷ್ಟಪಡುತ್ತಾನೆ.

ನಿಮ್ಮ ಪ್ರಾರ್ಥನೆಯ ಸ್ನೇಹಿತನಾಗಿರಲು ಅಪೇಕ್ಷಿಸುತ್ತಾನೆ. ಆತನು ತನ್ನ ಹಸ್ತವನ್ನು ನಿಮ್ಮ ಕಡೆಗೆ ಚಾಚಿ, "ನನ್ನ ಮಗುವೇ, ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ?" ಎಂದು ಕೇಳುತ್ತಾನೆ. ಅದರ ಅರ್ಥವೇನು? "ನಾನು ನಿನ್ನ ಪ್ರಾರ್ಥನೆಯ ಗೆಳೆಯನಾಗಿರಲು ಬಯಸುತ್ತೇನೆ. ನಿನ್ನೊಟ್ಟಿಗೆ ಕೈಜೋಡಿಸಿ ಪ್ರಾರ್ಥಿಸಲು ಇಷ್ಟಪಡುತ್ತೇನೆ" ಎಂಬದಾಗಿದೆ. ಆ ಕರೆಯುವಿಕೆಯನ್ನು ಅಂಗೀಕರಿಸಿ, ನೀವೂ ಸಹ ಆತನ ಸಂಗಡ ಸೇರಿ ಪ್ರಾರ್ಥಿಸಲು ನಿಮ್ಮ ಕೈಗಳನ್ನು ಆತನ ಕಡೆಗೆ ಚಾಚಿರಿ. ಯೇಸುವಿನ ಹಸ್ತಗಳನ್ನು ಹಿಡಿಯುವಾಗ, ಅದನ್ನು ಮುಟ್ಟಿ ನೋಡಿರಿ. ಮೊದಲನೆಯದಾಗಿ ಆತನ ಹಸ್ತದಲ್ಲಿ ಅಮೂಲ್ಯವಾದ ಆತನ ರಕ್ತವನ್ನು ಗ್ರಹಿಸುವಿರಿ. ಆ ರಕ್ತವು ಪ್ರಾರ್ಥಿಸಲಾಗದೆ ಇರುವಂಥ ಎಲ್ಲಾ ಕಾರ್ಗತ್ತಲನ್ನು ನೀಗಿಸಿ, ಪ್ರಾರ್ಥಿಸುವಂತೆ ದೇವರ ಮಹಿಮೆಯನ್ನು ಕೊಂಡು ಬರುವದು.

ಎರಡನೆಯದಾಗಿ, ಆತನ ಹಸ್ತಗಳಲ್ಲಿ ಆಳವಾದ ಗಾಯಗಳನ್ನು ಗ್ರಹಿಸುವಿರಿ. ಆ ಗಾಯಗಳು ನಿಮಗಾಗಿ ಆತನು ಸ್ವೀಕರಿಸಿಕೊಂಡದ್ದು. ಮೂರನೆಯದಾಗಿ, ಆತನ ಹಸ್ತಗಳಲ್ಲಿ ನೀವು ಚಿತ್ರಿಸಲ್ಪಟ್ಟಿರುವದನ್ನು ಗ್ರಹಿಸುವಿರಿ (ಯೆಶಾ.49:16). ಹೀಗೆ ಕೈಜೋಡಿಸಿ ಪ್ರಾರ್ಥಿಸುವಾಗ ನಿಮ್ಮ ಕೋಣೆಯು ಪ್ರಾರ್ಥನೆಯ ಕೋಣೆಯಾಗಿ, ಗೆತ್ಸೇಮನೆ ತೋಟವಾಗಿ ಮಾರ್ಪಡುವದು. ಯೇಸುಕ್ರಿಸ್ತನು, ಗೋಳಾಟದಿಂದಲೂ, ನರಳಾಟದಿಂದಲೂ, ಕೂಗಿ ಮನೋವ್ಯಥೆಯಿಂದ ಪ್ರಾರ್ಥಿಸುವ ಪ್ರಾರ್ಥನೆಯು ನಿಮ್ಮ ಕಿವಿಗಳಲ್ಲಿ ಕೇಳಿಸಲಿ! ದೇವಮಕ್ಕಳೇ, ಇಂದೇ ನೀವು ಆತನ ಸಂಗಡ ಕೈಜೋಡಿಸುವಿರಾ? ಆತನು ತನ್ನ ಆತ್ಮಭಾರವನ್ನು ನಿಮಗೆ ಕೊಡಲು ಸಿದ್ಧನಾಗಿದ್ದಾನೆ.

*ನೆನಪಿಗೆ : "ನಾನು ನಿದ್ರೆಗೊಂಡಿದ್ದರೂ, ನನ್ನ ಹೃದಯವು ಎಚ್ಚರಗೊಂಡಿತ್ತು; ಇಗೋ ಎನ್ನಿನಿಯನು ಕದ ತಟ್ಟಿ... ಬಾಗಿಲು ತೆರೆ ಅಂದನು" (ಪರಮ.5:2).*

## ಪವಿತ್ರಾತ್ಮನ ಸಂಗಡ!

"ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು" (ಯೋಹಾ.14:16).

ಪ್ರಾರ್ಥಿಸಲು ಬಯಸುವವರಿಗಾಗಿ ಕರ್ತನು ತನ್ನ ಸಹಾಯಕನಾದ ಪವಿತ್ರಾತ್ಮನನ್ನು ನೀಡಿದ್ದಾನೆ. ನೀವು ಪ್ರಾರ್ಥಿಸುವದಕ್ಕಾಗಿ ಆತನು ತನ್ನ ಪ್ರಾರ್ಥನಾತ್ಮವನ್ನೂ ವಿಜ್ಞಾಪನಾತ್ಮವನ್ನೂ, ಗೋಳಾಟದ ಆತ್ಮವನ್ನೂ, ಕಣ್ಣೀರಿನ ಅಭಿಷೇಕವನ್ನೂ ಕೊಟ್ಟಿರುವನು. ಪವಿತ್ರಾತ್ಮನ ಸಂಗಡ ನೀವು ಹೆಣೆದು ಪ್ರಾರ್ಥಿಸುವಾಗ, ಅಧಿಕ ಸಮಯ ಬಳಲಿಹೋಗದೆ, ಆಸಕ್ತಿಯಿಂದಲೂ ಪ್ರಾರ್ಥಿಸಲು ಸಾಧ್ಯ. ಪವಿತ್ರಾತ್ಮನು ನೀವು ಪ್ರಾರ್ಥಿಸುವದಕ್ಕೆ ಹೇಗೆ ಸಹಾಯ ಮಾಡುತ್ತಾನೆ. ನೀವು ಪ್ರಾರ್ಥಿಸುವಾಗ, ನಿಮ್ಮ ಬಲಗೈಯನ್ನು ಚಾಚಿ ಯೇಸುವಿನ ಕೈಗಳನ್ನು ಹಿಡಿದುಕೊಳ್ಳುತ್ತೀರಿ. ಎಡಗೈಯನ್ನು ಚಾಚಿ ಪವಿತ್ರಾತ್ಮನ ಕೈಗಳನ್ನು ಹಿಡಿದುಕೊಳ್ಳುತ್ತೀರಿ. ಪವಿತ್ರಾತ್ಮನ ಹಸ್ತಗಳನ್ನು ಮುಟ್ಟಿ ನೋಡುವಿರಾದರೆ, ಏನನ್ನು ಗ್ರಹಿಸುವಿರಿ? ಆತನ ಹಸ್ತಗಳಲ್ಲಿರುವ ಅಭಿಷೇಕದ ತೈಲವನ್ನು ಗ್ರಹಿಸುವಿರಿ.

"ತೈಲ" ಎಂಬದು ಪವಿತ್ರಾತ್ಮನಿಗೆ ಗುರುತಾಗಿದೆ. ಆತ್ಮದಲ್ಲಿ ತುಂಬಿ ಪ್ರಾರ್ಥಿಸುವದಕ್ಕೆ ಗುರುತಾಗಿದೆ. ಪವಿತ್ರಾತ್ಮನೂ ನಿಮ್ಮ ಪ್ರಾರ್ಥನೆಯ ಸ್ನೇಹಿತನಾಗಿರಲು ಬಯಸುತ್ತಾನೆ. ಸತ್ಯವೇದವು ಹೇಳುತ್ತದೆ "ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗೆಂದರೆ, ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (ರೋಮಾ.8:26). ಇಲ್ಲಿ ಗಮನಿಸಿರಿ, ಪವಿತ್ರಾತ್ಮನು ನಮ್ಮ ಅಶಕ್ತಿಯಲ್ಲಿ ನಮಗೆ ಸಹಾಯ ಮಾಡಲು ಮುಂಬರುತ್ತಾನೆ. ಆದ್ದರಿಂದ ಆತನ ಸಹಾಯವನ್ನು ನೀವು ಪಡೆಯಬೇಕಲ್ಲವೇ? ಆದ್ದರಿಂದ ಆತನ ಸಂಗಡ ಕೈಜೋಡಿಸಿ, ನಿಮ್ಮ ಅಗತ್ಯತೆಗಳನ್ನು ಮನತೆರೆದು ಆತನ ಬಳಿ ಹಂಚಿಕೊಳ್ಳಿರಿ!

ಅನೇಕ ಸಮಯಗಳಲ್ಲಿ ಪವಿತ್ರಾತ್ಮನು ನಿಮ್ಮೊಳಗಿಂದ ಬಿಕ್ಕುವದನ್ನೂ, ಕಣ್ಣೀರಿನಿಂದ ಪ್ರಾರ್ಥಿಸುವದನ್ನೂ, ಮಾತಿಲ್ಲದಂಥ ನರಳಾಟದಿಂದ ವಿಜ್ಞಾಪಿಸುವದನ್ನೂ ನೀವು ಗಮನಿಸಬಹುದು. ಅಪೊ.ಪೌಲನು ಒಳ್ಳೆಯ ಪ್ರಾರ್ಥನಾವೀರನಾಗಿದ್ದದ್ದಕ್ಕೆ ಕಾರಣವೇನು? "ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು; ಬುದ್ಧಿಯಿಂದಲೂ ಹಾಡುವೆನು" ಎಂದನು (1 ಕೊರಿ.14:15). ದೇವಮಕ್ಕಳೇ, ನೀವು ಪ್ರಾರ್ಥಿಸುವಾಗ ಎಂದಿಗೂ ಒಂಟಿಯಾಗಿ ಪ್ರಾರ್ಥಿಸಬೇಡಿ. ನಿಮ್ಮ ಸಂಗಡ ಯೇಸುವನ್ನೂ, ಪವಿತ್ರಾತ್ಮನನ್ನೂ ಆಹ್ವಾನಿಸಿರಿ. ಮಾತ್ರವಲ್ಲ, ಪರಲೋಕದ ಭಾಷೆಯಾದ ಅನ್ಯಭಾಷೆಯನ್ನೂ ಪವಿತ್ರಾತ್ಮನು ನಿಮಗೆ ಕೊಡುವನು. ನೀವು ಪ್ರಾರ್ಥಿಸುವಾಗಲೇ, ಪರಲೋಕವು ಆ ಪ್ರಾರ್ಥನೆಯನ್ನು ಕೇಳುವದು.

*ನೆನಪಿಗೆ : "ನೀವು ಪವಿತ್ರಾತ್ಮ ಪ್ರೇರಿತರಾಗಿ, ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ, ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ" (ಎಫೆ6:18).*

## ಪ್ರಾರ್ಥನಾ ಸ್ನೇಹಿತರು!



"ಒಬ್ಬನು ಬಿದ್ದರೆ, ಇನ್ನೊಬ್ಬನು ಎತ್ತುವನು; ಬಿದ್ದಾಗ ಎತ್ತುವವನು ಇನ್ನೊಬ್ಬನಿಲ್ಲದಿದ್ದರೆ ಅವನ ಗತಿ ದುರ್ಗತಿಯೇ" (ಪ್ರಸ.4:10).

"ಶಕ್ತಿಯುತವಾದ ಪ್ರಾರ್ಥನೆ"ಯನ್ನು ನೀವು ಮಾಡಬೇಕಾದರೆ, ನಿಮಗೆ ಪ್ರಾರ್ಥನಾ ಸ್ನೇಹಿತರು ಬಹಳ ಮುಖ್ಯ. ಯಾವ ಒಬ್ಬ ದೇವಮಗುವಿಗೆ ಅವನ ಭಾರವನ್ನು ಹೊತ್ತುಕೊಂಡು ಅವನಿಗಾಗಿ ಪ್ರಾರ್ಥಿಸುವ ಸ್ನೇಹಿತರಿದ್ದಾರೋ, ಅವನು ಧನ್ಯನು. ಹೆಚ್ಚಾದ ಆಸ್ತಿಪಾಸ್ತಿಗಳಿಗಿಂತಲೂ, ಒಮ್ಮನಸ್ಸಿನಿಂದ ಕೂಡಿ ಪ್ರಾರ್ಥಿಸುವ ಪ್ರಾರ್ಥನಾ ವೀರರನ್ನು ಸ್ನೇಹಿತರಾಗಿ ಪಡೆದಿರುವವರು ಭಾಗ್ಯವಂತರು. ನಿಮಗೆ ಪ್ರಾರ್ಥನಾ ಸ್ನೇಹಿತರಿದ್ದಾರಾ?

ನಾನು ಯೌವನ ಪ್ರಾಯದಲ್ಲಿ ರಕ್ಷಣೆ ಹೊಂದಿದೆನು. ಆಗ ನನಗೆ ಮದುವೆಯಾಗಿರಲಿಲ್ಲ. ಮುಂಜಾನೆ ಐದು ಗಂಟೆಗೆಲ್ಲಾ ಎದ್ದು ನನ್ನ ಸಂಗಡ ಪ್ರಾರ್ಥಿಸುವದಕ್ಕಾಗಿ ಒಬ್ಬ ವಕೀಲರು ಬರುತ್ತಿದ್ದರು. ಅವರು ಬರುವಾಗ ನಾನೂ ಸಹ ಮುಖವನ್ನು ತೊಳೆದು ಸಿದ್ಧನಾಗಿರುತ್ತಿದ್ದೆನು. ಅವರು ಬಂದ ಕೂಡಲೇ ಇಬ್ಬರು ಮೊಣಕಾಲೂರುತ್ತಿದ್ದೆವು. ಒಂದು ಮಾತನ್ನೂ ಆಡದೆ ಇಬ್ಬರು ಪ್ರಾರ್ಥಿಸಲು ತೊಡಗುತ್ತಿದ್ದೆವು. ಒಂದು ತಾಸಿನವರೆಗೂ ಪವಿತ್ರಾತ್ಮಭರಿತರಾಗಿ ಪ್ರಾರ್ಥಿಸುತ್ತಿದ್ದೆವು. ಸಂಜೆಯಲ್ಲಿ, ಇನ್ನೊಬ್ಬ ಸ್ನೇಹಿತನೊಂದಿಗೆ ಅವರ ಮನೆಗೆ ಹೋಗಿ ಅಟ್ಟಳಿಗೆಯಲ್ಲಿ ಮೊಣಕಾಲೂರಿ ಪ್ರಾರ್ಥಿಸುತ್ತಿದ್ದೆವು. ಆ ಪ್ರಾರ್ಥನೆಗಳ ಮೂಲಕ ಬಲವನ್ನೂ, ಉನ್ನತ ಶಕ್ತಿಯನ್ನೂ ನಾನು ಹೊಂದಿಕೊಳ್ಳುವ ಸಕಾಲವಾಗಿತ್ತು. ಅನಂತರದ ಸೇವೆಗೆ ಅದು ಅಸ್ತಿವಾರದ ಪ್ರಾರ್ಥನೆಯಾಗಿಯೂ ಇತ್ತು.

ಆದ್ದರಿಂದಲೇ ಸತ್ಯವೇದವು ಹೇಳುತ್ತದೆ "ಒಬ್ಬನಿಗಿಂತ ಇಬ್ಬರು ಲೇಸು, ಅವರ ಪ್ರಯಾಸಕ್ಕೆ ಒಳ್ಳೆಯ ಲಾಭ. ಒಬ್ಬನು ಬಿದ್ದರೆ, ಇನ್ನೊಬ್ಬನು ಎತ್ತುವನು; ಒಬ್ಬಂಟಿಗನನ್ನು ಜಯಿಸುವವನಿಗೆ ಇಬ್ಬರು ಎದುರಾಗಿ ನಿಲ್ಲಬಹುದು; ಮೂರು ಹುರಿಯ ಹಗ್ಗ ಬೇಗ ಕಿತ್ತು ಹೋಗುವದಿಲ್ಲವಷ್ಟೆ". (ಪ್ರಸ.4:9,10,12). ಪ್ರಿಯರೇ, ಚೆನ್ನಾಗಿ ಪ್ರಾರ್ಥಿಸುವ ದೇವರ ಸಭೆಯನ್ನು ನಿಮಗಾಗಿ ಆರಿಸಿಕೊಳ್ಳಿರಿ. ಸಭೆಯವರೆಲ್ಲರೂ ಕೂಡಿ ಪ್ರಾರ್ಥಿಸುವ ಪ್ರಾರ್ಥನೆಯು ಬಹಳ ಶಕ್ತಿಯುತವಾದದ್ದು. ಸಭೆಯ ಆರಾಧನೆ ಎಂದರೆ ಬರೀ ಹಾಡುವದೂ, ಪ್ರಸಂಗ ಮಾಡುವದು ಮಾತ್ರವಲ್ಲ, ದೇಶಕ್ಕಾಗಿ ಕಣ್ಣೀರಿನಿಂದ ಪ್ರಾರ್ಥಿಸುವ ಸಮಯವೂ ಇರಬೇಕು. ಸಭಾಪಾಲಕರೂ, ವಿಶ್ವಾಸಿಗಳೂ ಪ್ರಾರ್ಥಿಸುವವರಾಗಿದ್ದರೆ ಸೈತಾನನಿಂದ ಅಲ್ಲಿ ಕ್ರಿಯೆ ಮಾಡಲು ಸಾಧ್ಯವಿಲ್ಲ. ಅಗಲಿಕೆಗಳೂ, ಗಲಿಬಿಲಿಗಳೂ ಅಲ್ಲಿ ಬರಲು ಸಾಧ್ಯವೇ ಇಲ್ಲ. ಕರ್ತನ ಆಶೀರ್ವಾದವು ಅಲ್ಲಿ ಅಪರಿಮಿತವಾಗಿ ಸುರಿಸಲ್ಪಡುವದು. ದೇವಮಕ್ಕಳೇ, ಪ್ರಾರ್ಥಿಸುವದಕ್ಕೆ, ಒಮ್ಮನಸ್ಸೂ, ಪ್ರೀತಿಯ ಐಕ್ಯತೆಯು ಬಹಳ ಪ್ರಾಮುಖ್ಯವಾದದ್ದು; ಅದನ್ನು ಎಂದಿಗೂ ಮರೆತುಬಿಡಬೇಡಿ!

*ನೆನಪಿಗೆ : "ಆಹಾ, ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು. ಅಲ್ಲಿ ಆಶೀರ್ವಾದವೂ, ಜೀವವೂ... ಆಜ್ಞಾಪಿಸಿದ್ದಾನೆ(ಕೀರ್ತ.133.1,3).*

# ದಾನಿಯೇಲನ ಪ್ರಾರ್ಥನಾ ಜೀವಿತ!



"ಆ ಮೇಲೆ ದಾನಿಯೇಲನು ಅರಮನೆಗೆ ಸೇರಿ–ನನಗೆ ಸಮಯವನ್ನು ಕೊಟ್ಟರೆ, ನಾನು ಆ ಕನಸಿನ ಅರ್ಥವನ್ನು ರಾಜನಿಗೆ ವಿವರಿಸುವೆನು ಎಂದು ಅರಿಕೆ ಮಾಡಿದನು" (ದಾನಿ.2:16).

ದಾನಿಯೇಲನ ಹಾಗೆ ಪ್ರಾರ್ಥಿಸುವ ಪ್ರಾರ್ಥನಾವೀರರು ನಮ್ಮ ದೇಶದಲ್ಲಿ ಎದ್ದೇಳಿದರೆ ಎಷ್ಟೋ ಉತ್ತಮ! ದಾನಿಯೇಲನ ಯಶಸ್ವಿಯಾದ ಜೀವಿತಕ್ಕೆ ಕಾರಣ, ಅವನ ಪ್ರಾರ್ಥನಾ ಜೀವಿತವೇ. ಇಲ್ಲಿ ನೋಡಿರಿ! ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನು ಒಂದು ಕನಸನ್ನು ಕಂಡನು. ಅವನು ಕಂಡ ಕನಸನ್ನೂ, ಅದರ ಅರ್ಥವನ್ನೂ ತಿಳಿಯಪಡಿಸದೆ ಹೋದರೆ, ಬಾಬೆಲಿನ ಎಲ್ಲಾ ಜ್ಞಾನಿಗಳಿಗೂ ಮರಣದಂಡನೆಯಾಗುವದು ಎಂಬ ಕಾನೂನು ಬಂದಿತ್ತು. ದಾನಿಯೇಲನೂ ಒಬ್ಬ ಜ್ಞಾನಿಯಾಗಿ ಬಾಬೆಲಿನಲ್ಲಿ ಎಣಿಸಲ್ಪಟ್ಟನು. ಅರಸನು ಕಂಡ ಕನಸನ್ನೂ ಅದರ ಅರ್ಥವನ್ನೂ ತಿಳಿಸಲು ದಾನಿಯೇಲನು ಅರಸನ ಬಳಿ ಸಮಯವನ್ನು ಕೇಳಿಕೊಂಡನು. ದೇವರ ಸಮ್ಮುಖದಲ್ಲಿ ಹೋದರೆ, ಖಂಡಿತವಾಗಿಯೂ ಒಂದು ಪರಿಹಾರ ಉಂಟೆಂದು ನಂಬಿದನು. ದೇವಮಕ್ಕಳೇ, ಸಮಸ್ಯೆಯ ಸಮಯದಲ್ಲಿ ಕರ್ತನ ಪಾದಗಳ ಬಳಿಯಿದ್ದರೆ, ನಿಶ್ಚಯವಾಗಿಯೂ ನಿಮಗೆ ಬಿಡುಗಡೆ ಉಂಟು. ದೇವಸನ್ನಿಧಾನದಲ್ಲಿ ನಿಮಗೊಂದು ಪರಿಹಾರ ಸಿಗಲಿಲ್ಲವಾದರೆ, ಬೇರೆಲ್ಲಿಯೂ ಅದು ನಿಮಗೆ ಸಿಗುವದೇ ಇಲ್ಲ.

ಒಬ್ಬ ವಿಶ್ವಾಸಿಯು, ಅಕ್ಯುಪಂಚರ್ ತಜ್ಞರಾಗಿದ್ದರು. ಅವರ ಬಳಿ ವಯಸ್ಸಾದ ಒಬ್ಬ ವೈದ್ಯರು ಚಿಕಿತ್ಸೆ ಪಡೆಯಲು ಬಂದರು. ಬಂದಂಥವರಿಗೆ ಒಬ್ಬ ಮಗಳಿದ್ದಳು. ಆಕೆಯೂ ಒಬ್ಬ ವೈದ್ಯೆಯಾಗಿದ್ದಳು. ಅಕ್ಯುಪಂಚರ್ ತಜ್ಞರಾಗಿದ್ದವರು ಬಹಳ ಪ್ರಖ್ಯಾತಿಯಾದ ವೈದ್ಯರಾಗಿದ್ದರು. ಅದೇ ಸಮಯದಲ್ಲಿ ಒಳ್ಳೆಯ ವಿಶ್ವಾಸಿಯಾಗಿಯೂ, ಪ್ರಾರ್ಥಿಸುವವರಾಗಿಯೂ ಇದ್ದರು. ಚಿಕಿತ್ಸೆಯನ್ನು ಪ್ರಾರಂಭಿಸಿದ ಕೆಲವೇ ನಿಮಿಷಗಳಲ್ಲಿ ಆ ವಯಸ್ಸಾದ ವೈದ್ಯರು ಉಸಿರಾಟದ ತೊಂದರೆಯಿಂದ ಕೆಳಗೆ ಬಿದ್ದುಹೋದರು. ಪ್ರಾಣ ಹೋಗುವ ಪರಿಸ್ಥಿತಿ ಬಂದು ಬಿಟ್ಟಿತು. ಅವರ ಮಗಳು ಹೆದರಿ, ತಕ್ಷಣವೇ ಇತರ ವೈದ್ಯರನ್ನು ಕರೆಯಲು ಓಡಿದರು. ಚಿಕಿತ್ಸೆ ನೀಡುತ್ತಿದ್ದ ಡಾಕ್ಟರ್ ಕೂಡಲೇ ಮೊಣಕಾಲೂರಿ, ದೇವರೇ, ನನ್ನ ಕೈಗಳನ್ನೋ, ನನ್ನ ಚಿಕಿತ್ಸೆಯನ್ನೋ, ನಾನು ನಂಬುವದಿಲ್ಲ. ಈಗ ನಿನ್ನನ್ನೇ ನಂಬಿದ್ದೇನೆ ಎಂದು ಪ್ರಾರ್ಥಿಸಿದರು. ಅಧಿಕವಾಗಿ ಪ್ರಾರ್ಥಿಸಲು ಸಮಯವಿಲ್ಲ. ಆದರೆ ತಕ್ಷಣವೇ ಕರ್ತನು ಅವರ ಪ್ರಾರ್ಥನೆಯನ್ನು ಕೇಳಿ ಒಂದು ಅದ್ಭುತವನ್ನು ಮಾಡಿದನು. ದೇವರ ಪ್ರಸನ್ನತೆಯು ಇಳಿದುಬಂತು. ಸಾಯುವ ಪರಿಸ್ಥಿತಿಯಲ್ಲಿದ್ದಂಥ ಆ ವೃದ್ಧ ಬದುಕಿಕೊಂಡರು. ಸಂಪೂರ್ಣ ಆರೋಗ್ಯವು ಮತ್ತೆ ಬಂತು. ದೇವಮಕ್ಕಳೇ, ಯಾವ ಸಮಸ್ಯೆ ಬಂದರೂ, ಕಳವಳಗೊಳ್ಳದೆ, ತಕ್ಷಣವೇ ಮೊಣಕಾಲೂರಿ ಪ್ರಾರ್ಥಿಸಿರಿ, ಕರ್ತನು ಅದ್ಭುತ ಮಾಡುವನು!

*ನೆನಪಿಗೆ : "ಅವನು ನನಗೆ ಮೊರೆಯಿಡುವಾಗ ಸದುತ್ತರವನ್ನು ದಯಪಾಲಿಸುವೆನು" (ಕೀರ್ತ.91:15).*

## ಒಗ್ಗಟ್ಟಿನ ಪ್ರಾರ್ಥನೆ!



"ಬಳಿಕ ದಾನಿಯೇಲನು ತನ್ನ ಮನೆಗೆ ಹೋಗಿ, ಹನನ್ಯ, ಮೀಶಾಯೇಲ, ಅಜರ್ಯ ಎಂಬ ತನ್ನ ಸ್ನೇಹಿತರಿಗೆ ಆ ಸಮಾಚಾರವನ್ನು ತಿಳಿಸಿ, ನಾವು ಬಾಬೆಲಿನ ಇತರ ವಿದ್ವಾಂಸರೊಂದಿಗೆ ನಾಶವಾಗದಂತೆ ಪರಲೋಕ ದೇವರು ಈ ರಹಸ್ಯದ ವಿಷಯವಾಗಿ ಕೃಪೆ ತೋರಿಸಲು ಆತನನ್ನು ಬೇಡಿಕೊಳ್ಳೋಣ ಎಂದನು" (ದಾನಿ.2:17,18).

ಪ್ರಾರ್ಥನೆಯಲ್ಲಿ ಈ ನಾಲ್ಕು ಮಂದಿಗೆ ಒಳ್ಳೆಯ ಒಗ್ಗಟ್ಟು ಇದ್ದಿತು. ಪ್ರೀತಿಯ ಐಕ್ಯತೆ ಇದ್ದಿತು. ಅವರು ದೈವೀಕದಲ್ಲಿ ಒಟ್ಟಾಗಿ ಹೆಣೆದು ನಿಂತರು. ಅವರೊಳಗೆ ಯಾವ ತಾರತಮ್ಯಗಳೋ, ದ್ವೇಷಗಳೋ, ವಂಚನೆಗಳೋ ಇರಲಿಲ್ಲ. ಇಬ್ಬರು ಸೇರಿ ನಿಂತರೇ, ಅಲ್ಲಿ ಕರ್ತನು ಬಂದುಬಿಡುವನು. ಯೇಸುಕ್ರಿಸ್ತನು ಹೇಳಿದನು. "ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ, ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ, ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ" (ಲೂಕ. 18:19). ಆದರೆ ಇಲ್ಲಿ ಇಬ್ಬರಲ್ಲ, ನಾಲ್ಕು ಮಂದಿ ಒಮ್ಮನಸ್ಸಿನಿಂದ ಬಾಬೆಲಿನಲ್ಲಿ ಪ್ರಾರ್ಥಿಸುವದಾದರೆ ಆ ಪ್ರಾರ್ಥನೆಯು ಎಷ್ಟು ಬಲವುಳ್ಳದ್ದು! ಕರ್ತನು ಅದನ್ನು ಕೇಳಿ ಅವರಿಗೆ ಪ್ರಕಟನೆಯ ವರವನ್ನೂ, ಸೇವೆಯನ್ನೂ ಕೊಟ್ಟನು.

ಅದೇ ರೀತಿಯಾಗಿ, ಶದ್ರಕ್, ಮೇಶಕ್, ಅಬೆದ್ನೆಗೋ ಎಂಬವರು, ಅರಸನ ಪ್ರತಿಮೆಯನ್ನು ನಮಸ್ಕರಿಸದೆ ಹೋದಾಗ, ಆ ಮೂವರೂ ಒಟ್ಟಾಗಿ ಸೇರಿ, ಅರಸನನ್ನು ನೋಡಿ, ನಾವು ಆರಾಧಿಸುವ ದೇವರು ನಮ್ಮನ್ನು ಬಿಡಿಸಲು ಶಕ್ತನು. ಆತನು ಬಿಡಿಸದೇ ಹೋದರೂ, ನೀನು ನಿಲ್ಲಿಸಿರುವ ಈ ಬಂಗಾರದ ಪ್ರತಿಮೆಯನ್ನು ನಾವು ನಮಸ್ಕರಿಸುವದಿಲ್ಲ ಎಂದು ಒಗ್ಗಟ್ಟಿನಿಂದ ಹೇಳಿದರು. ಆ ಒಗ್ಗಟ್ಟಿನ ಪ್ರಾರ್ಥನೆಯನ್ನು ಕರ್ತನು ಲಾಲಿಸಿದನು. ಬೆಂಕಿಯ ಉಗ್ರವನ್ನು ನಂದಿಸಿ, ಅದರ ಮಧ್ಯೆ ತಿರುಗಾಡಿದನು. ಅವರನ್ನು ಬಿಡಿಸಿದನು. ಕುಟುಂಬವೆಂಬದು, ಗಂಡ, ಹೆಂಡತಿ, ಮಕ್ಕಳು ಸೇರಿರುವದೇ ಆಗಿದೆ. "ಸರಿ ಬೀಳುವ ಸಹಕಾರಿಯನ್ನುಂಟು ಮಾಡುವೆನು" ಎಂದು ಹೇಳಿದಾತನು, ಪ್ರಾರ್ಥನೆಯಲ್ಲೂ ತಕ್ಕ ಸಹಕಾರಿಯನ್ನಾಗಿಯೇ ತಮ್ಮ ಜನರಿಗೆ ಕೊಟ್ಟಿರುವನು. ಅನೇಕ ಕುಟುಂಬಗಳಲ್ಲಿ ಗಂಡನು ಒಂದು ಕಡೆ ಎಳೆದರೆ, ಹೆಂಡತಿಯು ಇನ್ನೊಂದು ಕಡೆ ಎಳೆಯುವವರಾಗಿದ್ದಾರೆ. ಹೀಗಿದ್ದರೆ ಅವರು ಹೇಗೆ ಒಮ್ಮನಸ್ಸಿನಿಂದ ಪ್ರಾರ್ಥಿಸಲು ಸಾಧ್ಯ? ಆದ್ದರಿಂದಲೇ, ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಇಜ್ಜೋಡಾಗಬೇಡಿರಿ. ಕ್ರಿಸ್ತನಿಗೂ, ಸೈತಾನನಿಗೂ ಒಡನಾಟವೇನು? ಕುಟುಂಬದಲ್ಲಿ ಸರಿಯಾದ ಒಮ್ಮನಸ್ಸಿರುವದಾದರೆ, ಆ ಮನೆಯು ದೇವರ ಪ್ರಸನ್ನತೆಯಿಂದಲೂ, ದೇವರ ಕೃಪೆಯಿಂದಲೂ ತುಂಬಿರುವದು. ದೇವಮಕ್ಕಳೇ, ಕುಟುಂಬವಾಗಿ ಕೈಜೋಡಿಸಿ ಪ್ರಾರ್ಥಿಸುವವರಾಗಿರ್ರಿ. ಹೋರಾಟದ ಸಮಯದಲ್ಲಿ ಉಪವಾಸ ಮಾಡಿ ಪ್ರಾರ್ಥಿಸಿರಿ!

*ನೆನಪಿಗೆ : "ನಿಮ್ಮ ಮೇಲೆ ಬರುವ ಶತ್ರುಗಳು ನಿಮ್ಮಿಂದ ಸೋತುಹೋಗುವಂತೆ ಯೆಹೋವನು ಮಾಡುವನು" (ಧರ್ಮೋ. 28:7).*

# ಕಣ್ಣೀರಿನ ಬೀಜ!

"ಅಳುತ್ತಾ ಬಿತ್ತುವವರು, ಹಾಡುತ್ತಾ ಕೊಯ್ಯುವರು" (ಕೀರ್ತ.126:5).

'ಪ್ರಾರ್ಥನೆ' ಎಂಬದು ಒಂದು 'ಬೀಜ' ವಾಗಿದೆ. ಪ್ರಾರ್ಥನೆಯು ಕರ್ತನ ಬುದ್ದಲಿಯಲ್ಲಿ ಹೋಗಿ ಸೇರುತ್ತದೆ. ನೀವು ಪ್ರಾರ್ಥಿಸುವಾಗ, ಸಾಧಾರಣವಾಗಿ ಪ್ರಾರ್ಥಿಸದೆ, ಕುಗ್ಗಿದ ಮತ್ತು ಜಜ್ಜಿದ ಹೃದಯದೊಂದಿಗೂ ಕಣ್ಣೀರಿನಿಂದಲೂ ಪ್ರಾರ್ಥಿಸುವಾಗ, ಆ ಬೀಜವು ಅಧಿಕ ಫಲವನ್ನು ನೀಡುತ್ತದೆ. ಗ್ರಾಮಸ್ಥರು ಬೀಜಗಳನ್ನು ಬಿತ್ತುವಾಗ, ಬೂದಿಯನ್ನು ಬೆರೆಸಿ ಬಿತ್ತುವರು. ಅದನ್ನು ಹುಳಗಳು ಕಡಿಯಲು ಸಾಧ್ಯವಿಲ್ಲ. ಹಕ್ಕಿಗಳು ತಿನ್ನಲು ಸಾಧ್ಯವಿಲ್ಲ. ಕೀರ್ತನೆಗಾರನು ಹೇಳುತ್ತಾನೆ "ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು, ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು". (ಕೀರ್ತ.126:6).

ಕೆಲವು ತಾಯಂದಿರು ತಮ್ಮ ಮಕ್ಕಳ ಅಭಿವೃದ್ಧಿಗಾಗಿ ಕಣ್ಣೀರಿನಿಂದ ಪ್ರಾರ್ಥಿಸುವವರಾಗಿರುವರು. ಮಕ್ಕಳು ಪರೀಕ್ಷೆ ಬರೆಯಲು ಹೋಗುವ ಸಮಯದಿಂದ, ಬರೆದು ಮುಗಿಸುವವರೆಗೂ ಮೊಣಕಾಲಲ್ಲಿ ನಿಲ್ಲುವರು. ತಮ್ಮ ಮಕ್ಕಳ ಭವಿಷ್ಯವು ಶುಭವಾಗಿರಬೇಕೆಂದು, ಕಷ್ಟಪಟ್ಟು ದುಡಿಯುವ ತಂದೆಗಳನ್ನು ನೋಡಿದ್ದೇನೆ. ನೀವು ಪ್ರಾರ್ಥಿಸುವಾಗ ಸಾಮಾನ್ಯವಾಗಿ ಪ್ರಾರ್ಥಿಸದೆ ಕಣ್ಣೀರಿನಿಂದ ಪ್ರಾರ್ಥಿಸಿರಿ. ಮುರಿದ ಮನಸ್ಸಿನಿಂದ ಪ್ರಾರ್ಥಿಸಿರಿ. "ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ, ಪಶ್ಚಾತ್ತಾಪದಿಂದ ಜಜ್ಜಿ ಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ" (ಕೀರ್ತ.51:17). ಕರ್ತನು ಅಂತಹ ಪ್ರಾರ್ಥನೆಯನ್ನು ತಿರಸ್ಕರಿಸಿ, ಹಾದು ಹೋಗುವದೇ ಇಲ್ಲ. ನಿಮ್ಮ ಕಣ್ಣೀರಿನ ಪ್ರಾರ್ಥನೆಯು ಆತನ ಅಂತರ್ಯವನ್ನು ಕರಗಿಸುವದು. ನಿಶ್ಚಯವಾಗಿಯೂ ಉತ್ತರ ಕೊಡುವನು. ಯೇಸುಕ್ರಿಸ್ತನನ್ನು ದೃಷ್ಟಿಸಿ ನೋಡಿರಿ. ಆತನು ಕನಿಕರವುಳ್ಳವನು. ಆತನ ಕಣ್ಣುಗಳು ಎಂತಹ ಕಣ್ಣುಗಳು? ಸತ್ಯವೇದವು ಹೇಳುತ್ತದೆ; "ಅವನ ಕಣ್ಣುಗಳೋ ತುಂಬಿತುಳುಕುವ ತೊರೆಗಳ ಹತ್ತಿರ ತಂಗುತ್ತಲೂ, ಕ್ಷೀರದಲ್ಲಿ ಸ್ನಾನ ಮಾಡುತ್ತಲೂ ಇರುವ ಪಾರಿವಾಳಗಳಂತಿವೆ" (ಪರಮ.5:12). ತನ್ನ ಸ್ನೇಹಿತನಾದ ಲಾಜರನ ಮರಣವನ್ನು ಆತನಿಂದ ಸಹಿಸಲಾರದೆ, ಮಾರ್ಥಳು, ಮರಿಯಳ ಸಂಗಡ ಸೇರಿ ಕಣ್ಣೀರು ಸುರಿಸಿದನು. ಆಗ ಯೆಹೂದ್ಯರು, "ಆಹಾ, ಈತನು ಅವನ ಮೇಲೆ ಎಷ್ಟೋಮಮತೆ ಇಟ್ಟಿದ್ದನು" ಅಂದರು. (ಯೋಹಾ.11:36). ಆ ಕಣ್ಣೀರಿನ ಹನಿಗಳು ಸತ್ತ ಲಾಜರನನ್ನು ಜೀವದಿಂದ ಎಬ್ಬಿಸಿತು. ಅದೇ ರೀತಿಯಾಗಿ ಯೆರೂಸಲೇಮಿಗೆ ಬರುವದಕ್ಕಿದ್ದಂಥ ನಾಶವನ್ನು ಆತನ ಪ್ರವಾದನಾ ನೇತ್ರಗಳು ಕಂಡಾಗ, ಕಣ್ಣೀರಿನ ಕೊಳವಾಯಿತು. ದೇವಮಕ್ಕಳೇ, ಕರ್ತನ ಪಾದವನ್ನು ಹಿಡಿದುಕೊಂಡು ನಿಮ್ಮ ವಿಜ್ಞಾಪನೆಗಳನ್ನು, ಕಣ್ಣೀರಿನಿಂದ ದೇವರಿಗೆ ತಿಳಿಯಪಡಿಸಿರಿ. ಆಗ ನಿಶ್ಚಯವಾಗಿಯೂ ಆತನು ಸದುತ್ತರವನ್ನು ದಯಪಾಲಿಸುವನು!

*ನೆನಪಿಗೆ : "ಅಯ್ಯೋ, ನನ್ನ ಶಿರಸ್ಸು ಜಲಮಯವಾಗಿಯೂ, ನನ್ನ ನೇತ್ರಗಳು ಕಣ್ಣೀರಿನ ಬುಗ್ಗೆಯಾಗಿಯೂ ಇದ್ದರೆ ಎಷ್ಟೋ ಲೇಸು!..." (ಯೆರೆ.9:1).*

# ವಿಜ್ಞಾಪಿಸಿರಿ!

"ನಾನಾದರೋ ನಿಮಗೋಸ್ಕರವಾಗಿ ಯೆಹೋವನನ್ನು ಪ್ರಾರ್ಥಿಸುತ್ತಾ, ಆತನ ಉತ್ತಮ ನೀತಿ ಮಾರ್ಗವನ್ನು ನಿಮಗೆ ತೋರಿಸಿಕೊಡುವದನ್ನು ಬಿಡುವದೇ ಇಲ್ಲ; ಬಿಟ್ಟರೆ ಆತನ ದೃಷ್ಟಿಯಲ್ಲಿ ಪಾಪಿಯಾಗಿರುವೆನು" (1ಸಮು.12:23).

ಪ್ರವಾದಿಯಾದ ಸಮುವೇಲನಿಗೆ ಸತ್ಯವೇದದಲ್ಲಿ ಒಂದು ಮುಖ್ಯವಾದ ಸ್ಥಳವುಂಟು. ಒಂದು ಕಡೆ ಆತನು ಕರ್ತನ ಪ್ರವಾದಿಯಾಗಿಯೂ ಮತ್ತೊಂದು ಕಡೆ ಇಸ್ರಾಯೇಲಿನ ನ್ಯಾಯಸ್ಥಾಪಕನಾಗಿಯೂ ಬೆಳಗಿದನು. ಇಸ್ರಾಯೇಲಿನ ಮೊದಲ ಅರಸನಾದ ಸೌಲನನ್ನು ಅಭಿಷೇಕ ಮಾಡಿದನು. ನಂತರ ದಾವೀದನನ್ನು ಸಮಸ್ತ ಇಸ್ರಾಯೇಲ್ಯರ ಅರಸನನ್ನಾಗಿ ಅಭಿಷೇಕ ಮಾಡಿದನು. ಇವರಿಬ್ಬರೂ ನಾಲ್ವತ್ತು, ನಾಲ್ವತ್ತು ವರ್ಷಗಳು ಇಸ್ರಾಯೇಲನ್ನು ಆಳ್ವಿಕೆ ಮಾಡಿದರು. ಪ್ರಾರ್ಥನಾವೀರರ ಪಟ್ಟಿಯಲ್ಲಿ ಸಮುವೇಲನಿಗೆ ಒಂದು ಮುಖ್ಯವಾದ ಸ್ಥಳವುಂಟು. "ನಾನು ನಿಮಗಾಗಿ ಪ್ರಾರ್ಥಿಸದೆ ಇದ್ದರೆ ದೇವರ ದೃಷ್ಟಿಯಲ್ಲಿ ಪಾಪಿಯಾಗಿರುವೆನು; ಅದು ನನಗೆ ದೂರವಾಗಿರಲಿ" ಎಂದನು (1 ಸಮು. 12:23). ಪ್ರಾರ್ಥನೆ ಮಾಡದಿರುವದು ದೊಡ್ಡ ಪಾಪವಾಗಿದೆ. ಅಂಥವರ ಜೀವಿತದಲ್ಲಿ ಒಂದೊಂದು ಪಾಪವಾಗಿ ನುಗ್ಗಿ, ಅಂತ್ಯದಲ್ಲಿ ಎಲ್ಲವೂ ಒಟ್ಟಾಗಿ ಸೇರಿ ದೊಡ್ಡ ಕಂತೆಯಾಗುವದು. ಪ್ರಾರ್ಥಿಸದವನು ತಾನೇ ಶತ್ರುವಿಗೆ ಬಾಗಿಲನ್ನು ತೆರೆಯುವವನಾಗಿರುವನು.

ಒಬ್ಬ ಯೌವಸ್ಥನು ಹೇಳಿದನು, ನಾನು ಪ್ರಾರ್ಥಿಸಿ ನೋಡಿದೆನು. ಯಾರೂ ಸ್ವಸ್ಥವಾಗಲಿಲ್ಲ. ಒಬ್ಬರೂ ಮಾನಸಾಂತರಪಡಲಿಲ್ಲ. ನಾನು ವಿಜ್ಞಾಪಿಸುವದರಿಂದ ಯಾರಿಗೇನು ಪ್ರಯೋಜನ? ಆದ್ದರಿಂದ ಪ್ರಾರ್ಥಿಸುವದನ್ನೇ ಬಿಟ್ಟುಬಿಟ್ಟೆನು ಎಂದನು. ಆದರೆ ದೇವರು, ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಬೇಕು ಅನ್ನುತ್ತಾನೆ (ಲೂಕ.18:1). "ಸೋತವನಿಗೆ ತ್ರಾಣವನ್ನು ಅನುಗ್ರಹಿಸಿ, ನಿರ್ಬಲನಿಗೆ ಬಹು ಬಲವನ್ನು ದಯಪಾಲಿಸುತ್ತಾನೆ" (ಯೆಶಾ.40:29). ಒಬ್ಬ ವ್ಯಕ್ತಿಯು ಓರಲ್ ರಾಬರ್ಟ್ಸ್‌ರವರ ಬಳಿ ಬಂದು "ಅಯ್ಯಾ, ನೀವು ಒಬ್ಬ ರೋಗಿಗಾಗಿ ಪ್ರಾರ್ಥಿಸುತ್ತೀರಿ. ಅವನು ಸತ್ತುಹೋಗುತ್ತಾನೆ. ಮತ್ತೊಬ್ಬನಿಗಾಗಿ ಪ್ರಾರ್ಥಿಸುತ್ತೀರಿ. ಅವನೂ ಸಹ ಸತ್ತುಹೋಗುತ್ತಾನೆ. ಹೀಗೆಯೇ ನೂರು ಮಂದಿಗಾಗಿ ಪ್ರಾರ್ಥಿಸಿ ಎಲ್ಲರೂ ಸತ್ತುಹೋದರೆ ಏನು ಮಾಡುವಿರಿ?" ಎಂದು ಕೇಳಿದನು. ರಾಬರ್ಟ್ಸ್‌ರವರು ಹೇಳಿದರು "ನೂರ ಒಂದನೇ ವ್ಯಕ್ತಿಗಾಗಿ ಹೋಗಿ ನಂಬಿಕೆಯಿಂದ ಪ್ರಾರ್ಥಿಸುವೆನು. ಸ್ವಸ್ಥಪಡಿಸುವದೋ ಅಥವಾ ಎಬ್ಬಿಸಿ ನಿಲ್ಲಿಸುವದೋ ದೇವರ ಕೈಯಲ್ಲಿದೆ. ಪ್ರಾರ್ಥಿಸುವ ನಾನು, ನನ್ನ ಕರ್ತವ್ಯವನ್ನು ನೆರವೇರಿಸುವೆನು" ಅಂದನು.

ಆದ್ದರಿಂದ ದೇವಮಕ್ಕಳೇ, ಬೇಸರಗೊಳ್ಳದೆ, ಮನ ಸೋತುಹೋಗದೆ ಪ್ರಾರ್ಥಿಸಿರಿ. ನಿಮ್ಮ ಜೀವಿತದಲ್ಲಿ ನಡೆಯುವದೆಲ್ಲವೂ ಆತನ ಚಿತ್ತದ ಪ್ರಕಾರ ಎಲ್ಲವೂ ಹಿತಕ್ಕಾಗಿಯೇ ನಡೆಯುವದು.

*ನೆನಪಿಗೆ : "ತನ್ನ ಪ್ರಾಣವನ್ನು ಧಾರೆಯೆರೆದು ಮರಣಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು... ಅವರಿಗಾಗಿ ವಿಜ್ಞಾಪನೆ ಮಾಡಿದನಲ್ಲಾ" (ಯೆಶಾ.53:12).*

# ಕರ್ತನಿಗೆ ಮಹಿಮೆ!



"ನನ್ನ ನ್ಯಾಯಸ್ಥಾಪನೆಯನ್ನು ಬಯಸುವವರು ಆನಂದದೊಡನೆ ಜಯಧ್ವನಿ ಮಾಡಲಿ, ತನ್ನ ಸೇವಕನ ಹಿತವನ್ನು ಕೋರುವ ಯೆಹೋವನಿಗೆ ಸ್ತೋತ್ರ ಎಂದು ಯಾವಾಗಲೂ ಹೇಳುವವರಾಗಲಿ" (ಕೀರ್ತ.35:27).

ನೀವು ತಿಳಿದಿದ್ದರೂ, ತಿಳಿಯದಿದ್ದರೂ ನಿಮಗಾಗಿ ಸಾವಿರಾರು ಮಂದಿ ಪ್ರಾರ್ಥಿಸಿದ್ದಿರಬಹುದು. ಸಮಸ್ಯೆಯ ಸಮಯದಲ್ಲಿ, ದೇವರು ಯಾರನ್ನಾದರೂ ಕಳುಹಿಸಿ ನಿಮಗಾಗಿ ಪ್ರಾರ್ಥನೆ ಮಾಡಿ, ನಿಮ್ಮನ್ನು ಸಂರಕ್ಷಿಸಿರಬಹುದು. ಪೇತ್ರನು ಸೆರೆಮನೆಯಲ್ಲಿದ್ದಾಗ, ಸಭೆಯವರು ಪೇತ್ರನಿಗಾಗಿ ಪ್ರಾರ್ಥಿಸಿದ್ದರಿಂದ ಬಂಧಿಸಲ್ಪಟ್ಟಿದ್ದ ಅವನನ್ನು ದೇವದೂತನು ಬಿಡುಗಡೆ ಮಾಡಿದನು.

ನನಗೆ ಮೂರು ವಯಸ್ಸಿರುವಾಗ ಭಯಾನಕವಾದ ವಿಷಜ್ವರದಿಂದ ಪೀಡಿತನಾಗಿ ಸಾಯುವ ಪರಿಸ್ಥಿತಿಗೆ ಬಂದುಬಿಟ್ಟೆನು. ಆಗ ಒಬ್ಬ ವಯಸ್ಸಾದ ದೇವಸೇವಕರು ನಮ್ಮ ಮನೆಗೆ ಬಂದು, ಇಡೀ ರಾತ್ರಿಯು ನಿದ್ರಿಸದೆ, ಕಣ್ಣೀರಿನಿಂದ ನನಗಾಗಿ ಕರ್ತನ ಬಳಿ ಗೋಳಾಡಿ ಪ್ರಾರ್ಥಿಸಿದರು. ಕರ್ತನು ಕರುಣಿಸಿ ನನ್ನನ್ನು ಸ್ವಸ್ಥಪಡಿಸುವವರೆಗೂ, ಅವರು ಮೊಣಕಾಲಿನಿಂದ ಎದ್ದೇಳಲೇ ಇಲ್ಲ. ಇದರಿಂದ ನನ್ನ ಜೀವವು ಉಳಿಯಿತು. ನನ್ನನ್ನು ಸೇವಕನಾಗಿ ಮಾಡಿತು. ನಾನು ಇತರರಿಗಾಗಿ ಪ್ರಾರ್ಥಿಸದಿದ್ದರೆ, ಅದು ಮಹಾ ದೊಡ್ಡ ಪಾಪವಲ್ಲವೇ?

ದೇಶಕ್ಕಾಗಿಯೂ, ಜನರಿಗಾಗಿಯೂ ಪ್ರಾರ್ಥಿಸುವವರನ್ನು ಕರ್ತನು ಎಂದಿಗೂ ಮರೆಯುವದೇ ಇಲ್ಲ. ಅವರನ್ನು ಮುದ್ರೆ ಹಾಕಿ ಹೆಚ್ಚಳಪಡಿಸುವನು. ಅಬ್ರಹಾಮನು ಒಬ್ಬ ಒಳ್ಳೆಯ ಪ್ರಾರ್ಥನಾವೀರನು. ಸೊದೋಮ್ ಗೊಮೋರವನ್ನು ನಾಶಮಾಡಲು ಕರ್ತನು ಹೊರಟಾಗ, ಸೊದೋಮ್ ಗೊಮೋರದಲ್ಲಿದ್ದ ನೀತಿವಂತರು, ಪಾಪಿಗಳೊಂದಿಗೆ ನಾಶವಾಗಬಾರದು ಎಂಬ ಭಾರವು, ಅಬ್ರಹಾಮನಿಗೆ ಇದ್ದಿತು. ಸೊದೋಮಿನಲ್ಲಿ ಐವತ್ತು ನೀತಿವಂತರಿದ್ದರೆ, ಆ ಸ್ಥಳವನ್ನು ರಕ್ಷಿಸುವೆನು. ಹತ್ತು ನೀತಿವಂತರಿದ್ದರೆ ಸೊದೋಮನ್ನು ನಾನು ನಾಶಮಾಡುವದಿಲ್ಲ ಎಂದು ಕರ್ತನು ಹೇಳಿದನು. ಅಲ್ಲಿದ್ದಂಥ ಒಬ್ಬನೇ ನೀತಿವಂತನಾದ ಲೋಟನನ್ನು, ಕರ್ತನು ಹೊರಗೆ ತಂದ ನಂತರವೇ, ಆ ಸ್ಥಳವನ್ನು ನಾಶಮಾಡಿದನು.

ದೇವಮಕ್ಕಳೇ, ನೀವು ಪ್ರಾರ್ಥಿಸದಿದ್ದರೆ, ಅದು ಕರ್ತನಿಗೆ ವಿರುದ್ಧವಾದ ಪಾಪವಲ್ಲವೇ? ಆದ್ದರಿಂದ ಆಸಕ್ತಿಯಿಂದ ಪ್ರಾರ್ಥಿಸಿರಿ. "ಸಹೋದರರೇ ನಮಗಾಗಿ ಬೇಡಿಕೊಳ್ಳಿರಿ" (1ಥೆಸ.5:25) ಎಂದು ಎಷ್ಟೋ ಉತ್ತರಭಾರತದ ಮಿಷನೆರಿಗಳು ಕೇಳಿಕೊಳ್ಳುತ್ತಿದ್ದಾರೆ. ಆದಿಯಲ್ಲಿದ್ದ ಸಭೆಗಳು ಆ ರೀತಿ ಪ್ರಾರ್ಥಿಸಿದರಲ್ಲವೇ?

*ನೆನಪಿಗೆ : ನಿನ್ನ ದಾಸರು ನಿನ್ನ ವಾಕ್ಯವನ್ನು ಧೈರ್ಯದಿಂದ ಹೇಳುವ ಹಾಗೆ ಅನುಗ್ರಹಿಸು ಅಂದರು (ಅಪೊ.4:30).*

## ಕೆಲಸದವರನ್ನು ಕಳುಹಿಸು!



"ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು" (ಮತ್ತಾ.9:37,38).

ನಾವು ಸೇವಕರ ಬಳಿ, ಪ್ರಾರ್ಥನಾ ನೆರವನ್ನು ಕೇಳುತ್ತೇವೆ. "ಅಯ್ಯಾ, ಈ ಮನವಿಗಳಿಗಾಗಿ ಭಾರದಿಂದ ಪ್ರಾರ್ಥಿಸಿರಿ". "ನೀತಿವಂತರ ಪ್ರಾರ್ಥನೆಯು ಬಹಳ ಪ್ರಯೋಜನಕರ" ಎನ್ನುತ್ತೇವೆ. ಆದರೆ ಇಲ್ಲಿ ಕರ್ತನೇ ನಮ್ಮ ಬಳಿಯಲ್ಲಿ ಪ್ರಾರ್ಥನಾ ಮನವಿಗಳನ್ನು ನೀಡಿ, "ಇದಕ್ಕಾಗಿ ತಂದೆಯಾದ ದೇವರ ಬಳಿ ಪ್ರಾರ್ಥಿಸಿರಿ" ಎಂದು ಹೇಳುತ್ತಾನೆ. ಆ ಮನವಿಯೇನು? "ದೇಶದ ಬೆಳೆಗೆ ಕೆಲಸದವರನ್ನು ಕಳುಹಿಸುವಂತೆ, ಆತನನ್ನು ಬೇಡಿಕೊಳ್ಳಿರಿ" ಎಂಬದೇ. ಭಾರತದೇಶದಲ್ಲಿ, ಇನ್ನೂ ಅನೇಕ ಸೇವಕರನ್ನು, ಮಿಷನೆರಿಗಳನ್ನು, ಬೋಧಕರನ್ನು ಕರ್ತನು ಎಬ್ಬಿಸುವಂತೆ ಆಸಕ್ತಿಯಿಂದ ಪ್ರಾರ್ಥಿಸಿರಿ. ಭಾರತ ಪೂರ್ತಿಯಾಗಿ ಸಂಧಿಸಲ್ಪಡಲು, ಕರ್ತನ ಮಹಿಮೆಯಾದ ಬರೋಣಕ್ಕೆ ಸಿದ್ಧವಾಗಲು, ಬೋಧಿಸುವದಕ್ಕೆ ಸಾಕಾದಷ್ಟು ಸೇವಕರಿಲ್ಲ. ಕ್ರಿಸ್ತನ ಕುರಿತು ಇನ್ನು ತಿಳಿಯದಿರುವ ಸ್ಥಳಗಳಲ್ಲಿ ಕ್ರಿಸ್ತನನ್ನು ಸಾರಲು, ಸೇವಕರೂ, ಸುವಾರ್ತಿಕರೂ ಬೇಕಾಗಿದ್ದಾರೆ.

"ದೇವರಿಂದ ಕಳುಹಿಸಲ್ಪಟ್ಟ ಒಬ್ಬ ಮನುಷ್ಯನಿದ್ದನು. ಅವನ ಹೆಸರು ಯೋಹಾನನು" (ಯೋಹಾ.1:6). ಹೌದು, ದೇವರಿಂದ ಕಳುಹಿಸಲ್ಪಡುವ ಸೇವಕರು ನಮಗೆ ಸಿಗಬೇಕು. ದೇವರ ಚಿತ್ತದ ಪ್ರಕಾರವೇ ಸೇವೆ ಮಾಡುವವರು, ಪರಿಶುದ್ಧವಾಗಿ ಜೀವಿಸಿ, ಕರ್ತನ ಹಾದಿಯಲ್ಲಿ ನಡೆಯುವವರು, ಇಂತಹ ಸೇವಕರೇ ನಮಗೆ ಅವಶ್ಯ. ಅಪೊ.ಪೌಲನೂ ಸಹ ಒಂದು ಪ್ರಾರ್ಥನಾ ಮನವಿಯನ್ನು ನಿಮ್ಮ ಮುಂದೆ ಇಟ್ಟಿದ್ದಾನೆ. "ಅದರ ವಿಷಯವಾಗಿ ಧೈರ್ಯದಿಂದ ಮಾತಾಡುವ ಹಂಗಿನಲ್ಲಿದ್ದೇನೆ; ಹಾಗೆಯೇ ನಾನು ಮಾತಾಡಬೇಕೆಂದು ನನಗೋಸ್ಕರ ಬೇಡಿಕೊಳ್ಳಿರಿ" (ಎಫೆ.6:20).

ನೀವು ಇತರರಿಗಾಗಿ, ಸೇವಕರಿಗಾಗಿ ಪ್ರಾರ್ಥಿಸುವದಕ್ಕೆ ಮುಂಚೆ ಯೇಸುಕ್ರಿಸ್ತನು ನಿಮಗಾಗಿ ಭಾರದಿಂದ ಪ್ರಾರ್ಥಿಸುತ್ತಾನೆ. ಯೇಸು ಒಂದು ದಿನ ಪೇತ್ರನನ್ನು ನೋಡಿ, "ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು; ಆದರೆ ನಿನ್ನ ನಂಬಿಕೆ ಕುಂದಿ ಹೋಗಬಾರದೆಂದು, ವಿಜ್ಞಾಪನೆ ಮಾಡಿಕೊಂಡೆನು" (ಲೂಕ.22:31,32) ಎಂದನು. ದೇವಮಕ್ಕಳೇ, ದೇಶಕ್ಕಾಗಿಯೂ, ಸೇವಕರಿಗಾಗಿಯೂ ಭಾರದಿಂದ ಪ್ರಾರ್ಥಿಸಿ, ದೊಡ್ಡ ಉಜ್ಜೀವನವನ್ನು ನಮ್ಮ ದೇಶದಲ್ಲಿ ಕಾಣೋಣ!

*ನೆನಪಿಗೆ : "ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು... ಅವರಿಗೋಸ್ಕರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ". (ಇಬ್ರಿ.7:25).*

# ಹನ್ನಳ ಪ್ರಾರ್ಥನೆ!



"ಹನ್ನಳು ಹೋಗಿ ಬಹು ದುಃಖದಿಂದ ಕಣ್ಣೀರು ಸುರಿಸುತ್ತಾ ಯೆಹೋವನನ್ನು ಕುರಿತು ಸೇನಾಧೀಶ್ವರನಾದ ಯೆಹೋವನೇ, ನಿನ್ನ ದಾಸಿಯ ದುಃಖವನ್ನು ಪರಾಂಬರಿಸು" (1ಸಮು.1:10,11).

ದೇವರು, ಪ್ರಾರ್ಥನೆಯನ್ನು ಕೇಳುವವನು ಮಾತ್ರವಲ್ಲ, ನಿಮ್ಮ ಪ್ರಾರ್ಥನೆಗೆ ಸದುತ್ತರ ದಯಪಾಲಿಸುವವನೂ ಆಗಿದ್ದಾನೆ. ನೀವು ಯೋಚಿಸುವದಕ್ಕೂ, ಬೇಡಿಕೊಳ್ಳುವದಕ್ಕೂ ಹೆಚ್ಚಾಗಿ ನಿಮ್ಮಲ್ಲಿ ಪ್ರೀತಿಯಿಟ್ಟು, ಉತ್ತಮವಾದ ಫಲವನ್ನು ಕಾಣಲು ಕೃಪೆ ನೀಡುವನು. ಆತನು ಕನಿಕರವೂ ಮಮತೆಯೂ ಉಳ್ಳವನು.

"ಹನ್ನಳು" ಎಂಬ ಪದಕ್ಕೆ, ದೇವರ ದಯೆ, ದೇವರ ಕೃಪೆ, ದೇವರ ಕರುಣೆ ಎಂಬವುಗಳೆಲ್ಲಾ ಅರ್ಥವಾಗಿದೆ. ಹಳೆಯ ಒಡಂಬಡಿಕೆಯಲ್ಲಿರುವ ಹನ್ನಳು, ಎಲ್ಕಾನ ಎಂಬ ಮನುಷ್ಯನ ಎರಡನೆಯ ಹೆಂಡತಿಯಾಗಿದ್ದಳು. ಈಕೆಗೆ ಮಕ್ಕಳಿರಲಿಲ್ಲ. ಆದರೆ ಅವಳ ಸವತಿಯಾದ ಪೆನಿನ್ನಳಿಗೆ ಮಕ್ಕಳಿದ್ದರು. ಅವಳು ಪ್ರತಿದಿನವೂ ತನ್ನ ಮಾತುಗಳಿಂದ ಹನ್ನಳನ್ನು ಚುಚ್ಚಿ, ವೇದನೆಪಡಿಸಿ, ಬಂಜೆ ಎಂದು ಪರಿಹಾಸ್ಯ ಮಾಡಿ, ನೋಯಿಸುತ್ತಿದ್ದಳು. ಆ ಚುಚ್ಚುವಿಕೆಯು, ಹನ್ನಳನ್ನು ಕರ್ತನ ಪಾದಕ್ಕೆ ಬಂದು ತನ್ನ ಹೃದಯವನ್ನು ಸುರಿದುಬಿಡುವಂತೆ ಪ್ರೇರಿಸಿತು. ನಿಮ್ಮ ಜೀವಿತದಲ್ಲಿ ಕರ್ತನು ಎಬ್ಬಿಸಿರುವ ಪೆನಿನ್ನಳಿಗಾಗಿ ಸ್ತೋತ್ರ ಸಲ್ಲಿಸಿರಿ. ಮುಳ್ಳು ಚುಚ್ಚುತ್ತಾ, ಚುಚ್ಚುತ್ತಾ ತಾವರೆಯು ಪರಿಮಳ ಬೀರುತ್ತದೆ. "ನನ್ನ ಪ್ರಿಯಳು ಮುಳ್ಳುಗಳ ಮಧ್ಯದಲ್ಲಿನ ತಾವರೆಯಂತೆ ಸ್ತ್ರೀಯರಲ್ಲಿ ಶ್ರೇಷ್ಠಳು" (ಪರಮ.2:2).

ಅಣ್ಣನಾದ ಏಸಾವನಿಗೆ ಭಯಪಟ್ಟದ್ದು, ಯಾಕೋಬನಿಗೆ ಮುಳ್ಳಿನ ಹಾಗೆ ಚುಚ್ಚಿತು. ಆಸಕ್ತಿಯಿಂದ ಪ್ರಾರ್ಥಿಸಲು ಪ್ರೇರಿಸಿತು. "ನೀನು ನನ್ನನ್ನು ಆಶೀರ್ವದಿಸಿದ ಹೊರತು ನಿನ್ನನ್ನು ಬಿಡುವದಿಲ್ಲ ಅಂದನು". (ಆದಿ 32:26). ಅಪೊ.ಪೌಲನನ್ನು ಚುಚ್ಚಿದ ಮುಳ್ಳು "ಕೃಪೆಯ ಮೇಲೆ ಕೃಪೆಯನ್ನು" ಹೊಂದುವಂತೆ ಮಾಡಿತು. ಹನ್ನಳು ಹಲವಾರು ಬಾಧೆಗಳು, ಉಪದ್ರವಗಳು, ಬಂಜೆ ಎಂಬ ಈಟಿಯಂಥ ಮಾತುಗಳೆಲ್ಲವನ್ನೂ ಸ್ವೀಕರಿಸಿಕೊಂಡು ದೇವರ ಸಮ್ಮುಖಕ್ಕೆ ಹೋಗಿ ಮನೋವ್ಯಥೆಯಿಂದ ಅಳುತ್ತಾ ವಿಜ್ಞಾಪನೆ ಮಾಡಿದಳು (1ಸಮು.1:10).

ದೇವಮಕ್ಕಳೇ, ಲೋಕರೀತಿಯಾಗಿ ಅಳುವದರೊಂದಿಗೆ ನಿಲ್ಲಿಸಿಬಿಡದೆ, ಕಣ್ಣೀರಿನಿಂದ ಕರ್ತನ ಬಳಿ ಕೇಳಿರಿ. "ಬೇಡಿಕೊಳ್ಳಿರಿ, ನಿಮಗೆ ದೊರೆಯುವದು" (ಮತ್ತಾ.7:7) ಎಂದು ಯೇಸುಕ್ರಿಸ್ತನು ವಾಗ್ದಾನ ಮಾಡಿದ್ದಾನಲ್ಲವೇ? ನಿಮ್ಮ ದುಃಖವು ಸಂತೋಷವಾಗಿ ಮಾರ್ಪಡಲು, ಕರ್ತನ ಬಳಿ ಬೇಡಿಕೊಂಡು ಪಡೆದುಕೊಳ್ಳಿರಿ!

*ನೆನಪಿಗೆ : "ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ, ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು" (ಯೋಹಾ.16:23).*

# ಉಪವಾಸ ಪ್ರಾರ್ಥನೆ!



"ಹನ್ನಾ, ಏಕೆ ಅಳುತ್ತೀ? ಉಣ್ಣದಿರುವದಕ್ಕೇನು ಕಾರಣ? ನೀನು ವ್ಯಸನ ಪಡುವದೇಕೆ?" (1ಸಮು.1:8).

ಹನ್ನಳು ಮಾಡಿದಂಥ ಪ್ರಾರ್ಥನೆಯು ಸಾಧಾರಣವಾದದ್ದಲ್ಲ. ಉಣ್ಣದಿರುವದಕ್ಕೇನು ಕಾರಣ? ಕುಗ್ಗಿಸಿ ಉಪವಾಸದಿಂದ ವೈರಾಗ್ಯವಾಗಿ ಪ್ರಾರ್ಥಿಸಿದಳು ಎಂಬದನ್ನು ತಿಳಿಯಬಹುದು. ಆಕೆಯು ತನ್ನ ಮನೋವೇದನೆಯನ್ನು ಯೆಹೋವನ ಮುಂದೆ ಹೊಯ್ದಳು. ಅವಳ ದುಃಖ, ಕಣ್ಣೀರು, ಮನೋವ್ಯಥೆ ಉಪವಾಸವಿದ್ದು ಪ್ರಾರ್ಥಿಸುವಂತೆ ಅವಳನ್ನು ಪ್ರೇರಿಸಿತು. ಹನ್ನಳು ಪ್ರಾರ್ಥಿಸಲು ಸರಿಯಾದ ಸ್ಥಳಕ್ಕೆ ಬಂದಿದ್ದಳು. ಸರಿಯಾದ ವ್ಯಕ್ತಿಯ ಪಾದವನ್ನು ಹಿಡಿದಿದ್ದಳು. ಸರಿಯಾದ ಆಸಕ್ತಿಯುಳ್ಳ ಪ್ರಾರ್ಥನೆಯನ್ನು ಅವಳು ಮಾಡಿದಳು. ಅವಳೂ ಬಂದಿದ್ದ ಸ್ಥಳವು ಕರ್ತನ ಪ್ರಸನ್ನತೆಯಿಂದ ತುಂಬಿರುವ ದೇವಾಲಯವಾಗಿತ್ತು. ತನ್ನ ಹೆಚ್ಚಾದ ಚಿಂತೆಯನ್ನೂ, ವ್ಯಥೆಯನ್ನೂ ದೇವರ ಬಳಿ ಅರಿಕೆ ಮಾಡಿದಳು (1ಸಮು.1:16).

ಒಬ್ಬ ದೇವಮನುಷ್ಯನು, ಬೀದಿಯಲ್ಲಿ ನಿಂತು ಪ್ರಸಂಗ ಮಾಡುತ್ತಿದ್ದರು. ಆಗ ಮೂರು ರೌಡಿಗಳು ಅಲ್ಲಿ ಬಂದು "ಮತ ಪ್ರಚಾರ ಮಾಡುತ್ತೀಯಾ?" ಎಂದು ಕೇಳಿ, ಅವರ ಕಪಾಳದಲ್ಲಿ "ಪಳಾರ್ ಪಳಾರ್" ಎಂದು ಹೊಡೆದು ಬಿಟ್ಟು ಹೋಗಿಬಿಟ್ಟರು. ಆ ದೇವ ಮನುಷ್ಯ, ಕೆಳಗೆ ಬಿದ್ದು ಹೋದರು. ಏಟು ತಿಂದ ನೋವು ಒಂದು ಕಡೆ ಅವಮಾನ ಮತ್ತೊಂದು ಕಡೆ. ನೇರವಾಗಿ ತನ್ನ ಮನೆಗೆ ಬಂದು ಕರ್ತನ ಮುಂದೆ ಮೊಣಕಾಲೂರಿ, ಅಳುತ್ತಾ ವೈರಾಗ್ಯದಿಂದ ಪ್ರಾರ್ಥಿಸತೊಡಗಿದರು. ಏನೂ ತಿನ್ನಲಿಲ್ಲ, ನೀರೂ ಕುಡಿಯಲಿಲ್ಲ. ಸಂಜೆಯಲ್ಲಿ, ಹೊಡೆದವರಲ್ಲಿ ಒಬ್ಬನು ಅಳುತ್ತಾ ಬಂದು "ಅಯ್ಯಾ, ನನಗೆ ನಡುಕವು ಹಿಡಿದಿದೆ. ಮರಣಭಯವು ಕಾಡಿಸುತ್ತಿದೆ, ನನ್ನ ತಲೆಯಲ್ಲಿ ಬೆಂಕಿ ಹತ್ತಿ ಉರಿಯುವಂತಿದೆ. ನಿಮ್ಮನ್ನು ಹೊಡೆದದ್ದಕ್ಕಾಗಿ ಕ್ಷಮಿಸಿರಿ" ಎಂದು ಹೇಳಿ ಕಾಲಲ್ಲಿ ಬಿದ್ದು ಗೋಳಾಡಿದನು. ಅವನನ್ನು ಪಾಪಕ್ಷಮಾಪಣೆ ಹೊಂದುವಂತೆ ಕರ್ತನ ಕಡೆ ನಡೆಸಿದರು.

ಸ್ವಲ್ಪ ಸಮಯದಲ್ಲಿ, ಅವರನ್ನು ಹೊಡೆದ ಮತ್ತೊಬ್ಬನ ಮೇಲೆ ಬಸ್ ಹತ್ತಿ, ದೊಡ್ಡ ಅಪಘಾತವಾಗಿ ಸತ್ತುಹೋದನು. ಮೂರನೆಯವನು ತನ್ನ ಮನೆಗೆ ಹೋಗುವ ದಾರಿಯಲ್ಲೇ ಹುಚ್ಚನಾಗಿಬಿಟ್ಟನು. "ನಿನ್ನನ್ನು ಮುಟ್ಟುವವನು, ನನ್ನ ಕಣ್ಣುಗುಡ್ಡೆಯನ್ನು ಮುಟ್ಟುವನು" ಎಂದು ವಾಗ್ದಾನ ಮಾಡಿದ ದೇವರು, ತಮ್ಮ ಮಕ್ಕಳನ್ನು ಕಣ್ಣುಗುಡ್ಡಿನಂತೆ ಸಂರಕ್ಷಿಸಲು ಶಕ್ತನಾಗಿದ್ದಾನೆ. ದೇವಮಕ್ಕಳೇ, ತೀರದ ಸಮಸ್ಯೆಗಳು ಬರುವಾಗ, ಎಲ್ಲವನ್ನೂ ಜಯಿಸಲು ಉಪವಾಸಿಸಿ ಪ್ರಾರ್ಥಿಸಿರಿ!

*ನೆನಪಿಗೆ : "ಯೆಹೋವನು ಇಂತೆನ್ನುತ್ತಾನೆ – ಈಗಲಾದರೋ ನೀವು ಮನಃಪೂರ್ವಕವಾಗಿ ನನ್ನ ಕಡೆಗೆ ತಿರುಗಿಕೊಂಡು, ಉಪವಾಸ ಮಾಡಿರಿ, ಅಳಿರಿ, ಗೋಳಾಡಿರಿ" (ಯೋವೇ.2:12).*

# ಹೃದಯವನ್ನು ಸುರಿದುಬಿಡು!



"ರಾತ್ರಿಯ ಒಂದೊಂದು ಜಾವದಲ್ಲಿ ಗೋಳಾಡಿರಿ, ನಿಮ್ಮ ಹೃದಯಸಾರವನ್ನು ನೀರನ್ನೋ ಎಂಬಂತೆ ಕರ್ತನ ಸಮ್ಮುಖದಲ್ಲಿ ಹೊಯ್ದುಬಿಡಿರಿ" (ಪ್ರಲಾ.2:19).

ಪ್ರಾರ್ಥನೆಯಲ್ಲಿ ಒಂದು ವಿಧವಾದ ಪ್ರಾರ್ಥನೆಯು, ಹೃದಯವನ್ನು ನೀರನ್ನೋ ಎಂಬಂತೆ ಕರ್ತನ ಪಾದದಲ್ಲಿ ಹೊಯ್ದು ಪ್ರಾರ್ಥಿಸುವದಾಗಿದೆ. ದಾವೀದನು ಕಣ್ಣೀರಿನಿಂದ ಹೇಳಿದನು, "ನನ್ನ ಚಿಂತೆಗಳನ್ನು ಆತನ ಮುಂದೆ ಬಿಚ್ಚುವೆನು" (ಕೀರ್ತ.142:2). ಒಂದು ವೇಳೆ ನೀವು ಮುರಿದ ಮನಸ್ಸಿನೊಂದಿಗೆ, ಜಜ್ಜಿದ ಹೃದಯದೊಂದಿಗೆ ಇದ್ದೀರಾ? ನಿಮ್ಮ ಚಿಂತೆಗಳನ್ನು ಕರ್ತನ ಪಾದದಲ್ಲಿ ಹೊಯ್ದುಬಿಡಿರಿ.

ಒಂದು ಸಾರಿ, ಯೇಸುಕ್ರಿಸ್ತನು ಬೆಥಾನ್ಯದಲ್ಲಿರುವ ಸೀಮೋನ ಎಂಬವನ ಮನೆಗೆ ಔತಣಕ್ಕಾಗಿ ಬಂದಾಗ, ಆಹ್ವಾನಿಸಲ್ಪಡದ ಅತಿಥಿಯಾಗಿ ಒಬ್ಬ ಹೆಂಗಸು ಓಡಿ ಬಂದು ಪಂಕ್ತಿಯಲ್ಲಿದ್ದಂಥ ಯೇಸುವಿನ ಪಾದದಲ್ಲಿ ಬಿದ್ದಳು. ಪಾದವನ್ನು ಅಪ್ಪಿಕೊಂಡು ಮುದ್ದಿಟ್ಟು, ಕಣ್ಣೀರಿನಿಂದ ನೆನಸಿದಳು. ಅವಳು ಬಾಯಿಂದ ಏನೂ ಮಾತಾಡಲಿಲ್ಲ. ಆದರೆ ಅವಳು ಹೃದಯವನ್ನು ಹೊಯ್ದು ಪ್ರಾರ್ಥಿಸಿದ್ದರಿಂದ, ಯೇಸು ಅವಳ ಎಲ್ಲಾ ಪಾಪವನ್ನು ಕ್ಷಮಿಸಿದ್ದು ಮಾತ್ರವಲ್ಲದೆ, "ಅವಳು ಹೆಚ್ಚಾಗಿ ನನ್ನಲ್ಲಿ ಪ್ರೀತಿಯಿಟ್ಟಳು" ಎಂದು ಸಾಕ್ಷಿಯಾಗಿ ಹೇಳಿದನು.

ಒಮ್ಮೆ ಇಸ್ರಾಯೇಲ್ ಜನರನ್ನು ಫಿಲಿಷ್ಟಿಯರು ಆಕ್ರಮಿಸಲು ಬಂದಾಗ, ಸಮುವೇಲನು ಇಸ್ರಾಯೇಲ್ ಜನರೆಲ್ಲರನ್ನೂ ಮಿಚ್ಪೆಯಲ್ಲಿ ಕೂಡಿ ಬರಮಾಡಿ, ನೀರು ಸೇದಿ ಯೆಹೋವನ ಮುಂದೆ ಹೊಯ್ದು, ಆ ದಿವಸ ಉಪವಾಸವಿದ್ದು, ನಿನಗೆ ದ್ರೋಹಿಗಳಾಗಿದ್ದೇವೆಂದು ಪ್ರಾರ್ಥಿಸಿದರು. ಆ ಪ್ರಾರ್ಥನೆಯನ್ನು ಕರ್ತನು ಕೇಳಿ, ಆತನೇ ಇಸ್ರಾಯೇಲ್ಯರಿಗಾಗಿ ಯುದ್ಧಮಾಡಿ, ಜಯವನ್ನನುಗ್ರಹಿಸಿದನು (1ಸಮು.7:6). ಹಳೆಯ ಮತ್ತು ಹೊಸ ಒಡಂಬಡಿಕೆಯ ಭಕ್ತರು, ಹೃದಯವನ್ನು ಸುರಿದು ಪ್ರಾರ್ಥಿಸುವ ಮಾರ್ಗವನ್ನು ಕಲಿತಿದ್ದರು. ವಿಶೇಷವಾಗಿ ಪ್ರವಾದಿಯಾದ ಯೆರೆಮೀಯನು, 'ಪ್ರಲಾಪಿಸುವ ಪ್ರವಾದಿ' ಎಂದು ಕರೆಯಲ್ಪಟ್ಟನು. ಬಾಬೆಲಿಗೆ ಸೆರೆಒಯ್ಯಲ್ಪಟ್ಟ ಯೆರೂಸಲೇಮ್ ಕುಮಾರ್ತೆಯರಿಗಾಗಿ, ಅವನ ಕಣ್ಣೀರು ಹೊಳೆಯಾಗಿ ಸುರಿಯಿತು. ಭಾರದಿಂದ ಪ್ರಾರ್ಥಿಸಿದನು. ಆದ್ದರಿಂದ ಸೆರಾವಸ್ಥೆಯಲ್ಲಿದ್ದಂಥ ಜನರು ತಕ್ಕ ಸಮಯದಲ್ಲಿ ಬಿಡುಗಡೆಯಾಗಿ ತಮ್ಮ ಸ್ವದೇಶಕ್ಕೆ ಹಿಂದಿರುಗಿದರು. ದೇವಮಕ್ಕಳೇ, ನೀವೂ ಸಹ ಕರ್ತನ ಸನ್ನಿಧಾನದಲ್ಲಿ ಹೃದಯವನ್ನು ಹೊಯ್ದು ಪ್ರಾರ್ಥಿಸುವಂತೆ ಕಣ್ಣೀರಿನ ಆತ್ಮವನ್ನು ಕೇಳಿರಿ. ವಿಜ್ಞಾಪನಾತ್ಮವನ್ನೂ, ಗೋಳಾಟದ ಆತ್ಮವನ್ನೂ ಕೇಳಿರಿ. ನಿಮ್ಮ ಕಣ್ಣುಗಳು ಬತ್ತಿಹೋಗಬಾರದು. ಇಂತಹ ಪ್ರಾರ್ಥನೆಯನ್ನು ಕರ್ತನು ತಿರಸ್ಕರಿಸುವದೇ ಇಲ್ಲ.

*ನೆನಪಿಗೆ : "ಸಮಾಧಾನದಿಂದ ಹೋಗು; ಇಸ್ರಾಯೇಲ್ ದೇವರು ನಿನ್ನ ಪ್ರಾರ್ಥನೆಯನ್ನು ನೆರವೇರಿಸಲಿ ಅಂದನು" (1 ಸಮು.1:17).*

## ಖಚಿತವಾದ ಪ್ರಾರ್ಥನೆ!



"ನನಗೆ ಕಣ್ಣು ಬರುವಂತೆ ಮಾಡಬೇಕು, ಸ್ವಾಮೀ ಅಂದನು. ಯೇಸು ಅವನಿಗೆ ನಿನಗೆ ಕಣ್ಣು ಬರಲಿ; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿ ಅದೆ ಎಂದು ಹೇಳಿದನು" (ಲೂಕ.18:41,42).

ನೀವು ಕರ್ತನ ಬಳಿ ಪ್ರಾರ್ಥಿಸುವಾಗ, ನಿಮ್ಮ ಪ್ರಾರ್ಥನಾ ವಿಜ್ಞಾಪನೆಗಳು ಖಚಿತವಾಗಿಯೂ, ಸ್ಪಷ್ಟವಾಗಿಯೂ ಇರಲಿ. ನೋಡಿರಿ! ಯೆರಿಕೋ ಬೀದಿಯಲ್ಲಿದ್ದ ಬಾರ್ತಿಮಾಯ ಎಂಬ ಕುರುಡನು, ನಜರೇತಿನ ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ತಿಳಿದು, "ದಾವೀದನ ಕುಮಾರನೇ ನನ್ನನ್ನು ಕರುಣಿಸು" ಎಂದು ಕೂಗಿದನು. ಅವನ ಬೇಡಿಕೆಯು ಅಸ್ಪಷ್ಟವಾಗಿತ್ತು. ಆದ್ದರಿಂದಲೇ ಯೇಸು ಅವನನ್ನು ನೋಡಿ : "ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತೀ?" ಎಂದು ಕೇಳಿದನು. ಹಾಗೆಯೇ ಕರ್ತನು, ಅವನ ಕುರುಡಾದ ಕಣ್ಣುಗಳು ತೆರೆಯುವಂತೆ ಮಾಡಿದನು (ಮಾರ್ಕ.10:46–52).

ನಮ್ಮ ಆಲಯದಲ್ಲಿ ಅನೇಕ ವರ್ಷಗಳಿಂದ ಎರಡು ವಿಧವಾದ ಅದ್ಭುತಗಳು ನಡೆಯುತ್ತಲೇ ಇವೆ. ಮೊದಲನೆಯದಾಗಿ, ಆಸ್ತಮಾ ರೋಗದಿಂದ ಬರುವವರು ಸ್ವಸ್ಥವಾಗುವರು. ಎರಡನೆಯದಾಗಿ, ಪುತ್ರಸಂತಾನವಿಲ್ಲದೆ ದುಃಖಿಸುವವರು ಗರ್ಭದ ಫಲವನ್ನು ಹೊಂದುವರು. ಹಾಗೆ ಗರ್ಭದ ಫಲವನ್ನು ಎದುರು ನೋಡುವವರಿಗೆ ನಾನು ಕೆಲವು ಪ್ರಶ್ನೆಗಳನ್ನು ಕೇಳುವದುಂಟು. "ನೀವು ಕರ್ತನ ಬಳಿ ಯಾವ ಮಗುವನ್ನು ಎದುರು ನೋಡುತ್ತೀರಿ? ಮಗುವಿಗೆ ಯಾವ ಹೆಸರನ್ನು ಇಡುವಿರಿ? ಎಂದು ಕೇಳುವೆನು. ಕೆಲವರು, "ಕರ್ತನು ಯಾವ ಮಗುವನ್ನು ಕೊಟ್ಟರೂ ಸರಿ" ಅನ್ನುವರು. ಇನ್ನು ಕೆಲವರು "ನಾನು ನನ್ನ ಗಂಡ ಅಥವಾ ಹೆಂಡತಿಯನ್ನು ಕೇಳಿದ ನಂತರ ಹೇಳುತ್ತೇನೆ. ಅನ್ನುವರು. ಸರಿ, ಯೋಚಿಸಿ ಒಂದು ತೀರ್ಮಾನ ಮಾಡಿ ನಂತರ ಬನ್ನಿರಿ ಎಂದು ಹೇಳಿ ಕಳುಹಿಸಿಬಿಡುವೆನು. ಅಂಥವರಿಗೆ ತಕ್ಷಣವೇ ಗರ್ಭದ ಫಲವು ಸಿಗುವುದಿಲ್ಲ.

ಒಬ್ಬ ದಂಪತಿಯರಿಗೆ ಹತ್ತು ವರ್ಷಗಳಿಂದ ಮಕ್ಕಳಿಲ್ಲ. ನಾನು ವಾಡಿಕೆಯಾಗಿ ಕೇಳುವ ಪ್ರಶ್ನೆಯನ್ನು ಕೇಳಿದೆನು. ಕೂಡಲೆ ಆ ಸಹೋದರಿಯು ಸ್ಪಷ್ಟವಾಗಿ "ನಮಗೆ ಹೆಣ್ಣು ಮಗು ಬೇಕು. ಆ ಮಗುವಿಗೆ ದೆಬೋರಾ ಎಂದು ಹೆಸರಿಡುವೆವು" ಎಂದು ಖಚಿತವಾಗಿಯೂ, ಸ್ಪಷ್ಟವಾಗಿಯೂ ಹೇಳಿದಳು. ಅವರಿಗಾಗಿ ನಾನು ಭಾರದಿಂದ ಪ್ರಾರ್ಥಿಸಿದಾಗ, ಮುಂದಿನ ವರ್ಷದಲ್ಲಿ, ಅದೇ ರೀತಿಯಾಗಿ ಹೆಣ್ಣು ಮಗು ಹುಟ್ಟಿತು. ಆ ಮಗುವಿಗೆ ದೆಬೋರಾ ಎಂದು ಹೆಸರಿಟ್ಟರು. ದೇವಮಕ್ಕಳೇ, ನಿಮ್ಮ ಪ್ರಾರ್ಥನೆಯೂ ಹೀಗೆಯೇ ಇರಲಿ. ಕರ್ತನು ನಿಮಗೆ ಅದ್ಭುತಗಳನ್ನು ಮಾಡುವನು.

*ನೆನಪಿಗೆ : "ಯೆಹೋವನಲ್ಲಿ ಸಂತೋಷಿಸುವಿ ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು" (ಕೀರ್ತ.37:4).*

## ಹರಕೆಯ ಪ್ರಾರ್ಥನೆ!



"ನಿನ್ನಿಂದ ನನಗೆ ಬರುವ ಎಲ್ಲಾ ಆಸ್ತಿರುಲ್ಲಿ ಹತ್ತರಲ್ಲೊಂದು ಪಾಲನ್ನು ನಿನಗೆ ಸಮರ್ಪಿಸುವೆನೆಂಬದಾಗಿ (ಯಾಕೋಬನು)...ಹರಕೆ ಮಾಡಿಕೊಂಡನು" (ಆದಿ.28:22).

ನಿಮ್ಮ ಪ್ರಾರ್ಥನೆಗಳಿಗೆ ಸರಿಯಾದ ಉತ್ತರಗಳು ಬರದಿದ್ದರೆ, ಹರಕೆಮಾಡಿ ಪ್ರಾರ್ಥಿಸಿರಿ. ಕರ್ತನಿಗೆ ಪೂರ್ಣವಾಗಿ ಅರ್ಪಿಸಿ ಪ್ರಾರ್ಥಿಸಿರಿ. ಹರಕೆಯ ಪ್ರಾರ್ಥನೆಯಲ್ಲಿ ಕರ್ತನೂ ಒಂದು ಪಾಲುಗಾರನಾಗಿ ಬಿಡುತ್ತಾನೆ. ಇಂತಹ ಪ್ರಾರ್ಥನೆಗೆ ನಿಶ್ಚಯವಾಗಿಯೂ ಉತ್ತರವುಂಟು. ಒಂಟಿಯಾಗಿ ಮನೆಯನ್ನು ಬಿಟ್ಟು ಹೊರಟ ಯಾಕೋಬನು, ಕರ್ತನ ಬಳಿ ಹರಕೆ ಮಾಡಿದನು. "ದೇವರು ನನ್ನ ಸಂಗಡ ಇದ್ದು, ನಾನು ಹೋಗುವ ಈ ಮಾರ್ಗದಲ್ಲಿ ನನ್ನನ್ನು ಕಾಪಾಡಿ ತಿನ್ನುವದಕ್ಕೆ ಆಹಾರವನ್ನೂ, ಉಡುವದಕ್ಕೆ ವಸ್ತ್ರವನ್ನೂ ಕೊಟ್ಟು, ತಿರಿಗಿ ನನ್ನನ್ನು ನನ್ನ ತಂದೆಯ ಮನೆಗೆ ಸುರಕ್ಷಿತವಾಗಿ ಬರಮಾಡಿದರೆ, ಯೆಹೋವನೇ ನನ್ನ ದೇವರಾಗಿರುವನು ಮತ್ತು ನಾನು ಕಂಬವಾಗಿ ನಿಲ್ಲಿಸಿರುವ ಈ ಕಲ್ಲು ದೇವರಮನೆಯಾಗುವದು. ಇದಲ್ಲದೆ ನಿನ್ನಿಂದ ನನಗೆ ಬರುವ ಎಲ್ಲಾ ಆಸ್ತಿಯಲ್ಲಿ ಹತ್ತರಲ್ಲೊಂದು ಪಾಲನ್ನು ನಿನಗೆ ಸಮರ್ಪಿಸುವೆನೆಂಬದಾಗಿ ಮಾತುಕೊಡುತ್ತೇನೆ ಎಂದು ಹರಕೆ ಮಾಡಿಕೊಂಡನು" (ಆದಿ.28:20–22). ಆ ಪ್ರಾರ್ಥನೆಯನ್ನು ಕರ್ತನು ಕೇಳಿದನು. ಮನಃಪೂರ್ವಕವಾಗಿ ಯಾಕೋಬನನ್ನು ಆಶೀರ್ವದಿಸಿದನು. ಇಪ್ಪತ್ತು ವರ್ಷಗಳ ನಂತರ ಎರಡು ದೊಡ್ಡ ಪರಿವಾರಗಳೊಂದಿಗೆ ಅವನು ತನ್ನ ತಂದೆಯ ಮನೆಗೆ ಹಿಂದಿರುಗುವಂತೆ ಕೃಪೆ ನೀಡಿದನು.

ನಿಮಗೆ ಅನೇಕ ದಿವಸಗಳಿಂದ ಸರಿಯಾದ ಉದ್ಯೋಗ ಸಿಗಲಿಲ್ಲವಾ? ಮಕ್ಕಳಿಗೆ ಮದುವೆಯಾಗಲಿಲ್ಲವಾ? ಮನೆಯನ್ನು ಖರೀದಿಸಬೇಕೆಂಬ ಬಯಕೆಯು ನೆರವೇರಲಿಲ್ಲವಾ? ಕರ್ತನ ಬಳಿ ಹರಕೆ ಮಾಡಿ ಪ್ರಾರ್ಥಿಸಿರಿ. ಕೆಲವರ ಹರಕೆಯು ಯಾವ ಪ್ರಯೋಜನವೂ ಇಲ್ಲದಂತಾಗಿರುತ್ತದೆ. ನನಗೆ ಎರಡು ಮಹಡಿಯ ಮನೆಯನ್ನು ಕಟ್ಟಿಕೊಟ್ಟರೆ, ಎರಡು ಪತ್ರಿಕೆಗಳಲ್ಲಿ ಸಾಕ್ಷಿ ಬರೆಯುವೆನು ಎಂದು ಹರಕೆ ಮಾಡುತ್ತಾರೆ. ಇವರು ಬರೆಯುವ ಸಾಕ್ಷಿಯು ಯಾವ ಪತ್ರಿಕೆಯಲ್ಲೂ ಬರುವದಿಲ್ಲ. ಅದಕ್ಕೆ ಬದಲಾಗಿ, "ಕರ್ತನು ನನಗೊಂದು ಮನೆಯನ್ನು ಕಟ್ಟುವದಕ್ಕಿಂತ ಮುಂಚೆ ನಾನು ಆತನಿಗೆ ಒಂದು ಆಲಯವನ್ನು ಕಟ್ಟುವೆನು. ಬಡಜನರಿಗೆ 100 ಸತ್ಯವೇದವನ್ನು ಹಂಚುವೆನು. ನನ್ನ ಮನೆಯಲ್ಲಿ ವಾರಕ್ಕೆ ಒಂದು ಸಾರಿ ಪ್ರಾರ್ಥನಾ ಕೂಟವನ್ನು ನಡೆಸುವೆನು" ಎಂದು ಪ್ರಾರ್ಥಿಸಿರಿ. ಕರ್ತನು ನಿಶ್ಚಯವಾಗಿಯೂ ನಿಮ್ಮ ಮನೆಯನ್ನು ಆಶೀರ್ವದಿಸುವನು. ದೇವಮಕ್ಕಳೇ, ಇಂದೇ ಒಂದು ನಿರ್ಧಾರ ಮಾಡಿರಿ. ಕರ್ತನು ನಿಮ್ಮನ್ನು ಆಕಾಶದ ದ್ವಾರಗಳನ್ನು ತೆರೆದು ಆಶೀರ್ವದಿಸಲು ಸಿದ್ಧನಾಗಿದ್ದಾನೆ.

*ನೆನಪಿಗೆ : "ಆತನು ನನ್ನ ಪ್ರಾರ್ಥನೆಯ ಫಲವಾಗಿ ಅನುಗ್ರಹಿಸಿದ ಮಗನು ಇವನೇ; ನಾನು ಇವನನ್ನು ಯೆಹೋವನಿಗೇ ಒಪ್ಪಿಸಿಬಿಟ್ಟಿದ್ದೇನೆ" (1ಸಮು.1:27,28).*

## ಆಸನ ಪ್ರಾರ್ಥನೆ!

"ಯೆಹೋವನೇ, ಬಲಿಷ್ಠನು ಬಲಹೀನನ ಮೇಲೆ ಬೀಳುವಲ್ಲಿ ನಿನ್ನ ಹೊರತು ರಕ್ಷಕನಿಲ್ಲ" (2ಪೂರ್ವ.14:11).

ಅರಸನಾದ ಆಸನು ಯೆಹೂದದ ಆರನೆಯ ಅರಸನಾಗಿ ಆಳಿದನು. ಈತನು ರಾಜ್ಯಭಾರವನ್ನು ಮಾಡಲು ಪ್ರಾರಂಭಿಸಿದ ಕೂಡಲೇ ಕರ್ತನನ್ನು ಮುಂದಿಟ್ಟು ಆತನಲ್ಲಿ ಪ್ರೀತಿಯಿಟ್ಟು, ಕರ್ತನನ್ನು ಪೂರ್ಣಹೃದಯದಿಂದ ಹುಡುಕಿದನು. ಇದರಿಂದ ಹತ್ತು ವರ್ಷಗಳು, ಆ ದೇಶವು ಸಮಾಧಾನವಾಗಿದ್ದಿತು. ಶತ್ರುಗಳಿಲ್ಲದೆ ವಿಶ್ರಮಿಸಿತು. ಆದರೆ ತರುವಾಯ ಐಥಿಯೋಪ್ಯದವರೂ, ಹಲವಾರು ಅನ್ಯಜನಾಂಗದವರೂ ಯಾವ ಕಾರಣವೂ ಇಲ್ಲದೆ, ಆಸನಿಗೆ ವಿರುದ್ಧವಾಗಿ ದಂಡೆತ್ತಿ ಬಂದರು. ಆ ಶತ್ರುಗಳ ಸೈನ್ಯದಲ್ಲಿ ಹತ್ತು ಲಕ್ಷ ರಣವೀರರಿದ್ದರು. ಅವರ ಬಳಿ ಮುನ್ನೂರು ರಥಗಳಿದ್ದವು. ಆದರೆ ಇಸ್ರಾಯೇಲ್ಯರ ಬಳಿ ಅಷ್ಟು ರಥಗಳಿಲ್ಲ.ಇದರಿಂದ ಆಸನಿಗೆ ಸೋಲಿನ ಮನೋಭಾವನೆಯೂ, ಭಯವೂ ಹುಟ್ಟಿತು. ನಾನು ಬಲಹೀನನು ಎಂಬ ಯೋಚನೆ ಬಂದಿತು. ಆದ್ದರಿಂದ ಅವನು ನೇರವಾಗಿ ಕರ್ತನ ಸಮ್ಮುಖದಲ್ಲಿ ಹೋಗಿ ಗೋಳಾಡಿ ಪ್ರಾರ್ಥಿಸಿದನು. "ಕರ್ತನೇ, ಬಲಿಷ್ಠನಿಗೂ, ಬಲಹೀನನಿಗೂ ಸಹಾಯ ಮಾಡುವದು ನಿನಗೆ ಲೇಸು" ಎಂದನು.

ನೋಡಿರಿ! ನ್ಯಾಯಸ್ಥಾಪಕರ ಕಾಲದಲ್ಲಿ ಗಿದ್ಯೋನನ ಸೈನ್ಯದಲ್ಲಿ ಬರೀ 300 ಮಂದಿ ಮಾತ್ರವೇ ಇದ್ದರು. ಶತ್ರುಗಳಾಗಿ ಬಂದ ಮಿದ್ಯಾನ್ಯರೋ ಸಮುದ್ರದ ಮರಳಿನೋಪಾದಿಯಲ್ಲಿದ್ದರು. ಇಂತಹ ಪರಿಸ್ಥಿತಿಯಲ್ಲಿ ಇಸ್ರಾಯೇಲ್ಯರಿಗೆ ಜಯವನ್ನು ಅನುಗ್ರಹಿಸುವದು ಕರ್ತನಿಗೆ ಲೇಸಾದ ಕಾರ್ಯ. ಒಬ್ಬ ದೊಡ್ಡ ಗೊಲ್ಯಾತನನ್ನು ಬೀಳಿಸಲು, ಸಣ್ಣ ದಾವೀದನಿಗೆ ಸಹಾಯ ಮಾಡುವದು ದೇವರಿಗೆ ಲೇಸಾದ ಕಾರ್ಯ. ಕರ್ತನು ನಿಮ್ಮ ಸಂಗಡ ಇರುವದಾದರೆ, ಇಂದು ನಿಮಗಿರುವ ಎಲ್ಲಾ ಸಮಸ್ಯೆಗಳನ್ನೂ ಹೋರಾಟಗಳನ್ನೂ ನೀವು ಸುಲಭವಾಗಿ ಜಯಿಸುವಿರಿ. ಕರ್ತನು ಯೆಹೋಶುವನೊಂದಿಗೆ ಒಡಂಬಡಿಕೆ ಮಾಡಿ, "ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು" (ಯೆಹೋ.1:5) ಎಂದು ವಾಗ್ದಾನ ಮಾಡಿದನು. ಆದ್ದರಿಂದ ದೇವಮಕ್ಕಳೇ, ಯಾವ ಸಮಸ್ಯೆಗಳು ಬೆಟ್ಟದ ಹಾಗೆ ನಿಮಗೆ ವಿರುದ್ಧವಾಗಿ ನಿಂತರೂ, ಸೋತುಹೋಗಬೇಡಿರಿ. ಅವುಗಳನ್ನು ಪರಿಹರಿಸುವದು ದೇವರಿಗೆ ಲೇಸಾದ ಕಾರ್ಯ. ಸಮಸ್ಯೆಗಳನ್ನು ಎಂದಿಗೂ ನೋಡಬೇಡಿರಿ. ನಿಮ್ಮನ್ನು ಬಹಳವಾಗಿ ಪ್ರೀತಿಸಿ, ನಿಮ್ಮ ಸಂಗಡ ಒಡಂಬಡಿಕೆ ಮಾಡಿರುವ ಕರ್ತನನ್ನೇ ದೃಷ್ಟಿಸಿರಿ. ಆತನು ನಿಮಗಾಗಿ ಎಲ್ಲವನ್ನೂ ಮಾಡಿ ಮುಗಿಸುವನು. ಆತನಿಗೆ ಅಸಾಧ್ಯವಾದದ್ದು ಒಂದೂ ಇಲ್ಲ!

*ನೆನಪಿಗೆ : "ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು, ಆಗ ನನ್ನನ್ನು ಕೊಂಡಾಡುವಿರಿ" (ಕೀರ್ತ.50:15).*

## ಕರ್ತನನ್ನು ಹುಡುಕಿದ ಆಸನು!



"ಆಸನು ತನ್ನ ದೇವರಾದ ಯೆಹೋವನಿಗೆ – ಯೆಹೋವನೇ, ನಮ್ಮನ್ನು ರಕ್ಷಿಸು. ನಿನ್ನಲ್ಲಿ ಭರವಸವಿಟ್ಟು, ನಿನ್ನ ಹೆಸರಿನಲ್ಲಿ ಈ ಮಹಾಸಮೂಹಕ್ಕೆ ವಿರೋಧವಾಗಿ ಯುದ್ಧಕ್ಕೆ ಬಂದೆವಲ್ಲಾ. ಯೆಹೋವನೇ ನಮ್ಮ ದೇವರು ನೀನು. ನರರು ನಿನ್ನನ್ನು ಎದುರಿಸಿ ಗೆಲ್ಲಬಾರದು ಎಂದು ಮೊರೆಯಿಟ್ಟನು" (2ಪೂರ್ವ.14:11).

ಯೂದದ ಅರಸನಾದ ಆಸನ ಜಯದ ಕಾರಣವೇನೆಂದರೆ, ಆತನು ಕರ್ತನನ್ನು ಹುಡುಕಿದ್ದೇ ಆಗಿದೆ. ಸಮಸ್ಯೆಯ ಸಮಯದಲ್ಲಿ ನೆರೆಹೊರೆಯ ದೇಶದ ಅರಸರುಗಳ ಬಳಿ ಸಹಾಯ ಕೇಳೋಣ. ಬಂಗಾರ ಬೆಳ್ಳಿಯನ್ನು ಕೊಟ್ಟು, ಅವರನ್ನು ಯುದ್ಧಕ್ಕೆ ಬರಮಾಡೋಣ ಎಂದು ಮನುಷ್ಯರನ್ನು ಹುಡುಕಿಕೊಂಡು ಹೋಗಲಿಲ್ಲ. ಕರ್ತನನ್ನೇ ಹುಡುಕಲು ತೀರ್ಮಾನಿಸಿದನು. "ಆಸನು" ಎಂಬ ಹೆಸರಿಗೆ, "ವೈದ್ಯ" ಎಂದರ್ಥ. ಈ ವೈದ್ಯನು ತನ್ನ ದೇಶದ ಜನರಿಗೆ ಕೊಟ್ಟಂಥ ಔಷಧಿ, ಗುಳಿಗೆಗಳೆಲ್ಲವೂ "ಕರ್ತನನ್ನು ಹುಡುಕಿರಿ" ಎಂಬದೇ. "ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನೂ ನಿಮ್ಮೊಂದಿಗಿರುವನು; ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು; ಆತನನ್ನು ಬಿಟ್ಟರೆ, ಆತನೂ ನಿಮ್ಮನ್ನು ಬಿಟ್ಟುಬಿಡುವನು" (2ಪೂರ್ವ.15:2).

ದಾವೀದನು ತನ್ನ ಮುಪ್ಪಿನ ಕಾಲದಲ್ಲಿ ತನ್ನ ರಾಜ್ಯಭಾರವನ್ನು ಸೊಲೊಮೋನನಿಗೆ ವಹಿಸಿದಾಗ, "ನನ್ನ ಮಗನಾದ ಸೊಲೊಮೋನನೇ, ನೀನಂತೂ ನಿನ್ನ ತಂದೆಯ ದೇವರನ್ನು ಅರಿತುಕೊಂಡು, ಸಂಪೂರ್ಣ ಹೃದಯದಿಂದಲೂ, ಮನಸ್ಸಂತೋಷದಿಂದಲೂ ಆತನನ್ನೇ ಸೇವಿಸು" ಅಂದನು (1 ಪೂರ್ವ.28:9). ಆಸನು ತನ್ನ ದೇಶದ ಜನತೆಗೆಲ್ಲಾ ಆಜ್ಞಾಪಿಸಿ, ದೇವರನ್ನು ಸಂಪೂರ್ಣ ಆತ್ಮದಿಂದಲೂ, ಸಂಪೂರ್ಣ ಹೃದಯದಿಂದಲೂ ಹುಡುಕಬೇಕು ಎಂದನು. ಇಸ್ರಾಯೇಲಿನ ದೇವರಾದ ಕರ್ತನನ್ನು ಹುಡುಕದೇ ಇರುವವನು ಕೊಲ್ಲಲ್ಪಡಬೇಕು ಎಂದು ಆಜ್ಞಾಪಿಸಿದನು. ಸಮಸ್ತ ಇಸ್ರಾಯೇಲ್ಯರೂ ಕರ್ತನನ್ನು ಹುಡುಕಿದಾಗ, ಕರ್ತನು ಅವರಿಗೆ ಸಿಕ್ಕಿದನು (2ಪೂರ್ವ.15:4). ಇದರಿಂದ ಶತ್ರುಗಳು ಮುದುರಿ ಓಡಿದರು. ಕರ್ತನು ಜಯಗಳಿಸಿದನು. ದೇವಮಕ್ಕಳೇ, ಹಿಂಸೆಯ ಸಮಯಗಳಲ್ಲಿ ಹೋರಾಟದ ಸಮಯಗಳಲ್ಲಿ ಸುಮ್ಮನಿರದೆ ಕುಟುಂಬದ ಸಮೇತ ಕರ್ತನನ್ನು ಹುಡುಕಿರಿ. ಸಭೆಯಾಗಿ, ದೇಶವಾಗಿ ಕರ್ತನನ್ನು ಹುಡುಕಿರಿ. ಒಂದು ಕಾಲದಲ್ಲಿ ಕೊರಿಯಾ ದೇಶವು, ಬಡತನದಲ್ಲಿ ಬಳಲುತ್ತಿತ್ತು. ಅವರು ಕರ್ತನನ್ನು ಹುಡುಕಿದ್ದರಿಂದ ಇಂದು ಭಾರತಕ್ಕಿಂತ ಹೆಚ್ಚಾಗಿ ಉನ್ನತ ಸ್ಥಿತಿಯಲ್ಲಿದ್ದಾರೆ. ಆಸನು ಇಷ್ಟು ದೊಡ್ಡ ಜಯವನ್ನು ಗಳಿಸಲು ಕಾರಣವೂ ಅವರು ಕರ್ತನನ್ನು ಹುಡುಕಿದ್ದೇ. ಪ್ರಿಯರೇ, ಕರ್ತನನ್ನು ಹುಡುಕಿರಿ. ನಿಶ್ಚಯವಾಗಿಯೂ ಆತನು ಅದ್ಭುತ ಮಾಡುವನು!

*ನೆನಪಿಗೆ : "ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ, ಆತನಿಗೆ ಬಿನ್ನಹ ಮಾಡಿರಿ" (ಯೆಶಾ.55:6).*

## ಎಲೀಯನ ಪ್ರಾರ್ಥನೆ!



"ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು, ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ" (ಯಾಕೋ.5:17).

"ಎಲೀಯ" ಎಂಬದು ಉಜ್ಜೀವನದ ಹೆಸರು. ಭಕ್ತಿ ವೈರಾಗ್ಯದ ಹೆಸರು. ಕರ್ತನಿಗಾಗಿ ಪ್ರಜ್ವಲಿಸಿದ ಅಗ್ನಿರಥದ ಹೆಸರು. ಎಲೀಯನ ಹೆಸರು ನಮ್ಮ ನರನಾಡಿಗಳಲ್ಲಿ ಕರ್ತನಿಗಾಗಿ ಪ್ರಾರ್ಥಿಸಿ ಏನಾದರೂ ಮಹತ್ಕಾರ್ಯಗಳನ್ನು ಮಾಡಲು ಪ್ರೇರೇಪಿಸುತ್ತದೆ. ಎಲೀಯನ ಮೂಲಕ ಉಂಟಾದ ದೊಡ್ಡ ಉಜ್ಜೀವನಕ್ಕೆ ಮುಖ್ಯವಾದ ಕಾರಣವು ಪ್ರಾರ್ಥನೆಯೇ. ಅರ್ಥಪೂರ್ವಕವಾದ ಪ್ರಾರ್ಥನೆಯನ್ನು ಮಾಡಿದ ಆತನು ಹೇರಳವಾದ ಅದ್ಭುತಗಳನ್ನು ಮಾಡಿದನು. ಪ್ರಾರ್ಥನೆಗೆ ಸಮಾನವಾದದ್ದು ಒಂದೂ ಇಲ್ಲ. ಪ್ರಾರ್ಥಿಸುವವನು ತನ್ನ ಪರಿಶುದ್ಧತೆಯನ್ನು ಕಾದುಕೊಳ್ಳುವನು. ಪ್ರಾರ್ಥಿಸುವವನು ಶತ್ರುವಿನ ಆಳ್ವಿಕೆಯನ್ನು ಧ್ವಂಸ ಮಾಡುವನು. ಪ್ರಾರ್ಥಿಸುವವನನ್ನು ಯಾರೂ ಎದುರಿಸಿ ನಿಲ್ಲಲು ಸಾಧ್ಯವಿಲ್ಲ. ಎಲೀಯನನ್ನು ಅನೇಕರು 'ಸೂಪರ್‌ಮ್ಯಾನ್' ಆಗಿ ಭಾವಿಸುತ್ತಾರೆ. ಆದರೆ ಸತ್ಯವೇದವು ಆತನನ್ನು, "ನಮ್ಮಂಥ ಸ್ವಭಾವವುಳ್ಳ ಮನುಷ್ಯ" ಎಂದು ಸೂಚಿಸುತ್ತದೆ. ನಮ್ಮ ಹಾಗೆಯೇ ದಣಿವುಗಳು, ಶೋಧನೆಗಳು, ಹೋರಾಟಗಳು ಆತನಿಗೂ ಬಂತು. ಆದರೆ ಆತನು ಅರ್ಥಪೂರ್ವಕವಾಗಿ ಪ್ರಾರ್ಥಿಸಿದನು. ಸಹೋ.ಡಿ.ಜಿ.ಎಸ್. ದಿನಕರನ್ ಅವರು ಕನಿಕರದಿಂದ ಪ್ರಾರ್ಥಿಸುವರು. ಸಹೋ.ಹಿಜ್ಕೀಯ ಫ್ರಾನ್ಸಿಸ್ ಕಣ್ಣೀರಿನಿಂದ ಪ್ರಾರ್ಥಿಸುವರು. ಸಹೋ. ಮೋಹನ್ ಸಿ. ಲಾಜರಸ್ ಅವರು ಹೋರಾಡಿ ಪ್ರಾರ್ಥಿಸುವರು. ಸಹೋದರಿ ಯಾಗಮ್ಮ ಅವರು ಇಡೀ ರಾತ್ರಿ ಬಳಲಿಹೋಗದೆ ಪ್ರಾರ್ಥಿಸುವರು. ಇಂತಹ ಪ್ರಾರ್ಥನಾವೀರರಿಂದ, ಇಂದು ಭಾರತದಲ್ಲಿ ಮಹತ್ತರವಾದ ಉಜ್ಜೀವನವು ಉಂಟಾಗಿದೆ.

ಹನೋಕನ ಹಾಗೆ, ಎಲೀಯನು ಮರಣವನ್ನು ಕಾಣದೆ ತೆಗೆದುಕೊಳ್ಳಲ್ಪಟ್ಟನು. ಅವನ ಜನನವೂ ಆಶ್ಚರ್ಯಕರ. ಅವನು ಒಯ್ಯಲ್ಪಟ್ಟದ್ದೂ ಆಶ್ಚರ್ಯಕರ. ದೇವಮಕ್ಕಳೇ, ಪ್ರಾರ್ಥಿಸುವ ಮನುಷ್ಯನು, ದೇವರೊಟ್ಟಿಗೆ ಸಂಚರಿಸುವನು. ಕರ್ತನ ಬರೋಣದಲ್ಲಿ ತೆಗೆದುಕೊಳ್ಳಲ್ಪಡುವನು. ನಿಮ್ಮ ಜೀವಿತದಲ್ಲಿ ಎಷ್ಟೇ ಸಮಸ್ಯೆಗಳಿದ್ದರೂ, ಎಲೀಯನ ಹಾಗೆ ಪ್ರಾರ್ಥಿಸಲು ಸಮರ್ಪಿಸಿರಿ. ಆಗ ನಿಮ್ಮ ಅಂತ್ಯವು ಮಹಿಮೆಯುಳ್ಳದ್ದಾಗಿರುವದು. ಎಲೀಯನೂ, ಎಲೀಷನೂ ಇಸ್ರಾಯೇಲ್ಯರಿಗೆ ಬೆಂಕಿಯ ರಥವೂ, ಅಶ್ವಬಲವೂ ಆಗಿದ್ದರು. ಇಬ್ಬರೂ ಒಳ್ಳೆಯ ಪ್ರಾರ್ಥನಾವೀರರಾಗಿದ್ದರು. ಪ್ರಾರ್ಥನೆಯ ಮೂಲಕ ಇಸ್ರಾಯೇಲ್ ದೇಶದಲ್ಲಿದ್ದ ವಿಗ್ರಹಾರಾಧನೆಯನ್ನು ಹೊರಡಿಸಿದವರು. ಪ್ರಿಯರೇ, ನಿಮ್ಮನ್ನೂ ಕರ್ತನು ಉಪಯೋಗಿಸುವನು!

*ನೆನಪಿಗೆ : "ನೀವು ಪ್ರಾರ್ಥನೆ ಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಗುವದು" (ಮಾರ್ಕ.11:24).*

| ನವೆಂಬರ್ 23 | **ಮಳೆಯನ್ನು ದಯಪಾಲಿಸುವನು!** | ಬೆಳಿಗ್ಗೆ : ಯೆಹೆ. 20,21<br>ಸಂಜೆ : ಯಾಕೋಬ 5 |
|---|---|---|

"ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ; ಯೆಹೋವನೇ ಮಿಂಚುಗಳನ್ನು ಉಂಟುಮಾಡುತ್ತಾನೆ, ಮನುಷ್ಯರಿಗೆ ಸಮೃದ್ಧಿಯಾದ ಮಳೆಯನ್ನು ದಯಪಾಲಿಸುತ್ತಾನೆ" (ಜೆಕ.10:1).

ಹಲವು ಸಮಯಗಳಲ್ಲಿ ತಕ್ಕ ಪ್ರಕಾರ ವಿಜ್ಞಾಪಿಸುವದು ಹೇಗೆಂದು ನಮಗೆ ತಿಳಿಯದು (ರೋಮಾ.8:26). ಆದ್ದರಿಂದ ಪವಿತ್ರಾತ್ಮನು ತಾನೇ, ನಮ್ಮ ಹೃದಯಗಳಲ್ಲಿ ಹಲವು ಪ್ರಾರ್ಥನಾ ಬಿನ್ನಹಗಳನ್ನು ಹಾಕುತ್ತಾನೆ. "ಆದ್ದರಿಂದ ಬೆಳೆಯ ಯಜಮಾನನನ್ನು ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" (ಮತ್ತಾ.9:38). "ಯೆರೂಸಲೇಮಿನ ಶುಭಕ್ಕೋಸ್ಕರ ಪ್ರಾರ್ಥಿಸಿರಿ" (ಕೀರ್ತ.122:6). "ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ" (ಜೆಕ.10:1). ಹಾಗಾದರೆ ಏನು ಸಂಭವಿಸುವದು? ಮೊದಲನೆಯದಾಗಿ ಮಳೆಯಾಗುವಂತೆ, ಆಕಾಶದಲ್ಲಿ ಮಿಂಚುಗಳನ್ನುಂಟು ಮಾಡುತ್ತಾನೆ. ಮಳೆಗೂ, ಮಿಂಚಿಗೂ ಒಂದು ಆಳವಾದ ಸಂಬಂಧವುಂಟು. ಎರಡನೆಯದಾಗಿ, ಹೊಲದಲ್ಲಿ ಬಿತ್ತುವವರಿಗೆ ಪೈರನ್ನು ಅನುಗ್ರಹಿಸುತ್ತಾನೆ. ಆದಿ ಅಪೊಸ್ತಲರ ದಿನಗಳಲ್ಲಿ, ಮುಂಗಾರನ್ನು ಸುರಿಸಿ, ಅದ್ಭುತಗಳನ್ನು ಮಾಡಿ, ಜನರನ್ನು ಲಕ್ಷ ಲಕ್ಷವಾಗಿ ಆದಾಯಪಡಿಸಲು ಸಹಾಯ ಮಾಡಿದಂಥ ದೇವರು, ಈ ಅಂತ್ಯದಿನಗಳಲ್ಲೂ ಹಿಂಗಾರನ್ನು ಕಳುಹಿಸುತ್ತಾನೆ. ಮಹತ್ತರವಾದ ಉಜ್ಜೀವನವೂ, ಕೊಯ್ಲೂ ಉಂಟಾಗುವದು.

"ಪರಲೋಕ" ಎಂಬದು, ದೊಡ್ಡ ಸೂಪರ್ ಮಾರ್ಕೆಟ್‌ನ ಹಾಗಿದೆ. ಅದರಲ್ಲಿ ಲೋಕರೀತಿಯಾದ ಆತ್ಮೀಕ ರೀತಿಯಾದ ಸಕಲ ಉನ್ನತವಾದ ಆಶೀರ್ವಾದಗಳುಂಟು. ಕರ್ತನು ಯಾವ ಭಾಗದಲ್ಲಿ ನಿಮಗೆ ಪರಲೋಕದ ದ್ವಾರಗಳನ್ನು ತೆರೆಯಬೇಕೆಂದು ಕೇಳಿರಿ. ಅರಸನಾದ ಸೊಲೊಮೋನನು ಜ್ಞಾನವನ್ನು ಕೇಳಿದಾಗ, ಅದು ಅವನಿಗೆ ದೊರಕಿತು. ಅರಣ್ಯದಲ್ಲಿ ಇಸ್ರಾಯೇಲ್ಯರಿಗೆ ಮನ್ನವು ಹಿಮದ ಹಾಗೆ ದೊರಕಿತು. ಅವರು ಮಾಂಸವನ್ನು ಆಶಿಸಿ ಕೇಳಿದಾಗ, ಅವರ ಪಾಳೆಯದ ಸುತ್ತಲೂ ಲಾವಕ್ಕಿಗಳು ಬಂದವು. ಪಾಲ್‌ಯಾಂಗಿ ಚೋ ಎಂಬ ಬೋಧಕರು, ಕೊರಿಯಾದಲ್ಲಿ ಸಭೆಯನ್ನು ಪ್ರಾರಂಭಿಸಿದಾಗ, ಹಿಂಗಾರಿನ ಮಳೆಯ ಹಾಗೆ, ಹತ್ತುಲಕ್ಷ ಆತ್ಮಗಳು ಅವರ ಸಭೆಯಲ್ಲಿ ಸೇರಿದರು. "ನೀನು ಕೇಳಿಕೊಂಡರೆ, ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು" (ಕೀರ್ತ.2:8) ಎಂದು ಕರ್ತನು ವಾಗ್ದಾನ ಮಾಡಿದ್ದಾನಲ್ಲವೇ? ದೇವಮಕ್ಕಳೇ, ನಿಮ್ಮ ಅಗತ್ಯತೆಯೇನು? ಕರ್ತನ ಬಳಿ ಮನತೆರೆದು ಕೇಳಿರಿ. ಅವೆಲ್ಲವನ್ನೂ ಕರ್ತನು ತನ್ನ ಪರಿಪೂರ್ಣತೆಯಿಂದ, ಒಂದು ಹಿಂಗಾರಿನ ಮಳೆಯ ಹಾಗೆ ನಿಮ್ಮ ಮೇಲೆ ಸುರಿಯುವನು.

*ನೆನಪಿಗೆ : "ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವೆನೋ... ಹೀಗೆ ಪರೀಕ್ಷಿಸಿರಿ" (ಮಲಾ.3:10).*

## ಬಲಾತ್ಕಾರವಾದ ಪ್ರಾರ್ಥನೆ!



"ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ" (ಮತ್ತಾ.11:12).

'ಬಲಾತ್ಕಾರ' ಎಂದರೆ, 'ಒತ್ತಾಯಪಡಿಸುವುದು' ಎಂದರ್ಥ. ಪ್ರಾರ್ಥನೆಯಲ್ಲಿ ಬಲಾತ್ಕಾರ ಮಾಡುವದು ಅಂದರೆ, ಹೋರಾಡಿ ಕರ್ತನ ಬಳಿ ಕೇಳುವಂಥದ್ದಾಗಿದೆ. ಪ್ರಾರ್ಥನೆಯಲ್ಲಿ ಯಾಕೋಬನು, ದೇವರನ್ನು ಬಲವಂತ ಮಾಡಿದನು. ನನ್ನನ್ನು ಆಶೀರ್ವದಿಸಿದ ಹೊರತು ನಿನ್ನನ್ನು ಬಿಡುವದಿಲ್ಲ ಕರ್ತನೇ ಅಂದನು. ಆ ಪ್ರಾರ್ಥನೆಯನ್ನು ಕೇಳಿದ ಕರ್ತನು ಮನಮರುಗಿ ಯಾಕೋಬನನ್ನು ಆಶೀರ್ವದಿಸಿದನು. ಯಾಕೋಬನಿಗೆ "ದೇವಪ್ರಭು" ಎಂದು ಅರ್ಥಗೊಳ್ಳುವ "ಇಸ್ರಾಯೇಲ್" ಎಂದು ಹೆಸರಿಟ್ಟನು. ಪರಲೋಕ ರಾಜ್ಯವನ್ನು ಬಲಾತ್ಕಾರ ಮಾಡಲು, ಒಂದೇ ಒಂದು ಮಾರ್ಗವೇ ಉಂಟು. ಅದುವೇ ಆಸಕ್ತಿಯುಳ್ಳ ಪ್ರಾರ್ಥನೆ. ಅರ್ಥಪೂರ್ವಕವಾದ ಪ್ರಾರ್ಥನೆ. ಉತ್ತರ ಸಿಗುವವರೆಗೂ ಹೋರಾಡಿ ಪ್ರಾರ್ಥಿಸುವ ಪ್ರಾರ್ಥನೆ. ಲೂಕನು ಇದೇ ವಾಕ್ಯವನ್ನು ಬರೆಯುವಾಗ, "ಈಚೆಗೆ ದೇವರ ರಾಜ್ಯವು ಸಾರಲ್ಪಡುತ್ತಾ ಇದೆ. ಅದರಲ್ಲಿ ಸಕಲರೂ ಬಲಾತ್ಕಾರವಾಗಿ ನುಗ್ಗುತ್ತಾರೆ" ಎಂದು ಸೂಚಿಸಿದ್ದಾನೆ (ಲೂಕ.16:16). ಶತ್ರುವಾಗಿರುವ ಸೈತಾನನು, ಪರಲೋಕ ರಾಜ್ಯದಲ್ಲಿ ನೀವು ಪ್ರವೇಶಿಸದಂತೆ, ಎಂಥೆಂಥ ಅಡ್ಡಿಗಳನ್ನು ಹಾಕಬಹುದೋ ಅಷ್ಟನ್ನೂ ಹಾಕುವನು. ಭಯಂಕರವಾದ ಶೋಧನೆಗಳಿಂದ ನಿಮ್ಮ ಮನಸ್ಸನ್ನು ಸೋತುಹೋಗುವಂತೆ ಮಾಡುತ್ತಾನೆ. ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೈನ್ಯಗಳು ನಿಮಗೆ ವಿರೋಧವಾಗಿ ಹೋರಾಡುತ್ತವೆ. ಬಲಿಷ್ಠನನ್ನು ಬಂಧಿಸಿ, ಅವನನ್ನು ಜಯಿಸಲು ಆಸಕ್ತಿಯುಳ್ಳ ಪ್ರಾರ್ಥನೆಯು ಬಹಳ ಪ್ರಾಮುಖ್ಯವಾದದ್ದು.

ಮೋಶೆಯು, ಇಸ್ರಾಯೇಲ್ಯರನ್ನು ಧರ್ಮಶಾಸ್ತ್ರಕ್ಕೆ ಒಳಪಡಿಸುವದಕ್ಕಾಗಿ ಶರೀರದ ಆಯಾಸಗಳನ್ನು ಎಣಿಸದೆ, ಸೀನಾಯ್ ಬೆಟ್ಟದಲ್ಲಿ ಏರಿದನು. ಇಸ್ರಾಯೇಲ್ಯರ ದೇವರಿಗೆ ವಿರುದ್ಧವಾಗಿ ಪಾಪ ಮಾಡಿದಾಗ, ದೇವರ ಕೋಪಾಗ್ನಿಯು ಅವರ ಮೇಲೆ ಬಂತು. ಆಗ ಮೋಶೆಯು ತನ್ನ ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು, ದೇವರ ಸಮ್ಮುಖದಲ್ಲಿ ಹೋರಾಡಿ ಪ್ರಾರ್ಥಿಸಿದನು. ಈ ಪ್ರಾರ್ಥನೆಗೆ ಕರ್ತನಿಂದ ಸದುತ್ತರವನ್ನು ಕೊಡದಿರಲು ಸಾಧ್ಯವೇ ಇಲ್ಲ. ಇದರಂತೆಯೇ ಅವರ ಪಾಪಗಳನ್ನು ಕರ್ತನು ಕ್ಷಮಿಸಿದನು. ದೇವಮಕ್ಕಳೇ, ಸಾಧಾರಣವಾದ ಕಾರ್ಯಗಳಿಗೆ ನೀವು ಸಾಧಾರಣವಾಗಿ ಪ್ರಾರ್ಥಿಸಬಹುದು. ಆದರೆ ಹೋರಾಡಬೇಕಾದ ಕಾರ್ಯಗಳಿಗೆ ಹೋರಾಡಲೇ ಬೇಕು. ಬಲಾತ್ಕಾರದಿಂದ ಪ್ರಾರ್ಥಿಸಬೇಕು. ಆಗಲೇ ಒಂದು ಅದ್ಭುತವನ್ನು ನೀವು ನೋಡಲು ಸಾಧ್ಯವಾಗುವದು.

*ನೆನಪಿಗೆ : "ಯೆಹೋವನಿಗೆ ಜ್ಞಾಪಿಸುವವರೇ, ಆತನು ಯೆರೂಸಲೇಮನ್ನು ಭದ್ರಪಡಿಸಿ ಲೋಕಪ್ರಸಿದ್ಧಿಗೆ ತರುವತನಕ ನಿಮಗೆ ವಿರಾಮವಿಲ್ಲದಿರಲಿ, ಆತನಿಗೂ ವಿರಾಮ ಕೊಡದಿರಿ"(ಯೆಶಾ.62:7).*

# ಭಕ್ತಿ ವೈರಾಗ್ಯದ ಪ್ರಾರ್ಥನೆ!



"ನನ್ನ ಜೊತೆಯಲ್ಲಿ ಬಂದು ಯೆಹೋವನಲ್ಲಿ ನನಗಿರುವ ಆಸಕ್ತಿಯನ್ನು ನೋಡು ಎಂದು ಹೇಳಿ, ಅವನನ್ನು ಕೈ ಹಿಡಿದು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಹೋದನು" (2ಅರಸು.10:16).

ಪ್ರಾರ್ಥನೆಯಲ್ಲಿ ಒಂದು ಬಗೆಯು, ಭಕ್ತಿ ವೈರಾಗ್ಯದಿಂದ ಪ್ರಾರ್ಥಿಸುವದು. ಸತ್ಯವೇದದಲ್ಲಿ ಹಲವಾರು ವೈರಾಗ್ಯಗಳ ಬಗ್ಗೆ ಬರೆಯಲ್ಪಟ್ಟಿದೆ. ಭಕ್ತಿ ವೈರಾಗ್ಯವುಂಟು. ಕರ್ತನ ವೈರಾಗ್ಯವುಂಟು. ಆತ್ಮದಲ್ಲಿ ವೈರಾಗ್ಯವುಂಟು. ದೇವರನ್ನು ಕುರಿತ ವೈರಾಗ್ಯವುಂಟು. ಆದರೆ ಪ್ರಾರ್ಥನೆಯಲ್ಲಿ ನಿಮ್ಮ ವೈರಾಗ್ಯವನ್ನು ತೋರಿಸುವಿರಾದರೆ, ಅಧಿಕವಾದ ಆತ್ಮಗಳನ್ನು ಆದಾಯಪಡಿಸುವಿರಿ. ಅಡ್ಡಿಗಳನ್ನು ಮುರಿಯುವಿರಿ. ಆದ್ದರಿಂದ ಪ್ರಾರ್ಥನೆಯಲ್ಲಿ ಎಂದಿಗೂ ಬಳಲಿಹೋಗದಿರಿ. ಬೆಚ್ಚಗೂ ಇಲ್ಲದೆ, ತಣ್ಣಗೂ ಇಲ್ಲದೆ ಹೆಜ್ಜೆ ತಪ್ಪದಿರಿ. ಪ್ರಾರ್ಥಿಸಿದರೆ ವೈರಾಗ್ಯವಾಗಿ ಉತ್ತರ ಸಿಗುವವರೆಗೂ ಹೋರಾಡಿ ಪ್ರಾರ್ಥಿಸಿರಿ. ನಿಮ್ಮ ವೈರಿಯಾದ ಸೈತಾನನನ್ನು ನೋಡಿರಿ! ಅನೇಕ ಸಾರಿ ಭಕ್ತರ ಬಳಿಯೂ, ಪ್ರಾರ್ಥನಾವೀರರ ಬಳಿಯೂ ಸೋಲನ್ನಪ್ಪಿದರೂ, ಕಲ್ವಾರಿಯಲ್ಲಿ ಅವನ ತಲೆಯು ಜಜ್ಜಲ್ಪಟ್ಟಿದ್ದರೂ, ಅವನ ಬಾಲವನ್ನಿಟ್ಟುಕೊಂಡು, ಇನ್ನು ವೈರಾಗ್ಯವಾಗಿ ಹೋರಾಡುತ್ತಲೇ ಇದ್ದಾನೆ. "ನಾನು ಇವನ ಜೀವವನ್ನು ತೆಗೆಯದೆ ಬಿಡುವದಿಲ್ಲ. ಇವನನ್ನು ಪಾಪದಲ್ಲಿ ಬೀಳಿಸುವೆನು" ಎಂದು ವೈರಾಗ್ಯವಾಗಿ ಹೇಳುವನು. ಲೋಕ, ಶರೀರ, ಪಿಶಾಚಿಯ ಮೂಲಕ ಹೋರಾಡುವನು. ಶರೀರದಾಶೆಗಳ ಮೂಲಕ ಶೋಧಿಸುವನು. ಯೋಬನಿಗೆ ವಿರುದ್ಧವಾಗಿ ಸೈತಾನನು ದೇವರ ಸನ್ನಿಧಿಯಲ್ಲಿ ಅವನ ಶರೀರವನ್ನು ಮುಟ್ಟಿದನು. "ಅವನು ನಿನ್ನ ಮುಖದೆದುರಿಗೆ ನಿನ್ನನ್ನು ದೂಷಿಸಲೇ ದೂಷಿಸುವನು" ಅಂದನು. ಇಂದೂ ಸಹ ಭಕ್ತರ ಮೇಲೆ ವೈರಾಗ್ಯದಿಂದ ಹಗಲಿರುಳು ದೂರು ಹೇಳುತ್ತಲೇ ನಿಂತಿದ್ದಾನೆ.

ಅದೇ ಸಮಯದಲ್ಲಿ ಕರ್ತನ ವೈರಾಗ್ಯವೂ ಉಂಟು. ಸತ್ಯವೇದದಲ್ಲಿ 12 ವಾಕ್ಯಗಳಲ್ಲಿ ಕರ್ತನ ವೈರಾಗ್ಯವನ್ನು ಕುರಿತು ಬರೆಯಲ್ಪಟ್ಟಿದೆ. "ನಿನ್ನ ಆಲಯಾಭಿಮಾನವು ನನ್ನನ್ನು ಬೆಂಕಿಯಂತೆ ದಹಿಸಿದೆ" (ಕೀರ್ತ.69:9). ಯಾಕೋಬ 4:5ರಲ್ಲಿ, "ಪವಿತ್ರಾತ್ಮನು ನಮಗೋಸ್ಕರ ಅಭಿಮಾನತಾಪದಿಂದ ಹಂಬಲಿಸುತ್ತಾನೆ" ಎಂದು ಬರೆಯಲ್ಪಟ್ಟಿದೆ. ಅಮೇರಿಕಾದಲ್ಲಿ ಹುಟ್ಟಿದಂದಿನಿಂದಲೇ ನಡುಬೊಗ್ಗಿದವಳಾಗಿ, ಕೈಕಾಲುಗಳಲ್ಲಿ ಅಂಗವಿಕಲತೆಯಿಂದ ಇದ್ದ ಒಬ್ಬ ಸಹೋದರಿಯು, ದೇವರನ್ನು ಕಣ್ಣೀರಿನಿಂದ ಬೇಡಿಕೊಂಡಾಗ, ಪವಿತ್ರಾತ್ಮನು ಅಭಿಮಾನ ತಾಪದಿಂದ, ಒಂದು ನಿರ್ದಿಷ್ಟವಾದ ದಿನದಲ್ಲಿ ಸ್ವಸ್ಥಪಡಿಸಿದನು. ಆಕೆಯನ್ನು ಒಂದು ದೊಡ್ಡ ಸಾಕ್ಷಿಯಾಗಿ, ಆರೋಗ್ಯದಿಂದ ಬಾಳುವಂತೆ ಮಾಡಿದನು.

*ನೆನಪಿಗೆ : "ಚೀಯೋನಿನ ಧರ್ಮವು ಪ್ರಕಾಶಗೊಳ್ಳುವ ತನಕ... ನಾನು ಮೌನವಾಗಿರದೆ, ಚೀಯೋನಿನ ಹಿತವನ್ನು ಲಕ್ಷಿಸುತ್ತಿರುವೆನು" (ಯೆಶಾ.62:1).*

# ಉಲ್ಲಾಸಿಸುವ ಪ್ರಾರ್ಥನಾಲಯ!

"ಅವರೆಲ್ಲರನ್ನೂ ನಾನು ನನ್ನ ಪವಿತ್ರಪರ್ವತಕ್ಕೆ ಬರ ಮಾಡಿ ನನ್ನ ಪ್ರಾರ್ಥನಾಲಯದಲ್ಲಿ ಉಲ್ಲಾಸಗೊಳಿಸುವೆನು" (ಯೆಶಾ.56:7).

ಈ ಲೋಕದಲ್ಲಿ ಕರ್ತನು ನಿಮಗೆ ಕೊಟ್ಟಿರುವ ಮನೆಯಾದರೂ ಸರಿ, ನಿಮ್ಮ ಹೃದಯವಾಗಿರುವ ಆಲಯವಾದರೂ ಸರಿ, ಅದು 'ಪ್ರಾರ್ಥನಾಲಯ'ವೆನಿಸಿಕೊಳ್ಳಲಿ. ಅದನ್ನು ಕರ್ತನಿಗೆಂದು ಪ್ರತಿಷ್ಠೆ ಮಾಡಿರಿ. ನೀವು ದೇವರ ಆಲಯವಾಗಿದ್ದೀರಿ. ದೇವರ ಆತ್ಮನು ನಿಮ್ಮೊಳಗೆ ವಾಸವಾಗಿದ್ದಾನೆ. ಆದ್ದರಿಂದ ನೀವು ಪ್ರಾರ್ಥಿಸಬೇಕು. ದೇವಾಲಯವು ಸಂಪೂರ್ಣವಾಗಿ, ದೇವ ಪ್ರಸನ್ನತೆಯಿಂದಲೂ, ದೇವರ ಸಮ್ಮುಖದಿಂದಲೂ ತುಂಬಿತ್ತು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು (ಯೆಶಾ.6:1). ಆದ್ದರಿಂದ ದಾವೀದನು ಹೇಳಿದನು, "ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ" (ಕೀರ್ತ.16:11).

ಕರ್ತನು ತನ್ನ ಆಲಯವನ್ನು "ನನ್ನ ಮನೆ" ಎಂದು ಹಕ್ಕಿನಿಂದ ಹೇಳುತ್ತಾನೆ. ಆಕಾಶವು ನನಗೆ ಸಿಂಹಾಸನ, ಭೂಮಿಯು ನನ್ನ ಪಾದಪೀಠವಾಗಿದೆ. ನೀವು ನನಗೆ ಎಂತಹ ಮನೆಯನ್ನು ಕಟ್ಟುವಿರಿ? ಎಂದು ಕೇಳುತ್ತಾನೆ. ಅದು ತಂದೆಯ ಮನೆ (ಯೋಹಾ.2:16). ಕೆಟ್ಟ ಕುಮಾರನು ಪಾಪದ ಮಾರ್ಗಗಳಲ್ಲಿ ಹೋಗಿ, ಅಂತ್ಯದಲ್ಲಿ ದೂರದೇಶದಲ್ಲಿದ್ದ ನಿವಾಸಿಗಳಲ್ಲೊಬ್ಬನ ಬಳಿ ಅಂಟಿಕೊಂಡನು. ಅಲ್ಲಿ ಕ್ಷಾಮ, ಬರಡುತನ, ಹಸಿವೆ. ಹಂದಿಗಳನ್ನು ಮೇಯಿಸುವಾಗ, ಹಂದಿಗಳು ತಿನ್ನುವ ಕಾಯಿಗಳನ್ನಾದರೂ ತಿಂದು ತನ್ನ ಹಸಿವೆಯನ್ನು ತೀರಿಸಿಕೊಳ್ಳಲು ಆಶೆಪಟ್ಟನು. ಆಗ ಅವನು ತನ್ನ ತಂದೆಯ ಮನೆಯನ್ನು ನೆನಪುಮಾಡಿಕೊಂಡನು. ತಂದೆಯ ಮನೆಯಲ್ಲಿ ಏನೇನು ಉಂಟು, ಮೊದಲನೆಯದಾಗಿ, ತಂದೆಯ ಪ್ರೀತಿಯುಂಟು, ಶ್ರೇಷ್ಠವಾದ ನಿಲುವಂಗಿಯುಂಟು, ಪಾದರಕ್ಷೆಯುಂಟು. ತಂದೆಯು ಅಪ್ಪಿಕೊಂಡು ಕೊಡುವ ಮುದ್ದುಗಳುಂಟು. ಅಲ್ಲಿ ಆಳುಗಳಿಗೆ ಕೂಡ ಪೂರ್ತಿಯಾದ ಆಹಾರವುಂಟು. ಕೆಟ್ಟ ಕುಮಾರನು ಮನೆಗೆ ಬಂದಕೂಡಲೆ, ತಂದೆಯು ದೊಡ್ಡ ಔತಣವನ್ನು, ಹಬ್ಬವನ್ನು ಸಿದ್ಧಪಡಿಸಿದನು. ಹಾಗಾದರೆ, ಪರಲೋಕದ ತಂದೆಯ ಮನೆಯಲ್ಲಿ ಎಷ್ಟು ಸಾವಿರದಷ್ಟು ಆನಂದವಿರಬಹುದು! ಎಲ್ಲದ್ದಕ್ಕೂ ಹೆಚ್ಚಾಗಿ ತಂದೆಯ ಮುಖವನ್ನೇ ನೋಡುತ್ತಿರಬೇಕು ಅನ್ನಿಸುತ್ತದೆ. ಕರ್ತನ ಪ್ರೀತಿಯ ಮುಖವನ್ನು ನೋಡುವದೂ ಸಹ ಪ್ರಾರ್ಥನೆಯಾಗಿದೆ.

ದೇವಮಕ್ಕಳೇ, ತಂದೆಯ ಮನೆಯಾಗಿರುವ ದೇವಾಲಯದಲ್ಲಿ, ನಿಮ್ಮ ಚಿಂತೆಗಳನ್ನೂ, ಭಾರಗಳನ್ನೂ, ಸಂಕಷ್ಟಗಳನ್ನೂ ಇಳಿಸಿಬಿಡಿರಿ. ಪ್ರಾರ್ಥನಾಲಯಕ್ಕೆ ನಿಮ್ಮನ್ನು ಬರಮಾಡುವ ಕರ್ತನು ನಿಮ್ಮನ್ನು ಉಲ್ಲಾಸಗೊಳಿಸುವನು. ಆತನೇ ನಿಮ್ಮನ್ನು ಆದರಿಸುವನು.

*ನೆನಪಿಗೆ : "ನಿನ್ನ ಅಂಗಳದಲ್ಲಿ ವಾಸಿಸುವವರಾಗಿ ನಿನ್ನ ಸನ್ನಿಧಿಯಲ್ಲಿ ಸೇವೆ ಮಾಡುವದಕ್ಕೋಸ್ಕರ ಯಾರನ್ನು ಆರಿಸಿಕೊಳ್ಳುತ್ತೀಯೋ ಅವರೇ ಧನ್ಯರು". (ಕೀರ್ತ.65:4)*

## ಒಬ್ಬನೂ ಎದುರಿಸಿ ನಿಲ್ಲುವದಿಲ್ಲ!



"ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು" (ಯೆಹೋ.1:5).

ನಿಮ್ಮನ್ನು ಯಾವಾಗಲೂ ಎದುರಿಸಿ ನಿಲ್ಲುವ, ಒಂದು ದುಷ್ಟ ಶಕ್ತಿಯಾಗಿ, ಸೈತಾನನು ಕಾರ್ಯನಡಿಸುವನು. "ನಿಮ್ಮ ವಿರೋಧಿಯಾಗಿರುವ ಸೈತಾನನು, ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1ಪೇತ್ರ.5:8). ಆದ್ದರಿಂದ ಸೈತಾನನ್ನೂ, ಅವನ ಕುತಂತ್ರಗಳನ್ನೂ ನಾಶಮಾಡಲು ಪ್ರಾರ್ಥನೆಯೆಂಬ ಆಯುಧವನ್ನು ಪ್ರಯೋಗಿಸಿರಿ. ಸೈತಾನನಿಂದ ಸಹಿಸಲಾಗುವದಿಲ್ಲ.

ಮೋಶೆಯು, ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರತಂದು, ಕೆಂಪು ಸಮುದ್ರವನ್ನು ದಾಟಿದ ನಂತರ, ಅಮಾಲೇಕ್ಯರು ಬಂದು ರೆಫೀದೀಮಿನಲ್ಲಿ ಇಸ್ರಾಯೇಲ್ಯರ ಮೇಲೆ ಯುದ್ಧ ಮಾಡಿದರು (ವಿಮೋ.17:8,9). "ಅಮಾಲೇಕ್ಯ"ಎಂದರೆ, ಅದು ಅಭಿಲಾಷೆಗಳನ್ನು ಸೂಚಿಸುತ್ತದೆ. ಅವು ದೇವಮಕ್ಕಳ ಆತ್ಮೀಕ ಜೀವಿತಕ್ಕೆ ವಿರುದ್ಧವಾಗಿ ಯುದ್ಧಮಾಡುತ್ತವೆ. ಅವರ ನಂಬಿಕೆಯನ್ನು ಕುಂದಿಸಿ, ಮನಸ್ಸಾಕ್ಷಿಯನ್ನು ವಾದಿಸುವಂತೆ ಮಾಡಿ, ಜನರನ್ನು ಸೋಲಿಸಬೇಕೆಂಬದೇ, ಈ ಅಮಾಲೇಕ್ಯರ ಗುರಿಯಾಗಿದೆ. ಭಕ್ತನಾದ ಮೋಶೆಯು ಇಸ್ರಾಯೇಲ್ಯರನ್ನು ನೋಡಿ, "ಭಯಪಡಬೇಡಿರಿ, ನಾನು ದೇವ ದಂಡವನ್ನು ಕೈಯಲ್ಲಿ ಹಿಡುಕೊಂಡು ನಿಮಗಾಗಿ ಗುಡ್ಡದ ತುದಿಯಲ್ಲಿ ನಿಂತುಕೊಳ್ಳುವೆನು" ಎಂದನು. ಆ ದಂಡವೇ, ಯೆಹೋವಾನಿಸ್ಸಿ. ಕರ್ತನು ನಮ್ಮ ಜಯಧ್ವಜವಾದವನು. ಆ ಧ್ವಜವು ಮೇಲೆ ಹಾರುತ್ತಿರುವಾಗ, ಒಬ್ಬನೂ ನಿಮ್ಮನ್ನು ಎದುರಿಸಿ ನಿಲ್ಲಲು ಸಾಧ್ಯವಿಲ್ಲ.

ದೇವಮಕ್ಕಳೇ, ಅಮಾಲೇಕ್ಯರು ನಿಮ್ಮನ್ನು ಎದುರಿಸಿ ನಿಲ್ಲದಂತೆ, ನೀವು ಆಸಕ್ತಿಯಿಂದ ಪ್ರಾರ್ಥಿಸಬೇಕು. ಯಾವ ಮನುಷ್ಯನಿಗಾಗಿ ನಿಜವಾಗಿಯೂ ಭಾರದಿಂದ ಪ್ರಾರ್ಥಿಸುವ ಸೇವಕರಿದ್ದಾರೋ ಅವರು ಧನ್ಯರು. ಒಬ್ಬರ ಭಾರವನ್ನು ಒಬ್ಬರು ಹೊತ್ತು, ಒಬ್ಬರಿಗೋಸ್ಕರ ಒಬ್ಬರು ಮಾಡುವ ಬಿನ್ನಹವು ಮಹಾ ಬಲವೂ, ಶಕ್ತಿಯುತವಾದದ್ದೂ ಆಗಿದೆ. ಉಪವಾಸವೂ, ಪ್ರಾರ್ಥನೆಯೂ ಕರ್ತನು ಕೊಡುವ ಗೆಲುವಿನ ಆಯುಧಗಳಾಗಿವೆ. ಯೇಸುಕ್ರಿಸ್ತನನ್ನು ನೋಡಿರಿ! ಆತನು ಎಷ್ಟು ಕಣ್ಣೀರು ಸುರಿಸಿ ಪ್ರಾರ್ಥಿಸಿದನು. ಲಾಜರನ ಸಮಾಧಿಯ ಬಳಿ ಯೆರೂಸಲೇಮನ್ನು ನೋಡಿ, ಗೆತ್ಸೇಮನೆ ತೋಟದಲ್ಲಿ, ಕಣ್ಣೀರು ಸುರಿಸಿ ಪ್ರಾರ್ಥಿಸಿದನು. ದೇವಮಕ್ಕಳೇ, ನೀವು ಕಣ್ಣೀರಿನಿಂದ ಪ್ರಾರ್ಥಿಸಲು ಕಲಿತಿದ್ದರೆ, ನಿಮ್ಮ ಜೀವಮಾನದಲ್ಲೆಲ್ಲಾ ಒಬ್ಬನೂ ನಿಮ್ಮ ಮುಂದೆ ನಿಲ್ಲುವದಿಲ್ಲ.

*ನೆನಪಿಗೆ : "ಅಳುತ್ತಾ ಬಿತ್ತುವವರು, ಹಾಡುತ್ತಾ ಕೊಯ್ಯುವರು. ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು, ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು" (ಕೀರ್ತ:126:5,6).*

## ಪ್ರಾರ್ಥನೆಯ ಮೂಲಕ ಸಮಾಧಾನ!

ಬೆಳಿಗ್ಗೆ : ಯೆಹೆ. 33,34
ಸಂಜೆ : 1 ಪೇತ್ರ. 5

"ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ, ಯೋಚನೆಗಳನ್ನೂ ಕ್ರಿಸ್ತಯೇಸುವಿನಲ್ಲಿ ಕಾಯುವದು" (ಫಿಲಿ.4:7).

"ಪ್ರಾರ್ಥನೆಯ ಜೀವಿತ" ಎಂಬದು, ಸಮಾಧಾನದ ಪ್ರಭುವಿನೊಂದಿಗೆ ಅನ್ಯೋನ್ಯತೆಯಲ್ಲಿ ಸೇರುವದಾಗಿದೆ. ಕ್ರಿಸ್ತನ ಬಳಿ ಪ್ರಾರ್ಥಿಸಿ, ಇತರರೊಂದಿಗೆ ಸಮಾಧಾನವಾಗುವ ಮಾರ್ಗವನ್ನು ತಿಳಿದುಕೊಳ್ಳಿರಿ. ಪ್ರಾರ್ಥಿಸುವ ಭಾಗ್ಯವನ್ನೂ, ಪ್ರಾರ್ಥನಾತ್ಮವನ್ನೂ ಕರ್ತನು ನಿಮಗೆ ಕೊಟ್ಟಿರುವದರಿಂದ, ನೀವು ಎಲ್ಲಾ ಸಮಸ್ಯೆಗಳನ್ನೂ, ಚಿಂತೆಗಳನ್ನೂ ಕರ್ತನ ಬಳಿ ಹೇಳಿರಿ. ಹನ್ನಳಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಕುಟುಂಬದ ಸಮಾಧಾನವನ್ನು ಕಳೆದುಕೊಂಡಳು. ಸಂತೋಷವನ್ನು ಕಳೆದುಕೊಂಡಳು. ಒಂದು ದಿನ ಅವಳು ಪ್ರಾರ್ಥನೆಯಲ್ಲಿ ತನ್ನ ಹೃದಯವನ್ನು ಸುರಿದುಬಿಡುವದಕ್ಕೆ ತೀರ್ಮಾನಿಸಿದಳು (1ಸಮು.1:13). ಹಾಗೆಯೇ, ಅವಳು ತನ್ನ ಹೃದಯವನ್ನು ಸುರಿದ ನಂತರ, ಪುನಃ ಅವಳು ದುಃಖದ ಮುಖದಿಂದಿರಲಿಲ್ಲ.

ದೇವರ ಚಿತ್ತಕ್ಕೆ ಒಡಂಬಟ್ಟು ಸಮಾಧಾನ ಹೊಂದು" (ಯೋಬ.22:21). ಹೌದು ಸ್ನೇಹಿತರು ಒಬ್ಬರ ಸಂಗಡ ಒಬ್ಬರು ಮನ ತೆರೆದು ಮಾತನಾಡುವಾಗ, ಅಲ್ಲಿ ಸಮಾಧಾನ ಉಂಟಾಗುತ್ತದೆ. ಹಾಗಾದರೆ, ದೇವಕುಮಾರನ ಬಳಿ, ಪ್ರಾರ್ಥನೆಯಲ್ಲಿ ಮಾತನಾಡಿ ಸಂಬಂಧವಿಟ್ಟುಕೊಳ್ಳುವಾಗ, ಎಷ್ಟು ಹೆಚ್ಚಾದ ಸಮಾಧಾನವು ನಿಮ್ಮ ಅಂತರ್ಯವನ್ನು ತುಂಬುವದು! ಪ್ರಾರ್ಥಿಸುವ ಮನುಷ್ಯನು ಪೂರ್ಣ ಸಮಾಧಾನದೊಂದಿಗಿರುವನು. ನಿಮ್ಮ ವಿಜ್ಞಾಪನೆಗಳನ್ನು, ಕೃತಜ್ಞತಾಸ್ತುತಿಯೊಂದಿಗೆ ದೇವರಿಗೆ ತಿಳಿಯಪಡಿಸಿರಿ. ಒಂದು ದಿನವೂ ನಿಮ್ಮ ಕಣ್ಣೀರಿನ ಪ್ರಾರ್ಥನೆಯನ್ನು ಕರ್ತನು ತಿರಸ್ಕರಿಸುವದೇ ಇಲ್ಲ. ಮನಮರುಗಿ, ನಿಮ್ಮ ಹತ್ತಿರಕ್ಕೆ ಬಂದು, ಒಬ್ಬ ತಾಯಿಯು ಸಂತೈಸುವ ಹಾಗೆ ಸಂತೈಸಿ, ನಿಮಗೆ ಸಮಾಧಾನವನ್ನು ಅನುಗ್ರಹಿಸುವನು.

ಲೋಕದಲ್ಲಿರುವವರೆಲ್ಲರೂ, ತಮಗೆ ಸಮಾಧಾನ ಬೇಕೆಂದು ಬಯಸಿದರೂ, ಕರ್ತನ ಪಾದದಲ್ಲಿ ತಮ್ಮ ಭಾರಗಳನ್ನು ಇಳಿಸದೆ ಇರುವದರಿಂದ ಸಮಾಧಾನವನ್ನು ಪಡೆಯಲಾಗುತ್ತಿಲ್ಲ. ಯೇಸುಕ್ರಿಸ್ತನೊಬ್ಬನೇ, ಈ ಲೋಕಕ್ಕೆ ಸಮಾಧಾನವನ್ನು ಕೊಡುವಂಥ ದೇವರು. ಆತನ ಇಂಪಾದ ಪ್ರಸನ್ನತೆಯಲ್ಲಿ ಸಮಾಧಾನವುಂಟು. ಅದು ಪ್ರಾಣ, ಆತ್ಮ, ಶರೀರವನ್ನು ತುಂಬುವದು. ದೇವಮಕ್ಕಳೇ, ನಿಮ್ಮ ಹೃದಯವನ್ನು ದೇವಸಮಾಧಾನವು ತುಂಬುವವರೆಗೂ ಬಿಡದೆ, ಪ್ರಾರ್ಥಿಸುತ್ತಾ ಸ್ತುತಿಸುತ್ತಾ ಇರ್ರಿ.

*ನೆನಪಿಗೆ : "ನಿರೀಕ್ಷೆಯ ಮೂಲನಾದ ದೇವರು ನಂಬಿಕೆಯಿಂದುಂಟಾಗುವ ಸಂತೋಷವನ್ನೂ, ಮನಶ್ಶಾಂತಿಯನ್ನೂ, ನಿಮಗೆ ಪರಿಪೂರ್ಣವಾಗಿ ದಯಪಾಲಿಸಿ... ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದುವಂತೆ ಅನುಗ್ರಹಿಸಲಿ" (ರೋಮಾ.15:13).*

## ಗೆತ್ಸೇಮನೆ!



"ಅನಂತರ ಯೇಸು-ಇಲ್ಲೇ ಕೂತುಕೊಳ್ಳಿರಿ, ನಾನು ಅತ್ತಲಾಗಿ ಹೋಗಿ ಪ್ರಾರ್ಥನೆ ಮಾಡಿ ಬರುತ್ತೇನೆ ಎಂದು ಹೇಳಿ, ಪೇತ್ರನನ್ನೂ, ಜೆಬೆದಾಯನ ಇಬ್ಬರು ಮಕ್ಕಳನ್ನೂ ಕರಕೊಂಡು ಹೋಗಿ, ದುಃಖಪಟ್ಟು ಮನಗುಂದಿದವನಾದನು" (ಮತ್ತಾ.26:37).

ಗೆತ್ಸೇಮನೆ ತೋಟಕ್ಕೆ ನಿಮ್ಮನ್ನು ಕೊಂಡೊಯ್ಯಲು ಬಯಸುತ್ತೇನೆ. ಯೆರೂಸಲೇಮಿನ ಪಶ್ಚಿಮ ದಿಕ್ಕಿನಲ್ಲಿ ಗೀದರೋನ್ ಎಂಬ ನದಿಯ ತಗ್ಗು ಉಂಟು. ಮತ್ತೊಂದು ಕಡೆ ಎಣ್ಣೇಮರದ ಗುಡ್ಡವು ಯೆರೂಸಲೇಮಿನ ಎದುರಿನಲ್ಲಿದೆ. ಯೇಸುಕ್ರಿಸ್ತನು ಎಣ್ಣೇಮರದ ಗುಡ್ಡದಲ್ಲಿದ್ದ ಗೆತ್ಸೇಮನೆ ತೋಟವನ್ನು, ತನ್ನ ಪ್ರಾರ್ಥನಾ ಸ್ಥಳವಾಗಿ ಆದುಕೊಂಡನು. ಅನೇಕ ಹಿಂದೂಗಳ ಮನೆಯಲ್ಲಿ 'ಪೂಜೆಮನೆ' ಎಂದು ಒಂದು ಸ್ಥಳವನ್ನು ಇಟ್ಟಿರುವರು. ಅದೇ ರೀತಿಯಾಗಿ ಮುಸ್ಲಿಂ ಜನರು ಮನೆಗಳನ್ನು ಕಟ್ಟುವಾಗ ನಮಾಝ್ ಓದುವ ಸ್ಥಳವೊಂದನ್ನು ಇಟ್ಟಿರುವರು. ಆದರೆ ಅನೇಕ ಕ್ರೈಸ್ತರ ಮನೆಗಳಲ್ಲಿ ಪ್ರಾರ್ಥಿಸುವದಕ್ಕೆ ಕೋಣೆಯೋ ಅಥವಾ ಸ್ಥಳವೋ ಇರುವದಿಲ್ಲ. ನರಿಗಳಿಗೆ ಹಳ್ಳಗಳಿದ್ದರೂ, ಆಕಾಶದ ಪಕ್ಷಿಗಳಿಗೆ ಗೂಡುಗಳಿದ್ದರೂ, ಯೇಸುಕ್ರಿಸ್ತನಿಗೋ ಸ್ವಂತ ಮನೆ ಇರಲೇ ಇಲ್ಲ. ತಲೆಯಿಡುವಷ್ಟು ಸ್ಥಳವೂ ಇಲ್ಲವಾದ್ದರಿಂದ, ಆತನು ಆಗಾಗ ಎಣ್ಣೇಮರದ ಗುಡ್ಡದ ಮೇಲೇರಿ, ಅಲ್ಲಿ ಪ್ರಾರ್ಥಿಸುತ್ತಿದ್ದನು.

ಆತನು ಹೊರಟು ಪದ್ಧತಿ ಪ್ರಕಾರ ಎಣ್ಣೇ ಮರಗಳ ಗುಡ್ಡಕ್ಕೆ ಹೋದನು (ಲೂಕ.22:39). ಆತನು ತನ್ನ ವಾಡಿಕೆಯ ಪ್ರಕಾರ ಸಬ್ಬತ್‌ದಿನದಲ್ಲಿ ಸಭಾಮಂದಿರಕ್ಕೆ ಹೋಗಿ, ಓದುವದಕ್ಕಾಗಿ ಎದ್ದು ನಿಂತನು (ಲೂಕ.4:16). ದೇವಮಕ್ಕಳೇ, ಮುಂಜಾನೆಯಲ್ಲಿ ಪ್ರಾರ್ಥಿಸುವದು, ಸತ್ಯವೇದವನ್ನು ಓದುವದು, ಆಲಯಕ್ಕೆ ಹೋಗುವದನ್ನು ಕರ್ತನಿಗೆ ಸೇವೆ ಮಾಡುವದನ್ನು ವಾಡಿಕೆಯಾಗಿಟ್ಟುಕೊಳ್ಳಿರಿ. ಅನೇಕರು ತಮ್ಮ ಮನೆಗೆ, "ಗೆತ್ಸೇಮನೆ" ಎಂಬ ಹೆಸರನ್ನಿಟ್ಟಿರುವರು. ಕೆಲವರು ತಮ್ಮ ಮನೆಯನ್ನು ಪ್ರಾರ್ಥನಾಲಯವಾಗಿ ಒಪ್ಪಿಸಿಕೊಟ್ಟು ವಾರಕ್ಕೆ ಒಂದು ಸಾರಿ ಆ ಮನೆಯಲ್ಲಿ ಪ್ರಾರ್ಥನಾ ಕೂಟಗಳನ್ನು ನಡೆಸುವರು. ಅದೇ ರೀತಿಯಾಗಿ, ಗೆತ್ಸೇಮನೆ ಎಂದರೆ, ಕರ್ತನು ಆದುಕೊಂಡ ಪ್ರಾರ್ಥನಾಸ್ಥಳ. ಹೃದಯವನ್ನು ಸುರಿದು ಪ್ರಾರ್ಥಿಸುವ ಸ್ಥಳವೆಂಬದು ಅದರ ಅರ್ಥ. "ಯೇಸುಕ್ರಿಸ್ತನು ಗೆತ್ಸೇಮನೆಗೆ ಹೋದಾಗ, ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ, ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು" (ಲೂಕ.22:44). ದೇವಮಕ್ಕಳೇ, ಆಸಕ್ತಿಯಿಂದ ಪ್ರಾರ್ಥಿಸಿ, ಶೋಧನೆಗಳಲ್ಲಿ ಜಯಹೊಂದಿರಿ. ಜಯಶಾಲಿಗಳಾಗಿ ಬಾಳಿರಿ.

*ನನಪಿಗೆ : "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ, ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ, ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ..." (ಇಬ್ರಿ5:7).*

# ರಕ್ತವು ಪ್ರಾರ್ಥಿಸಲಿ!



"ಆತನು ಮನೋವ್ಯಥೆಯುಳ್ಳವನಾಗಿ, ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ, ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು" (ಲೂಕ.22:44).

ಯೇಸುಕ್ರಿಸ್ತನು ಮೊದಲನೆಯದಾಗಿ ರಕ್ತವನ್ನು ಸುರಿಸಿದ ಸ್ಥಳವು ಗೆತ್ಸೇಮನೆ ತೋಟವಾಗಿದೆ. ಯಾಕೆ ಆತನು ಕಲ್ವಾರಿಯಲ್ಲಿ ಸುರಿಸುವದಕ್ಕಿಂತ ಮುಂಚೆ, ಪ್ರಾರ್ಥಿಸುವ ಸ್ಥಳವಾದ ಗೆತ್ಸೇಮನೆಯಲ್ಲಿ ರಕ್ತ ಸುರಿಸಿದನು? ಹೌದು, ಮನುಷ್ಯನ ರಕ್ತದಲ್ಲಿ ಒಂದು ದೊಡ್ಡ ದೇವರ ರಹಸ್ಯವುಂಟು. ಶರೀರದ ಜೀವವು ಅದರ ರಕ್ತದಲ್ಲಿದೆ. ಮಾತ್ರವಲ್ಲ, ಮಾನವನ ರಕ್ತಕ್ಕೆ ಒಂದು ಧ್ವನಿಯುಂಟು, ಶಬ್ದವುಂಟು, ಭಾಷೆಯುಂಟು, ರಕ್ತದ ಶಬ್ದವು ಭೂಮಿಯಿಂದ ಪರಲೋಕದವರೆಗೂ ಎಟುಕುವಂಥದ್ದಾಗಿದೆ.

ಯಾವ ವೈದ್ಯರಿಗೂ ಯಾವ ವಿಜ್ಞಾನಿಗೂ ಯಾವ ರಾಜಕಾರಣಿಗೂ ತಿಳಿಯದಂಥ ಒಂದು ಮಹಾ ದೊಡ್ಡ ರಹಸ್ಯವುಂಟೆಂದರೆ ಮನುಷ್ಯನ ಪ್ರತಿಯೊಂದು ತೊಟ್ಟು ರಕ್ತವೂ ತನ್ನನ್ನು ಸೃಷ್ಟಿಸಿದ ದೇವರನ್ನು ನೋಡಿ ಕೂಗುವುದೇ. ಕೆಲವು ರಕ್ತಗಳು ಮುಯ್ಯಿ ತೀರಿಸಲು ದೇವರನ್ನು ಕೂಗುತ್ತದೆ. ಮೊಟ್ಟಮೊದಲು ಈ ಭೂಮಿಯಲ್ಲಿ ರಕ್ತಸುರಿಸಿದ ಮನುಷ್ಯನು ಹೇಬೆಲನು. ಅವನ ರಕ್ತವನ್ನು ಮುಚ್ಚಿಬಿಡಬಹುದೆಂದು ಕಾಯಿನನು ನೆನಸಿದನು. ಆದರೆ ಅವನ ರಕ್ತದ ಶಬ್ದವನ್ನು ಕೇಳಿ, ಕರ್ತನು ಭೂಮಿಗೆ ಇಳಿದು ಬಂದನು. "ನಿನ್ನ ತಮ್ಮನ ರಕ್ತವು ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತದೆ" (ಆದಿ.4:10) ಎಂದನು. ಹೇಬೆಲನ ರಕ್ತವು ಏನೆಂದು ಕೂಗಿರುತ್ತದೆ? ಹಳೆಯ ಒಡಂಬಡಿಕೆಯ ಶಾಸ್ತ್ರದ ಪ್ರಕಾರ, "ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಜೀವಕ್ಕೆ ಜೀವ, ರಕ್ತಕ್ಕೆ ರಕ್ತ" ಎಂಬದಾಗಿತ್ತು. ಅಲ್ಲಿ ಕ್ಷಮಾಪಣೆಗೆ ಸ್ಥಳವೇ ಇಲ್ಲ. ಹೇಬೆಲನ ರಕ್ತವು ತನ್ನ ಸಹೋದರನನ್ನು ಮುಯ್ಯಿತೀರಿಸಲು ಕೂಗಿರುತ್ತದೆ.

ಅಪೊ. ಪೌಲನು ಹೇಬೆಲನ ರಕ್ತಕ್ಕಿಂತಲೂ ಹಿತಕರವಾಗಿ ಮಾತಾಡುವ ಯೇಸುಕ್ರಿಸ್ತನ ರಕ್ತ" ಎಂದು ಬರೆದನು (ಇಬ್ರಿ. 12:24). ಶಿಲುಬೆಯಲ್ಲಿ ಯೇಸುಕ್ರಿಸ್ತನು ರಕ್ತ ಸುರಿಸಿದಾಗ, "ತಂದೆಯೇ ಇವರನ್ನು ಕ್ಷಮಿಸು, ತಾವು ಮಾಡುತ್ತಿರುವದೇನೆಂದು ತಿಳಿಯದಿದ್ದಾರೆ ಎಂದು ಪ್ರಾರ್ಥಿಸಿದನು. ಕ್ರಿಸ್ತನ ಪ್ರತಿಯೊಂದು ಹೃದಯಬಡಿತವೂ, ಜನರಿಗೆ ಪಾಪಕ್ಷಮಾಪಣೆಯನ್ನು ಕೊಡಬೇಕೆಂಬದಾಗಿಯೇ ಇತ್ತು.

ದೇವಮಕ್ಕಳೇ, ಈ ರೀತಿಯಾದ ಪಾಪಕ್ಷಮಾಪಣೆಯನ್ನು ಹೊಂದಿರುವ ನೀವು, ಇತರರನ್ನು ಕ್ಷಮಿಸಿ ಪ್ರಾರ್ಥಿಸುವವರಾಗಿರಿ.

*ನೆನಪಿಗೆ : "ದಾವೀದ ವಂಶದವರಲ್ಲಿಯೂ, ಯೆರೂಸಲೇಮಿನವರಲ್ಲಿಯೂ, ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು" (ಜೆಕ.12:10).*

## ಪ್ರಿಯ ವಾಚಕರೇ, ಚಂದಾ ಹಣವನ್ನು ನವೀಕರಿಸಿದ್ದೀರಾ

ನವಂಬರ್ ತಿಂಗಳ ಅನುದಿನದ ಆಹಾರ ಧ್ಯಾನ ಪತ್ರಿಕೆಯನ್ನು ಬಿಡುಗಡೆ ಮಾಡಲು ಕರ್ತನು ಕೃಪೆ ನೀಡಿರುವನು. ಕರ್ತನು ನೀಡಿರುವ ಭಾರದಲ್ಲಿ ನಾವು ನಂಬಿಗಸ್ಥರಾಗಿ ನಡೆಯುತ್ತಿದ್ದೇವೆ. ಈ ಮೂಲಕ ಅನೇಕರು ಉಜ್ಜೀವಿತಗೊಳ್ಳುತ್ತಿದ್ದಾರೆ.

ಕರ್ತನ ನಾಮದ ಮಹಿಮೆಗಾಗಿ ಉದಾರವಾದ ಕಾಣಿಕೆಗಳನ್ನು ಬಿತ್ತಿ ಸೇವೆಯನ್ನು ಪ್ರೋತ್ಸಾಹಿಸಿರಿ.

ನೀವೂ ಸಹ ಈ ವರ್ಷದಲ್ಲಿ 11 ತಿಂಗಳು ಕಾಲ ಆತ್ಮಿಕವಾಗಿ ಪೋಷಣೆ ಹೊಂದಿರುವಿರಿ. ಆದರೆ ಈ ಸೇವೆಯ ಪೋಷಣೆಯನ್ನು ಮರೆತಿರುವಿರಾ?

**ಒಮ್ಮೆ ನೆನಪಿಸಿಕೊಂಡು ರೂ. 100/- ಚಂದಾ ಹಣವನ್ನು ಇಂದೇ ನವೀಕರಿಸಿರಿ**

ನಿಮ್ಮ ಆಪ್ತರಿಗೆ ಸ್ನೇಹಿತರಿಗೆ ಸಂಬಂಧಿಕರಿಗೆ ಅನುದಿನದ ಆಹಾರ ಸಂಚಿಕೆಯನ್ನು ಪರಿಚಯಿಸಿ


ಅವರ ವಿಳಾಸಗಳನ್ನು ನಮಗೆ ತಿಳಿಸಿರಿ.



## 2019 ಕ್ಯಾಲೆಂಡರ್

- 6 ಪುಟಗಳ ವರ್ಣರಂಜಿತ ಕ್ಯಾಲೆಂಡರ್ 15 x 20 ‖ 18 x 25 ‖ 12 x 23
- ಬುಕ್ ಮಾರ್ಕ್
- ಪಾಕೆಟ್ ಕ್ಯಾಲೆಂಡರ್
- ವಾಗ್ದಾನ - ಆಜ್ಞೆಗಳ ಪ್ರತಿಗಳುಳ್ಳ Box
  (60 Promise + 60 Commandment)
  (100 Promise + 100 Commandment)

ಕನ್ನಡ, ಇಂಗ್ಲೀಷ್ ತಮಿಳು, ತೆಲುಗು ಭಾಷೆಗಳಲ್ಲಿ ಸಿದ್ಧವಾಗಿವೆ.



Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026


# 2019 ಕ್ಯಾಲೆಂಡರ್




ನಿಮ್ಮ ಆಲಯದ ವಿಳಾಸ ಮತ್ತು ಕಾರ್ಯಕ್ರಮಗಳನ್ನು
ಕ್ಯಾಲೆಂಡರ್‌ನಲ್ಲಿ ಮುದ್ರಿಸಿ ಕೊಡಲಾಗುವುದು




ಇವೆಲ್ಲವುಗಳು ಕನ್ನಡ ಇಂಗ್ಲೀಷ್
ತೆಲುಗು ಹಿಂದಿ ಮಲಯಾಳಂ ತಮಿಳ್

**Ph: 080 - 25712448**
**9986 571 571, 9341968008**

*Calendar website:*
**www.gbtcalendar.weebly.com**

***For Calendar Orders, deposit money in***

**Acc Name: GOLDEN BIBLE TEXT**
**SBI Bank: 32614315655 IFSC Code: SBIN0005778**

ಸಂಪರ್ಕಿಸಿರಿ

## Anudhinada Ahara
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
*E-mail:* goldenbibletext@gmail.com


Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047